ಸೋಮವಾರ, ಮೇ 20, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 140 | ಪುಟ 12

● www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮತಗಟ್ಟೆಯತ್ತ... ಐದನೇ ಹಂತದ ಮತದಾನ ನಡೆಯಲಿರುವ ಬಿಹಾರದ ಮುಜಾಫ್ಫರ್‌ಪುರ ಜಿಲ್ಲೆಯಲ್ಲಿ ಚುನಾವಣಾ ಕರ್ತವ್ಯಕ್ಕೆ ತೆರಳಿದ ಮಹಿಳಾ ಪೊಲೀಸರು

ಆಳ-ಅಗಲ
ಶಾಂತಿಪ್ರಿಯ ಕಿರ್ಗಿಸ್ತಾನದಲ್ಲಿ ವಿದೇಶಿ ವಿದ್ಯಾರ್ಥಿಗಳ ಮೇಲೇಕೆ ಹಲ್ಲೆ?

ತೆಲಂಗಾಣ- ಆಂಧ್ರ: ಬಗೆಹರಿಯದ ಸಮಸ್ಯೆ 11

‘ಎಎಪಿ ತುಳಿಯಲು ಆಪರೇಷನ್ ಝಾಡು’ 11

ಯತೀಂದ್ರ ಸಿದ್ದರಾಮಯ್ಯಗೆ ಅವಕಾಶ ಕಲ್ಪಿಸಲು ‘ಕೈ’ ನಾಯಕರ ಒಲವು

ಪರಿಷತ್ ಪ್ರವೇಶಕ್ಕೆ ಭಾರಿ ಪೈಪೋಟಿ 9

Canara Angel
Dream beyond boundaries
ಮಹಿಳೆಯರ ಉಳಿತಾಯದ ಬ್ಯಾಂಕ್ ಖಾತೆ
ನಿಮ್ಮ ಪ್ರೀತಿ ಪಾತ್ರರ ಬಗ್ಗೆ ಕಾಳಜಿ ವಹಿಸಿ
ಕೆನರಾ ಏಂಜಲ್ ಖಾತೆಯನ್ನು ತೆರೆಯಿರಿ, ಅನೇಕ ಪ್ರಯೋಜನಗಳನ್ನು ಪಡೆಯಿರಿ.
ವಿಶೇಷ ವೈಶಿಷ್ಟ್ಯತೆಗಳು
• ರೂ. 10 ಲಕ್ಷಗಳವರೆಗೆ ಕ್ಯಾನ್ಸರ್ ಕೇರ್ ವಿಮೆ
• ರೂ. 26 ಲಕ್ಷಗಳವರೆಗೆ ವೈಯಕ್ತಿಕ ಅಪಘಾತ ವಿಮೆ
ವಿಶಿಷ್ಟವಾದ ವೈಶಿಷ್ಟ್ಯತೆಗಳು
• ಕಾರ್ಡ್ ಆಧಾರಿತ ಉಚಿತ ಆರೋಗ್ಯ ತಪಾಸಣೆ
• ಅರ್ಬನ್ ಕಂಪನಿ, ಮಿಂತ್ರ, ಅಮೇಜಾನ್, ಸ್ವಿಗ್ಗಿ, ಬುಕ್ ಮೈ ಶೋ, ನಂತಹ ಜನಪ್ರಿಯ ಬ್ರಾಂಡ್‌ಗಳಿಂದ ಕಾರ್ಡ್‌ಗೆ ವಿಶೇಷ ಕೊಡುಗೆಗಳು
ಕೊಡುಗೆಗಳ ಮಹಾಪೂರ
ಕೆನರಾ ಬ್ಯಾಂಕ್ केनरा बैंक Canara Bank
A Government of India Undertaking
Together We Can
90760 30001 | www.canarabank.com | 1800 1030

ಕೆರೆಗಳಿಗೆ ಹರಿದ ನೀರು, ಕೆಲವೆಡೆ ತುಂಬಿದ ಬ್ಯಾರೇಜ್‌ಗಳು ● ಗರಿಗೆದರಿದ ಕೃಷಿ ಚಟುವಟಿಕೆ

ಬರದ ಬೇಗೆ ಮರೆಸಿದ ಮಳೆರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರದ ಬೇಗೆಯಿಂದ ಬಸವಳಿದಿದ್ದ ನಾಡಿನ ಹಲವು ಜಿಲ್ಲೆಗಳಲ್ಲಿ ಭಾನುವಾರ ಬಿರುಸಿನ ಮಳೆಯಾಗಿ ಸಂಭ್ರಮ ಮೂಡಿಸಿದೆ. ರಾಜಧಾನಿ ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಚಿಕ್ಕಮಗಳೂರು, ಬೆಳಗಾವಿ, ಮೈಸೂರು, ಹಾಸನ, ಶಿವಮೊಗ್ಗ ಸೇರಿದಂತೆ ಹಲವೆಡೆ ಮಳೆ ಬಿದ್ದಿದೆ.

ಮುಂಗಾರು ಹಂಗಾಮಿನ ಕೃಷಿಗೆ ಭೂಮಿ ಹದಗೊಳಿಸುವುದಕ್ಕೆ ಈ ಮಳೆ ಸಹಕಾರಿಯಾಗಿದ್ದು ಕೃಷಿ ಚಟುವಟಿಕೆಗಳು ಗರಿಗೆದರಿವೆ. ಹಲವು ಕೆರೆಗಳಿಗೆ ನೀರು ಹರಿಯುವುದನ್ನು ಕಂಡು ರೈತರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಮಹದೇಶ್ವರ ಬೆಟ್ಟದಲ್ಲಿ ಮಧ್ಯಾಹ್ನ 2 ಗಂಟೆಗೂ ಹೆಚ್ಚು ಅವಧಿಗೆ, ಕೊಳ್ಳೇಗಾಲದಲ್ಲಿ 45 ನಿಮಿಷಗಳಿಗೂ ಹೆಚ್ಚು ಹೊತ್ತು ಮಳೆ ಸುರಿದಿದೆ. ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಶನಿವಾರ ರಾತ್ರಿಯಿಂದ ಭಾನುವಾರ ಬೆಳಗಿನ ಜಾವದವರೆಗೆ ಧಾರಾಕಾರ ಮಳೆಯಾಗಿದೆ. ಚನ್ನಗಿರಿ ಬಳಿಯ ಜೋಳದಹಾಳ್ ಗ್ರಾಮದ ಕೆರೆ ಕೋಡಿ ಬಿದ್ದಿದೆ.

ವಿಜಯಪುರ, ಹೊಸಪೇಟೆ, ಬಳ್ಳಾರಿ, ಉತ್ತರ ಕನ್ನಡ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ರಭಸದ ಮಳೆಯಾಗಿದ್ದು ಬಿರು ಬಿಸಿಲಿನ ವಾತಾವರಣ ತಗ್ಗಿದೆ. ಚಿತ್ರದುರ್ಗ ಜಿಲ್ಲೆಯ ಕೆಲ್ಲೋಡು ಬಳಿ ವೇದಾವತಿ ಬ್ಯಾರೇಜ್ ತುಂಬಿ ಹರಿದಿದೆ. ಹಲವೆಡೆ ಜಲಪಾತಗಳು ಮೈದುಂಬಿವೆ.



ಬಾಗಲಕೋಟೆಯ ಗುಳೇದಗುಡ್ಡ ತಾಲ್ಲೂಕಿನ ಕೋಟೆಕಲ್ ಗ್ರಾಮದ ದಿಡಗಿನ ಹಳ್ಳದ ಜಲಪಾತ ಇತ್ತೀಚಿನ ಮಳೆಯಿಂದಾಗಿ ಮೈದುಂಬಿದ್ದು ಪ್ರವಾಸಿಗರನ್ನು ಸೆಳೆಯುತ್ತಿದೆ –ಪ್ರಜಾವಾಣಿ ಚಿತ್ರ

‘5 ದಿನ ಮಳೆ’

ರಾಜ್ಯದಲ್ಲಿ ಇದೇ 20ರಿಂದ ಐದು ದಿನ ಕರಾವಳಿ, ದಕ್ಷಿಣ ಹಾಗೂ ಉತ್ತರ ಒಳನಾಡು ಜಿಲ್ಲೆಗಳ ಅಲ್ಲಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ. ಹಲವು ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ಘೋಷಿಸಿದೆ.

ಇದೇ 20ರಂದು ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಕೊಡಗು, ಚಾಮರಾಜನಗರ, ಮೈಸೂರು ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ಘೋಷಿಸಿದ್ದರೆ, ಅದೇ ದಿನ ಉತ್ತರ ಕನ್ನಡ, ಹಾವೇರಿ, ಮಂಡ್ಯ, ರಾಮನಗರ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಸೂಚನೆ ನೀಡಲಾಗಿದೆ. 21ರಂದು ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳಿಗೆ ‘ಆರೆಂಜ್’ ಹಾಗೂ ಉತ್ತರ ಕನ್ನಡ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಸೂಚನೆ ನೀಡಲಾಗಿದೆ.

9ನೇ ಪುಟ ನೋಡಿ

31ಕ್ಕೆ ಮುಂಗಾರು ಪ್ರವೇಶ

ನೈರುತ್ಯ ಮುಂಗಾರು ದಕ್ಷಿಣ ಭಾಗದ ನಿಕೋಬಾರ್ ದ್ವೀಪಗಳಿಂದ ಭಾನುವಾರ ಆರಂಭವಾಗಿದ್ದು, ಮೇ 31ರೊಳಗೆ ಕೇರಳ ರಾಜ್ಯವನ್ನು ಪ್ರವೇಶಿಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ಇನ್ನಷ್ಟು ಸುದ್ದಿಗಳು 9

ಕೇರಳದಲ್ಲಿ ಎಚ್ಚರಿಕೆ

ಕೇರಳದ ಹಲವು ಭಾಗಗಳಲ್ಲಿ ಶನಿವಾರ ರಾತ್ರಿಯಿಂದಲೇ ಭಾರಿ ಮಳೆಯಾಗುತ್ತಿದ್ದು, ಗುಡ್ಡಗಾಡು ಮತ್ತು ಕರಾವಳಿ ಪ್ರದೇಶಗಳ ಜನರಿಗೆ ಹೆಚ್ಚು ಜಾಗರೂಕವಾಗಿರುವಂತೆ ಅಧಿಕಾರಿಗಳು ಭಾನುವಾರ ಸೂಚನೆ ನೀಡಿದ್ದಾರೆ.

ಹಂತ ಐದು: ಮತದಾನ ಇಂದು

ಪ್ರಜಾವಾಣಿ ವಾರ್ತೆ

ಕಣ ಚಿತ್ರಣ			
49 ಕ್ಷೇತ್ರಗಳು	695 ಅಭ್ಯರ್ಥಿಗಳು	82 ಮಹಿಳಾ ಅಭ್ಯರ್ಥಿಗಳು	8.95 ಕೋಟಿ ಒಟ್ಟು ಮತದಾರರು
4.69 ಕೋಟಿ ಪುರುಷ ಮತದಾರರು	4.28 ಕೋಟಿ ಮಹಿಳಾ ಮತದಾರರು		
5,409 ಲಿಂಗತ್ವ ಅಲ್ಪಸಂಖ್ಯಾತರು	94,732 ಮತಗಟ್ಟೆಗಳು	9.47 ಲಕ್ಷ ಮತಗಟ್ಟೆ ಸಿಬ್ಬಂದಿ	

ನವದೆಹಲಿ: ಲೋಕಸಭಾ ಚುನಾವಣೆಯ ಐದನೇ ಹಂತದ ಮತದಾನ ಸೋಮವಾರ ನಡೆಯಲಿದ್ದು, ಎಂಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಒಟ್ಟು 49 ಕ್ಷೇತ್ರಗಳ ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಕುತೂಹಲ ಕೆರಳಿಸಿರುವ ಉತ್ತರ ಪ್ರದೇಶದ ರಾಯ್‌ಬರೇಲಿ, ಅಮೇಠಿ ಕ್ಷೇತ್ರಗಳಲ್ಲೂ ಮತದಾನಕ್ಕೆ ಅಖಾಡ ಸಿದ್ಧವಾಗಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ (ರಾಯ್‌ಬರೇಲಿ), ಬಿಜೆಪಿಯ ಸ್ಮೃತಿ ಇರಾನಿ (ಅಮೇಠಿ), ಕೇಂದ್ರ ಸಚಿವರಾದ ರಾಜನಾಥ್ ಸಿಂಗ್ (ಲಖನೌ) ಮತ್ತು ಪೀಯೂಷ್ ಗೋಯಲ್ (ಮುಂಬೈ ಉತ್ತರ), ಒಮರ್ ಅಬ್ದುಲ್ಲಾ (ಬಾರಾಮುಲ್ಲಾ) ಹಾಗೂ ಆರ್‌ಜೆಡಿಯ ರೋಹಿಣಿ ಆಚಾರ್ಯ (ಸಾರಣ್) ಅವರು ಕಣದಲ್ಲಿರುವ ಪ್ರಮುಖರು.

ಐದನೇ ಹಂತದಲ್ಲಿ ಬಿಹಾರ, ಜಮ್ಮು ಮತ್ತು ಕಾಶ್ಮೀರ, ಲಡಾಖ್, ಜಾರ್ಖಂಡ್, ಮಹಾರಾಷ್ಟ್ರ, ಒಡಿಶಾ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಮತದಾನ ನಡೆಯಲಿದೆ. ಲೋಕಸಭಾ ಚುನಾವಣೆ ಜತೆಯಲ್ಲೇ ಒಡಿಶಾದ 35 ವಿಧಾನಸಭಾ ಕ್ಷೇತ್ರಗಳಲ್ಲೂ ಮತದಾನ ನಡೆಯಲಿದ್ದು, ಬಿಜೆಡಿ ಅಧ್ಯಕ್ಷರೂ ಆಗಿರುವ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಕಣದಲ್ಲಿದ್ದಾರೆ.

ನಾಲ್ಕನೇ ಹಂತದ ಮತದಾನದ ಬಳಿಕವೂ ಪ್ರಚಾರದ ಕಣದಲ್ಲಿ ಬಿಜೆಪಿ ಮತ್ತು ‘ಇಂಡಿಯಾ’ ಒಕ್ಕೂಟದ ಮಧ್ಯೆ ಪರಸ್ಪರ ಆರೋಪ, ವಾಗ್ದಾಳಿ ನಡೆದಿದ್ದವು. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಅಯೋಧ್ಯೆ ರಾಮ ಮಂದಿರದ ಮೇಲೆ ಬುಲ್ಡೋಜರ್ ಹರಿಸಲಿದೆ ಎಂದು ಪ್ರಧಾನಿ ಮೋದಿ ಹೇಳಿದ್ದರು. ಇದರ ವಿರುದ್ಧ ಕಾಂಗ್ರೆಸ್, ಚುನಾವಣಾ ಆಯೋಗಕ್ಕೆ ದೂರು ನೀಡಿತ್ತು.

ಇನ್ನಷ್ಟು ಸುದ್ದಿಗಳು 8

ಶೀಲ ಶಂಕಿಸುವ ಆತಂಕ : ತೊಳಲಾಟದಲ್ಲಿ ಮಹಿಳಾ ಸಿಬ್ಬಂದಿ

ದೀರ್ಘ ರಜೆ ಪಡೆಯಲು ಹಿಂಜರಿಕೆ

● ಸಂಧ್ಯಾ ಹೆಗಡೆ

ಹಾಸನ: ಇಲ್ಲಿನ ಸರ್ಕಾರಿ ಕಚೇರಿಗಳಲ್ಲೀಗ ಮಹಿಳಾ ಸಿಬ್ಬಂದಿಗೆ ಸುದೀರ್ಘ ರಜೆ ಪಡೆಯಲು ಹಿಂಜರಿಕೆ. ಅನುಮಾನದ ವರ್ತುಲದಲ್ಲಿ ತಮ್ಮನ್ನೂ ಸೇರಿಸಿ ಬಿಡಬಹುದೆಂಬ ಅವ್ಯಕ್ತ ಭಯ ಅವರನ್ನು ಬೆಂಬಿಡದೆ ಕಾಡುತ್ತಿದೆ.

ಜಿಲ್ಲೆಯಲ್ಲಿ ನಡೆದಿರುವ ಲೈಂಗಿಕ ದೌರ್ಜನ್ಯ ಮತ್ತು ಪೆನ್‌ಡ್ರೈವ್ ಹಂಚಿಕೆ ಪ್ರಕರಣ, ನಂತರದ ಬೆಳವಣಿಗೆಗಳಿಂದ ಸರ್ಕಾರಿ ಮಹಿಳಾ ಉದ್ಯೋಗಿಗಳು ಕುಹಕದ ಮಾತುಗಳಿಗೆ ಬಲಿಪಶುಗಳಾಗುತ್ತಿದ್ದಾರೆ. ‘ಬಾಗಲಕೋಟೆಯಿಂದ ಮೊನ್ನೆ ಹಳೆಯ ಸಹೋದ್ಯೋಗಿಯೊಬ್ಬರು ಕಾಲ್ ಮಾಡಿ ನಿಮ್ಮ ಆಫೀಸಿನ ಮಹಿಳೆಯ ಚಿತ್ರ ಪೆನ್‌ಡ್ರೈವ್‌ನಲ್ಲಿ ಓಡಾಡಿದೆಯಂತೆ ಎಂದು ಪ್ರಶ್ನಾರ್ಥಕವಾಗಿ ಮಾತನಾಡಿದಾಗ, ಆತ ನನ್ನನ್ನೇ ಉದ್ದೇಶಿಸಿ ಕೇಳಿದ್ದು ಎಂದು ತಕ್ಷಣಕ್ಕೆ ಹೊಳೆಯಲಿಲ್ಲ. ಪೆನ್‌ಡ್ರೈವ್ ಹಂಚಿಕೆ ಪ್ರಕರಣ ಸ್ತ್ರೀ ಸಮುದಾಯದ ಶೀಲ ಶಂಕಿಸುವ ಮಟ್ಟಕ್ಕೆ ತಲ್ಲಣ ಸೃಷ್ಟಿಸಿದೆ’ ಎಂದು ಸರ್ಕಾರಿ ಇಲಾಖೆಯ ಎಂಜಿನಿಯರ್ ಒಬ್ಬರು ಬೇಸರಿಸಿದರು.

9ನೇ ಪುಟ ನೋಡಿ

ಸಂತ್ರಸ್ತೆಯರ ಸಂಕಟ

ಊರು ತೊರೆದರು...

ಮಳೆ ಬಂದು ಹಾಸನದ ಇಳೆ ತಣ್ಣಗಾಗಿದೆ. ಆದರೆ, ಇಲ್ಲಿನ ಜನರ ಅದರಲ್ಲೂ ವಿಶೇಷವಾಗಿ ಮಹಿಳೆಯರ ಎದೆಯಲ್ಲಿ ‘ಪೆನ್‌ಡ್ರೈವ್’ ಎಂಬ ಭಯದ ಎಸರು ಕುದಿಯುತ್ತಿದೆ. ಹೊಳೆನರಸೀಪುರದಲ್ಲಿದ್ದ 20ಕ್ಕೂ ಹೆಚ್ಚು ಜನರು (ಕೆಲವರು ಕುಟುಂಬ ಸಮೇತರಾಗಿ) ಊರು ತೊರೆದಿದ್ದಾರೆ. ಮನೆ ಗೇಟ್‌ವೊಂದಕ್ಕೆ ‘ಮನೆ ಮಾರಾಟಕ್ಕಿದೆ’ ಎಂಬ ಫಲಕ ಹಾಕಲಾಗಿದೆ. ಯಾವುದೇ ಮಹಿಳೆಯ ಚಿತ್ರವನ್ನು ಮಸುಕು ಮಾಡದೆ ಅಶ್ಲೀಲವಾಗಿ ಪೆನ್‌ಡ್ರೈವ್‌ನಲ್ಲಿ ಹರಿಯಬಿಡಲಾಗಿದೆ. ಆಕೆಯ ಖಾಸಗಿತನಕ್ಕೆ ಧಕ್ಕೆಯಾಗಿದ್ದು, ಶ್ರೀಮಂತ ಕುಟುಂಬದ ಒಬ್ಬರು ಮಹಿಳೆ ವಿಷ ಸೇವಿಸಿ, ಚಿಕಿತ್ಸೆ ಪಡೆದು ಚೇತರಿಸಿಕೊಳ್ಳುತ್ತಿರುವ ಸಂಗತಿ ಈಗ ನಿಧಾನಕ್ಕೆ ಬಹಿರಂಗಗೊಳ್ಳುತ್ತಿದೆ.

9ನೇ ಪುಟ ನೋಡಿ

8 Layer PLASTO TANK
10 YEARS GUARANTEE
ಕುಡಿಯುವ ನೀರಿಗಾಗಿ ಸುರಕ್ಷಿತ
7767000185, 7420022293

‘ಕೈ’ ಸರ್ಕಾರಕ್ಕೆ ವರ್ಷದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಸೋಮವಾರ (ಮೇ 20) ವರ್ಷ ಪೂರೈಸಲಿದೆ.

ಹೆಚ್ಚುವರಿ ಆರ್ಥಿಕ ಸಂಪನ್ಮೂಲಗಳ ಸಂಗ್ರಹದ ಸವಾಲಿನ ಮಧ್ಯೆಯೇ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿರುವ ‘ಕೈ’ ಸರ್ಕಾರ, ಅದರ ಪ್ರಭಾವವನ್ನು ಲೋಕಸಭಾ ಚುನಾವಣೆಯ ಫಲಿತಾಂಶದಲ್ಲಿ ಕಾಣಲು ಕಾತರದಿಂದ ಕಾಯುತ್ತಿದೆ.

9ನೇ ಪುಟ ನೋಡಿ

ಬೆಂಬಿಡದ ‘ಕಮಿಷನ್’ ಭೂತ!

ಬಿಜೆಪಿ ನೇತೃತ್ವದ ಸರ್ಕಾರ ಹಿಂದೆ ಇದ್ದಾಗ ಶೇಕಡ 40ರಷ್ಟು ಕಮಿಷನ್ ಆರೋಪ ಜೋರಾಗಿ ಸದ್ದು ಮಾಡಿತ್ತು. ಕೈ ಸರ್ಕಾರವನ್ನೂ ಈ ‘ಕಮಿಷನ್’ ಭೂತ ಬಿಟ್ಟಿಲ್ಲ. ವಿವಿಧ ಇಲಾಖೆಗಳಲ್ಲಿ ಗುತ್ತಿಗೆದಾರರಿಗೆ ಬಿಲ್ ಪಾವತಿಗೆ ಭಾರಿ ಮೊತ್ತದ ಕಮಿಷನ್‌ಗೆ ಬೇಡಿಕೆ ಇಡಲಾಗುತ್ತಿದೆ ಎಂಬ ಆರೋಪ ಕೇಳಿಬರುತ್ತಲೇ ಇದೆ.

9ನೇ ಪುಟ ನೋಡಿ

CHANAKYA UNIVERSITY
Rooted in ideals • Ascending with ideas
Established under The Chanakya University Act 2021 (Karnataka Act No. 37 of 2021)
Recognized by the University Grants Commission (UGC), New Delhi.
Approved by AICTE, New Delhi
Approved by Bar Council of India, New Delhi
chanakyauniversity.edu.in
Devanahalli Bengaluru

School of Law, Governance and Public Policy

B.A., LL.B (Hons.) | B.B.A., LL.B (Hons.) | LL.M (Corporate & Commercial Law) | M.A. Public Policy

Admissions Open

The Chanakya Edge
- State-of-the-art Moot Court for enhanced Experiential Learning
- Diverse Legal Electives with multi-disciplinary courses
- Network and connect with Legal Professionals
- Robust Institute – Industry Interface
- Special courses in contemporary legal issues rooted in Indian Knowledge Systems
- Value Added Programs in Life skills and soft skills for enabling pathways for the legal profession

Programmes Offered

School of Arts, Humanities and Social Sciences
- B.A. Civil Services Integrated
- B.A. (Hons.), B.A. (Hons.) Liberal Studies
- M.A., M.Sc. Psychology
- M.S.W.

School of Mathematics and Natural Science
- B.Sc. (Hons.) (Physics, Mathematics, Chemistry)
- M.Sc. Data Science

School of Law, Governance and Public Policy
- B.A., LL.B. (Hons.)
- B.B.A., LL.B. (Hons.)
- LL.M.
- M.A. Public Policy

Chanakya Fellowship in Social Sciences
1 year residential PG Diploma in social sciences

School of Commerce and Management
- B.Com. (Hons.) (Accounting & Taxation, Fintech)
- B.B.A. (Hons.)
- M.B.A.

School of Engineering
- B.Tech: CSE, CSE-AI, EECS, ME (Aerospace), CV (Sustainability), E-VLSI
- B.C.A. (Hons.)
- M.C.A.

School of Bio-Sciences
- PG Diploma in Bioinformatics & Synthetic Biology

*Doctoral Programmes Across all Streams

For Admissions Contact +91 8550 8550 92 / 94
admissions@chanakyauniversity.edu.in

ವಯೋಮಿತಿ ಸಡಿಲಿಕೆ ನೇಮಕಾತಿಗಳಲ್ಲೇ ತಾರತಮ್ಯ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕೋವಿಡ್ ನಂತರ ಹೊರಡಿಸುವ ನೇಮಕಾತಿ ಅಧಿಸೂಚನೆಗಳಲ್ಲಿ ಒಂದು ಬಾರಿಗೆ ಅನ್ವಯವಾಗುವಂತೆ ವಯೋಮಿತಿ ಸಡಿಲಿಕೆ ಮಾಡುವುದಾಗಿ ಸರ್ಕಾರ ಭರವಸೆ ನೀಡಿದ್ದರೂ, ವಿನಾಯಿತಿ ದೊರಕದೆ ಉದ್ಯೋಗಾಕಾಂಕ್ಷಿಗಳು ಅವಕಾಶ ವಂಚಿತರಾಗಿದ್ದಾರೆ.

ಕರ್ನಾಟಕ ಲೋಕಸೇವಾ ಆಯೋಗ ಹೊರಡಿಸಿದ 384 ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ನೇಮಕಾತಿ ಹಾಗೂ ಕರ್ನಾಟಕ ವಿಧಾನ ಪರಿಷತ್ ಸಚಿವಾಲಯದಲ್ಲಿ ಖಾಲಿ ಇರುವ 35 ವಿವಿಧ ಹುದ್ದೆಗಳ ಭರ್ತಿಗೆ ಹೊರಡಿಸಿದ ಅಧಿಸೂಚನೆಗಳಿಗೆ ಮಾತ್ರ ವಯೋಮಿತಿ ಸಡಿಲಿಕೆ ಮಾಡಲಾಗಿದೆ. ಈ ಎರಡು ನೇಮಕಾತಿಗಳಲ್ಲಿ ಗರಿಷ್ಠ ವಯೋಮಿತಿಯನ್ನು ಮೂರು ವರ್ಷ ಹೆಚ್ಚಿಸಲಾಗಿದೆ. ಆದರೆ, ಕೋವಿಡ್ ನಂತರ ಮೊದಲ ಬಾರಿ ಅಧಿಸೂಚನೆ ಹೊರಡಿಸಿರುವ ಇತರೆ ಯಾವುದೇ ಇಲಾಖೆ, ನಿಗಮ-ಮಂಡಳಿಗಳ ನೇಮಕಾತಿಗೂ ವಯೋಮಿತಿ ಸಡಿಲಿಕೆ ಮಾಡಿಲ್ಲ. ವಿವಿಧ ನೇಮಕಾತಿಗಳ ನಡುವಿನ ಇಂತಹ ತಾರತಮ್ಯ ಟೀಕೆಗೆ ಒಳಗಾಗಿದೆ.

ಕೋವಿಡ್ ಸಮಯದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದರಿಂದ ವೈದ್ಯಕೀಯ ಮತ್ತಿತರ ತುರ್ತು ಸೇವೆಗಳನ್ನು ಹೊರತುಪಡಿಸಿ ಬೇರೆ ಯಾವ ನೇಮಕಾತಿಗಳನ್ನೂ ಮಾಡಿಕೊಳ್ಳದಂತೆ ಆರ್ಥಿಕ ಇಲಾಖೆ ಸುತ್ತೋಲೆ ಹೊರಡಿಸಿತ್ತು. ಹಾಗಾಗಿ, 2020 ಹಾಗೂ 2021ರಲ್ಲಿ ನೇಮಕಾತಿ ಪ್ರಕ್ರಿಯೆಗಳು ಸಂಪೂರ್ಣ ಸ್ಥಗಿತವಾಗಿದ್ದವು.

> **ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಗರಿಷ್ಠ ವಯೋಮಿತಿಯನ್ನು ಮೂರು ವರ್ಷ ಹೆಚ್ಚಿಸಲು ನಿರ್ದೇಶನ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೋರಲಾಗಿದೆ**
>
> **ಸತೀಶ ಜಾರಕಿಹೊಳಿ**
> ಲೋಕೋಪಯೋಗಿ ಸಚಿವ

11 ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಇರಾನ್ ಅಧ್ಯಕ್ಷರಿದ್ದ ಹೆಲಿಕಾಪ್ಟರ್ ಅಪಘಾತ

ಟೆಹ್ರಾನ್ (ಎಎಫ್‌ಪಿ): ಇರಾನ್‌ನ ಅಧ್ಯಕ್ಷ ಇಬ್ರಾಹಿಂ ರೈಸಿ ಅವರಿದ್ದ ಹೆಲಿಕಾಪ್ಟರ್ ಭಾನುವಾರ ಅಜರ್‌ಬೈಜಾನ್ ಪ್ರಾಂತ್ಯದ ಗಡಿಯ ಪರ್ವತ ಪ್ರದೇಶಗಳ ವ್ಯಾಪ್ತಿಯಲ್ಲಿ ಅಪಘಾತಕ್ಕೆ ಈಡಾಗಿದ್ದು, ಅದರ ನೆಲೆ ಪತ್ತೆಯಾಗಿಲ್ಲ.



ಇಬ್ರಾಹಿಂ ರೈಸಿ

‘ಅಪಘಾತಕ್ಕೂ ಮುನ್ನ ನಿಯಂತ್ರಣ ಘಟಕದ ಸಂಪರ್ಕವನ್ನು ಹೆಲಿಕಾಪ್ಟರ್ ಕಡಿದುಕೊಂಡಿದ್ದು, ಅನಿಯಂತ್ರಿತ ರೀತಿಯಲ್ಲಿ ಭೂಸ್ಪರ್ಶ ಮಾಡಿದೆ’ ಎಂದು ಇರಾನ್‌ನ ಮಾಧ್ಯಮ ವರದಿ ಮಾಡಿದೆ.

4ನೇ ಪುಟ ನೋಡಿ

ADVERTORIAL

ಮಂಡಿನೋವಿಗೆ ಪುನರುತ್ಪಾದಕ ಚಿಕಿತ್ಸೆ

9000ಕ್ಕೂ ಹೆಚ್ಚು ಮಂದಿಗೆ ನೋವು ಮುಕ್ತ ಜೀವನವನ್ನು ಅಲಿವಿಯೇಟ್ ನೀಡಿದೆ

ಮೊಣಕಾಲಿನ ಸಂಧಿವಾತವು ದೈಹಿಕವಾಗಿ ಮತ್ತು ಭಾವನಾತ್ಮಕವಾಗಿ ಕಷ್ಟಕರವಾದ ಸಮಸ್ಯೆಯಾಗಿದ್ದು, ಇದು ಚಲನೆಯನ್ನು ಮಿತಿಗೊಳಿಸುತ್ತದೆ ಮತ್ತು ಭಾವನಾತ್ಮಕವಾಗಿ ಪರಿಣಾಮ ಬೀರುತ್ತದೆ. ಮೊಣಕಾಲಿನ ಸಂಧಿವಾತದಿಂದ ಬಳಲುತ್ತಿರುವ ಬಹಳಷ್ಟು ಜನರು ಸಾಮಾನ್ಯವಾಗಿ ಹಲವಾರು ವರ್ಷಗಳವರೆಗೆ ವಿವಿಧ ಚಿಕಿತ್ಸೆಯನ್ನು ಪ್ರಯತ್ನಿಸುತ್ತಾರೆ, ಪರಿಹಾರವನ್ನು ಕಂಡುಕೊಳ್ಳಲು ಆಶಿಸುತ್ತಾರೆ, ಆದರೆ ಯಶಸ್ಸು ಅಸ್ಪಷ್ಟವಾಗಿರುತ್ತದೆ. “ಕೆಲವು ತೀವ್ರತರವಾದ ಪ್ರಕರಣಗಳಿಗೆ ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆಯ ಅಗತ್ಯವಿದ್ದರೂ ಸಹ, ಹೆಚ್ಚಿನ ಸಂದರ್ಭಗಳಲ್ಲಿ ಅಲಿವಿಯೇಟ್ ನಲ್ಲಿ ನೀಡುವ ಆಧುನಿಕ, ನೋವುರಹಿತ ವಿಧಾನಗಳ ಮೂಲಕ ಶಸ್ತ್ರಚಿಕಿತ್ಸೆಯೇ ಇಲ್ಲದೆ ನೋವನ್ನು ಉಪಶಮಿಸ-ಲಾಗುವುದು” ಎಂದು ವಿಶ್ವಾಸದಿಂದ ಹೇಳುತ್ತಾರೆ ಅಲಿವಿಯೇಟ್ ಪೇನ್ ಮ್ಯಾನೇಜ್ಮೆಂಟ್ ಕ್ಲಿನಿಕ್ ನ ನೋವು ತಜ್ಞರಾದ ಡಾ. ಸ್ವಾಗತೇಶ್ ಬಸ್ತಿಯಾ.

ಮೊಣಕಾಲಿನ ಸಂಧಿವಾತದ ವಿಷಯದಲ್ಲಿ, ಪುನರುತ್ಪಾದಕ ಚಿಕಿತ್ಸೆ (ಪ್ರೊಲೊಥೆರಪಿ, ಪಿಆರ್‌ಪಿ, ಸ್ಟೆಮ್ ಸೆಲ್ ಥೆರಪಿ) ಮೊಣಕಾಲಿನ ಹಾನಿಗೊಳಗಾದ ಅಂಗಾಂಶಗಳನ್ನು ಪುನರುಜ್ಜೀವನಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಪುನರುತ್ಪಾದಕ ಚಿಕಿತ್ಸೆ ಏಕೆ ಆಯ್ಕೆ ಮಾಡುವುದು?
- 30 ನಿಮಿಷದ ವಿಧಾನ
- ಆಸ್ಪತ್ರೆ ವಾಸವಿಲ್ಲ
- 48 ಗಂಟೆಗಳಲ್ಲಿ ನಿಮ್ಮ ಕೆಲಸಕ್ಕೆ ತೆರಳಬಹುದು

1. ಪ್ರೋಲೋಥೆರಪಿ ಚಿಕಿತ್ಸೆ : ಪ್ರೋಲೋಥೆರಪಿ – ಶಸ್ತ್ರಚಿಕಿತ್ಸೆಯಿಲ್ಲದೆ ಮಾಡಲಾಗುವ ಒಂದು ಚಿಕಿತ್ಸಾ ವಿಧಾನವಾಗಿದ್ದು, ಮೊಣಕಾಲಿನೊಳಗೆ ಸಣ್ಣ ಪ್ರಮಾಣದ ಉದ್ರೇಕಕಾರಿ ದ್ರಾವಣವನ್ನು (ಡೆಕ್ಸ್ಟ್ರೋಸ್) ಇಂಜೆಕ್ಷನ್ ಮೂಲಕ ಮೊಣಕಾಲಿನೊಳಗೆ ಚುಚ್ಚಲಾಗುತ್ತದೆ. ಇದು ಮೃದುವಾದ ಸಂಯೋಜಕ ಮಂಡಿಯಲ್ಲಿ ಹಾನಿಗೊಳಗಾದ ಅಂಗಾಂಶವನ್ನು ಪುನರ್ನಿರ್ಮಿಸಲು ಸಹಾಯ ಮಾಡುತ್ತದೆ. ಈ ಪ್ರಕ್ರಿಯೆಯು ನೋವನ್ನು ನಿವಾರಿಸುತ್ತದೆ ಮತ್ತು ಮೊಣಕಾಲಿನ ಕಾರ್ಯ ನಿರ್ವಹಣೆಯನ್ನು ಸುಧಾರಿಸುತ್ತದೆ.

2. ಪ್ಲೇಟ್ಲೆಟ್–ರಿಚ್ ಪ್ಲಾಸ್ಮಾ ಚಿಕಿತ್ಸೆ : ಮೊಣಕಾಲಿನ ನೋವಿಗೆ ಪಿ.ಆರ್.ಪಿ ಚಿಕಿತ್ಸೆಯು ಮೊಣಕಾಲಿನ ಪೀಡಿತ ಪ್ರದೇಶದಲ್ಲಿ ಗುಣಪಡಿಸುವಿಕೆಯನ್ನು ಉತ್ತೇಜಿಸಲು ನಿಮ್ಮ ಸ್ವಂತ ರಕ್ತದ ಘಟಕಗಳನ್ನು ಬಳಸುವುದನ್ನು ಒಳಗೊಂಡಿರುತ್ತದೆ. ಇದು ನೈಸರ್ಗಿಕ ರೀತಿಯಲ್ಲಿ ನೋವು ಮತ್ತು ಉರಿಯೂತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ನೀವು ಅಸ್ಥಿಸಂಧಿವಾತದಿಂದ ಬಳಲುತ್ತಿರುವ ರೋಗಿಗಳಲ್ಲಿ ಒಬ್ಬರಾಗಿದ್ದರೆ, ಚಿಂತಿಸಬೇಡಿ. ಕೂಡಲೇ ಕೆಳಗಿನ ಸಂಖ್ಯೆಗಳಿಗೆ ಕರೆ ಮಾಡಿ ಮತ್ತು ಅಪಾಯಿಂಟ್ಮೆಂಟ್ ತೆಗೆದುಕೊಳ್ಳಿ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಕೂಡ ಅಲಿವಿಯೇಟ್‌ನಲ್ಲಿ ಪರಿಣಾಮಕಾರಿ ಚಿಕಿತ್ಸೆ.

ಅಲಿವಿಯೇಟ್

ಕ್ಲಿನಿಕ್ಕುಗಳು ಬೆಂಗಳೂರಿನಲ್ಲಿ ಇಲ್ಲಿವೆ:
ಪೀಣ್ಯಾ ದಾಸರಹಳ್ಳಿ
ಸದಾಶಿವನಗರ
ವೈಟ್‌ಫೀಲ್ಡ್
ಜಯನಗರ
ಇಂದಿರಾನಗರ

CALL NOW 81475 50855 080 23614888

ಬ್ಯಾಗ್‌ನಲ್ಲಿ ಬಾಂಬ್ ಇದೆ ಎಂದ ಪ್ರಯಾಣಿಕ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2ರಲ್ಲಿ ಭಾನುವಾರ ಚೆಕ್ ಇನ್ ಮಾಡುತ್ತಿದ್ದ ವೇಳೆ ಪ್ರಯಾಣಿಕನೊಬ್ಬ ತನ್ನ ಬ್ಯಾಗ್‌ನಲ್ಲಿ ಬಾಂಬ್ ಇದೆ ಎಂದು ಹುಚ್ಚಾಟ ಮಾಡಿದ್ದಾನೆ.

ಇದರಿಂದ ಚೆಕ್ ಇನ್‌ನಲ್ಲಿದ್ದ ಸಿಬ್ಬಂದಿ ಕಕ್ಕಾಬಿಕ್ಕಿಯಾಗಿದ್ದಾರೆ. ಸುದ್ದಿ ಹರಡುತ್ತಲೇ ಕೆಲ ಹೊತ್ತು ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಬ್ಯಾಗ್ ತಪಾಸಣೆ ನಂತರ ಬಾಂಬ್ ಬೆದರಿಕೆ ಸುಳ್ಳು ಎಂದು ಗೊತ್ತಾದ ನಂತರ ಎಲ್ಲರೂ ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಪುಣೆಗೆ ಹೊರಟಿದ್ದ ಹರಿಯಾಣದ ರಾಜೇಶ್ ಕುಮಾರ್ ಎಂಬಾತ ಟರ್ಮಿನಲ್-2ರಲ್ಲಿ ಚೆಕ್ ಇನ್ ವೇಳೆ ತನ್ನ ಬ್ಯಾಗ್‌ನಲ್ಲಿ ಬಾಂಬ್ ಇದೆ ಎಂದು ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಹೇಳಿದ್ದಾರೆ.

ಇದರಿಂದ ಆತಂಕಗೊಂಡ ಅಧಿಕಾರಿಗಳು ಹಾಗೂ ಸಿಬ್ಬಂದಿ ಆತನ ಬ್ಯಾಗ್ ಪರಿಶೀಲಿಸಿದ್ದಾರೆ. ಬ್ಯಾಗ್‌ನಲ್ಲಿ ಏನೂ ಕಂಡು ಬರಲಿಲ್ಲ. ನಂತರ ಪ್ರಯಾಣಿಕನನ್ನು ವಿಮಾನ ನಿಲ್ದಾಣ ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ.

'ಬ್ಯಾಗ್‌ನಲ್ಲಿ ಬಾಂಬ್ ಇದೆ ಎಂದು ತಮಾಷೆ ಮಾಡಿದೆ' ಎಂದು ರಾಜೇಶ್ ವಿಚಾರಣೆ ವೇಳೆ ಹೇಳಿದ್ದಾನೆ. ಠಾಣಾ ಜಾಮೀನಿನ ಮೇಲೆ ಬಿಟ್ಟು ಕಳಿಸಲಾಗಿದೆ.

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

"ಕೃಷಿಕರ ಜೀವನೋಪಾಯ ಸುಧಾರಿಸುವ ನಿಟ್ಟಿನಲ್ಲಿ, ನಾನ್ ಡಿಸ್ಕ್ರಿಪ್ಟ್ ತಳಿಗಳಲ್ಲಿ ಆನುವಂಶಿಕ ಗುಣಮಟ್ಟ ಹೆಚ್ಚಿಸಲು ಕುರಿಗಳ ಮತ್ತು ಮೇಕೆಗಳ ಭ್ರೂಣಗಳು ಹಾಗೂ ವೀರ್ಯಾಣುವಿನ ಕ್ರೈರೊಪ್ರಿಸರ್ವೇಶನ್" ಎಂಬ ರಾಷ್ಟ್ರೀಯ ಜಾನುವಾರು ಮಿಷನ್ ಅಡಿಯಲ್ಲಿನ ಒಂದು ಸೀನಿಯರ್ ರಿಸರ್ಚ್ ಹುದ್ದೆಗೆ (ಒಂದು ಸಂಖ್ಯೆ) ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹತೆ, ಸಂಭಾವನೆ ಇತ್ಯಾದಿ ವಿವರಗಳು ಸಂಸ್ಥೆಯ www.nianp.res.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು, ಈ ಯೋಜನೆಯ ಯೋಜನಾ ಪ್ರಭಾರಿ ಇವರಿಗೆ ashishvet1@gmail.com; ashisvet1@rediffmail.com 06–06–2024 ರೊಳಗೆ, ನಿರ್ದಿಷ್ಟ ನಮೂನೆಯಲ್ಲಿ ತಮ್ಮ ಅರ್ಜಿ ಸಲ್ಲಿಸಬಹುದು. ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಇ–ಮೇಲ್/ದೂರವಾಣಿ ಮುಖಾಂತರ ಐಸಿಎಆರ್–ಎನ್‌ಐಎಎನ್‌ಪಿ, ಬೆಂಗಳೂರು ಇಲ್ಲಿಗೆ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ನೀಡಲಾಗುತ್ತದೆ.

ಸಹಿ/– ಎಸ್.ಶಶಿಕಲಾ, ಆಡಳಿತಾಧಿಕಾರಿ

ದಲಿತ ಡಿಸಿಪಿ ಅಮಾನತು: ಪ್ರತಿಭಟನೆ ಎಚ್ಚರಿಕೆ

ಕೋಲಾರ: ಹುಬ್ಬಳ್ಳಿಯ ಅಂಜಲಿ ಅಂಬಿಗೇರ ಹತ್ಯೆ ಪ್ರಕರಣದಲ್ಲಿ ರಾಜ್ಯ ಸರ್ಕಾರ ಮಠಾಧೀಶರ ಒತ್ತಡಕ್ಕೆ ಮಣಿದು ದಲಿತ ಪೊಲೀಸ್ ಅಧಿಕಾರಿಯನ್ನು ಬಲಿಪಶು ಮಾಡಿದೆ. 24 ಗಂಟೆಗಳೊಳಗೆ ಅಧಿಕಾರಿಯ ಅಮಾನತು ಆದೇಶ ವಾಪಸ್ ಪಡೆಯದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ಸಾಹಿತಿ, ರಂಗಕರ್ಮಿ ಕೋಟಿಗಾನಹಳ್ಳಿ ರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ಮೆಟ್ರೊ: 50 ನಿಮಿಷ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಂ.ಜಿ. ರಸ್ತೆ ಬಳಿ ಮೆಟ್ರೊ ತುರ್ತು ಹಳಿ ನಿರ್ವಹಣಾ ಕಾಮಗಾರಿಯಿಂದಾಗಿ ಭಾನುವಾರ ಬೆಳಿಗ್ಗೆ ನೇರಳೆ ಮಾರ್ಗದಲ್ಲಿ ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣ ಮತ್ತು ಇಂದಿರಾನಗರ ನಿಲ್ದಾಣಗಳ ನಡುವೆ 'ನಮ್ಮ ಮೆಟ್ರೊ' ಸಂಚಾರ 50 ನಿಮಿಷ ತಡವಾಗಿ ಆರಂಭವಾಯಿತು.

ಪ್ರತಿ ಶನಿವಾರ ರಾತ್ರಿ ಮತ್ತು ಭಾನುವಾರ ಬೆಳಿಗ್ಗೆ ಹಳಿ ನಿರ್ವಹಣೆ ಮತ್ತು ಮೆಟ್ರೊ ಕೋಚ್ ನಿರ್ವಹಣೆಗಳಿರುವುದರಿಂದ ಭಾನುವಾರ ಬೆಳಿಗ್ಗೆ 7ಕ್ಕೆ ಮೆಟ್ರೊ ಸಂಚಾರ ಆರಂಭವಾಗುತ್ತದೆ. ಶನಿವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯ ಇದ್ದ ಕಾರಣ ನಿರ್ವಹಣೆ ತಡವಾಗಿದ್ದರಿಂದ ಬೆಳಿಗ್ಗೆ 7.50ಕ್ಕೆ ಮೆಟ್ರೊ ಸಂಚಾರ ಶುರುವಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ನೇರಳೆ ಮಾರ್ಗದ ಮೆಟ್ರೊ

ನಗರದಲ್ಲಿ ಇಂದು

'ಶ್ರೀಮದ್ಭಾಗವತ ಕಥಾ ಶ್ರವಣ ಸಪ್ತಾಹ' ಮಹೋತ್ಸವ: ಬೆಳಿಗ್ಗೆ 8ಕ್ಕೆ ಕಥಾ ಶ್ರವಣ: ಶ್ರೀಕಾಂತಾಚಾರ್ಯ, 11ಕ್ಕೆ ವಿಷ್ಣು ಸಹಸ್ರನಾಮ ಸಾಮೂಹಿಕ ಪಾರಾಯಣ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 5ಕ್ಕೆ 'ಸಂಕೀರ್ತನ ಯೋಗ' ಪ್ರವಚನ: ಹ.ರಾ. ನಾಗರಾಜಾಚಾರ್ಯ, ಆಯೋಜನೆ ಮತ್ತು ಸ್ಥಳ: ಅನಂತಸ್ವಾಮಿ ಆಶ್ರಮ, ಸುಬೇದಾರ್ ಛತ್ರಂ ರಸ್ತೆ ಕ್ರಾಸ್, ಗಾಂಧಿನಗರ

ನಿಮಿಷಾಂಬಾದೇವಿ ಜಯಂತ್ಯುತ್ಸವ: ಬೆಳಿಗ್ಗೆ 9.15ಕ್ಕೆ ದೇವಿಗೆ ಅಭಿಷೇಕ, ಷೋಡಶೋಪಚಾರ ಪೂಜೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ನಿಮಿಷಾಂಬ ಅಮ್ಮನ ಉತ್ಸವಮೂರ್ತಿ ಬೀಳ್ಕೊಡುಗೆ, ಸಂಜೆ 4ಕ್ಕೆ ನಿಮಿಷಾಂಬದೇವಿ ರಥೋತ್ಸವ, ಆಯೋಜನೆ: ಸೋಮವಂಶ ಆರ್ಯ ಕ್ಷತ್ರಿಯ ಸೇವಾ ಸಂಘ, ಸ್ಥಳ: ನಿಮಿಷಾಂಬಾದೇವಿ ಕಲ್ಯಾಣ ಮಂಟಪ, ರಂಗಸ್ವಾಮಿಗುಡಿ ರಸ್ತೆ

ಅತ್ಯುತ್ತಮ ಲೇಖನಗಳಿಗೆ ಬಹುಮಾನ, ಉತ್ತಮ ಸಂಶೋಧನಾರ್ಥಿ ಬಹುಮಾನ ಪ್ರದಾನ: ಕೆ.ಆರ್. ಸಂಧ್ಯಾರೆಡ್ಡಿ, ಎಸ್. ಪಿ. ವಿಜಯಲಕ್ಷ್ಮಿ, ಜಯಚಂದ್ರಶೇಖರ ವೈ., ಅಧ್ಯಕ್ಷತೆ: ವಿಜಯಾ ಸುಬ್ಬರಾಜ್, ಆಯೋಜನೆ ಮತ್ತು ಸ್ಥಳ: ಬಿ.ಎಂ. ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಜಿ. ಕೃಷ್ಣಪ್ಪ ಅವರ 'ನಮ್ಮ ಕುವೆಂಪು' ಪುಸ್ತಕ ಬಿಡುಗಡೆ: ಹಿ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಅತಿಥಿ: ಕಡಿದಾಳ್ ಪ್ರಕಾಶ್, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.15

ಪ್ರಸನ್ನ ವೆಂಕಟರಮಣಸ್ವಾಮಿ ರಥೋತ್ಸವ: ವೈರಮುಡಿ ಉತ್ಸವ, ಆಯೋಜನೆ: ಹಿಂದೂ ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ, ಕೋಟೆ; ಸಂಜೆ 7ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ. nagaradalli_indu@prajavani.co.in

'ನೀರು ಸರಬರಾಜಷ್ಟೇ ಅಲ್ಲ; ನಿರ್ವಹಣೆಯೂ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹದಾಕಾರವಾಗಿ ಬೆಳೆದಿರುವ ಬೆಂಗಳೂರು ನಗರವು ಜಲಕ್ಷಾಮದ ಭೀತಿಯನ್ನು ಎದುರಿಸುತ್ತಿದೆ. ಈ ಸಂದರ್ಭದಲ್ಲಿ ಜಲಮಂಡಳಿಯು ನೀರು ಸರಬರಾಜಿನ ಜತೆಗೆ ನೀರು ನಿರ್ವಹಣಾ ಮಂಡಳಿಯಾಗಿಯೂ ಕಾರ್ಯನಿರ್ವಹಿಸಬೇಕಾಗಿದೆ' ಎಂದು ಜಲತಜ್ಞ ಎಸ್. ವಿಶ್ವನಾಥ್ ತಿಳಿಸಿದರು.

ದಿ ಮಿಥಿಕ್ ಸೊಸೈಟಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದತ್ತಿ ಉಪನಾಸ್ಯದಲ್ಲಿ 'ನೀರು ಮತ್ತು ನಗರ: ಬೆಂಗಳೂರು ನಗರ ಹಿಂದೆ, ಇಂದು ಮತ್ತು ಮುಂದೆ' ಎಂಬ ವಿಷಯದ ಬಗ್ಗೆ ಮಾತನಾಡಿದರು.

'ನಗರದಲ್ಲಿ ನೀರಿನ ಆಕರಗಳನ್ನು ಗಮನಿಸಿದರೆ ಕೊರತೆಗಿಂತ ನೀರಿನ ನಿರ್ವಹಣೆಯಲ್ಲಿನ ವೈಫಲ್ಯ ಕಾಣಬಹುದು. ನಗರವು ಭೌಗೋಳಿಕವಾಗಿ ಅಯಕಟ್ಟಿನ ಸ್ಥಳದಲ್ಲಿದ್ದು, ದಕ್ಷಿಣ ಪಿನಾಕಿನಿ ಮತ್ತು ಕಾವೇರಿ ನದಿಯು ನಗರಕ್ಕೆ ಅನಾದಿ ಕಾಲದಿಂದಲೂ ನೀರಿನ ಆಸರೆಯಾಗಿದೆ. ಕ್ರಿ.ಶ. 1874-76ರಲ್ಲಿ ನಗರವು ಭೀಕರ ಜಲಕ್ಷಾಮವನ್ನು ಎದುರಿಸಿತ್ತು. 1894–96ರಲ್ಲಿ ಮೈಸೂರು ಮಹಾರಾಜರು ಅರ್ಕಾವತಿ ನದಿಗೆ ಅಡ್ಡಲಾಗಿ ಹೆಸರಘಟ್ಟದಲ್ಲಿ ಜಲಾಶಯವನ್ನು ನಿರ್ಮಿಸಿ, ನಗರಕ್ಕೆ ಕುಡಿಯುವ ನೀರನ್ನು ಒದಗಿಸಿದರು. ಇದರೊಂದಿಗೆ ನಮ್ಮಲ್ಲಿರುವ ಪಾರಂಪರಿಕ ನೀರು ನಿರ್ವಹಣಾ ವ್ಯವಸ್ಥೆಯ ಮೂಲಕ ಜನರಿಗೆ ನಿರಂತರವಾಗಿ ನೀರಿನ ಸೌಲಭ್ಯ ದೊರಕುತ್ತಿದೆ' ಎಂದರು.

'ನಿರ್ವಹಣೆ ಕೊರತೆಯಿಂದ ನಗರದ ಕೆರೆಗಳು ಮಾಯವಾಗುತ್ತಿವೆ. ಇದರಿಂದಾಗಿಯೇ ಬೃಹದಾಕಾರವಾಗಿ ಬೆಳೆದಿರುವ ನಗರವು ಜಲಕ್ಷಾಮದ ಭೀತಿ ಎದುರಿಸುತ್ತಿದೆ ಎಂಬ ಆತಂಕ ಜನರಲ್ಲಿದೆ. ನೀರನ್ನು ಸಮರ್ಪಕವಾಗಿ ಬಳಸಿ, ಅದರ ನಿರ್ವಹಣೆ ಮಾಡಿದಾಗ ಈ ಆತಂಕ ದೂರವಾಗುತ್ತದೆ' ಎಂದು ಹೇಳಿದರು.

ವೈಜ್ಞಾನಿಕ ಅಧ್ಯಯನ ಅಗತ್ಯ: ವಿದ್ಯಾರತ್ನ ಆರ್.ಎಸ್. ಪಂಚಮುಖಿ ದತ್ತಿ ಉಪನ್ಯಾಸದಲ್ಲಿ 'ಮೌನ ಕಲ್ಲುಗಳ ಕಥೆಗಳು: ಮಧ್ಯಕಾಲೀನ ಕರ್ನಾಟಕದಲ್ಲಿ ಶಿಲ್ಪ ಕೊರೆಯುವ ತಂತ್ರಗಾರಿಕೆ' ಎಂಬ ವಿಷಯದ ಬಗ್ಗೆ ಮಾತನಾಡಿದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನ ಮಾನವಿಕ ವಿಜ್ಞಾನ ವಿಭಾಗದ ಸಹಪ್ರಾಧ್ಯಾಪಕ ಶ್ರೀಕುಮಾರ್ ಎಂ.ಮೆನನ್,'ಮಧ್ಯಪ್ರದೇಶದ ಭೋಜ್‌ಪುರ್, ಕರ್ನಾಟಕದ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಹಂಪಿ ಮುಂತಾದ ಪ್ರದೇಶದಲ್ಲಿಯ ವಾಸ್ತುಶಿಲ್ಪ ಗಮನಿಸಿದಾಗ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಇದ್ದ ವಾಸ್ತುಶಿಲ್ಪದ ವೈಶಿಷ್ಟ್ಯ ಪರಿಚಯವಾಗುತ್ತದೆ. ಈ ಪ್ರದೇಶಗಳಲ್ಲಿ ಲಭ್ಯವಿರುವ ಕಲ್ಲು ಮತ್ತು ಅದರ ಬಳಕೆಯ ತಂತ್ರಗಾರಿಕೆಯ ಅಧ್ಯಯನ ಆಗಬೇಕು' ಎಂದರು.

ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಇತಿಹಾಸ ಪ್ರಾಧ್ಯಾಪಕ ಶ್ರೀನಿವಾಸ ಪಾಡಿಗಾರ್ ಮಾತನಾಡಿದರು.

ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ (ಎಡದಿಂದ) ಎಸ್.ವಿಶ್ವನಾಥ್, ಶ್ರೀನಿವಾಸ ಪಾಡಿಗಾರ್, ಶ್ರೀಕುಮಾರ್ ಎಂ. ಮೆನನ್ ಹಾಗೂ ದಿ ಮಿಥಿಕ್ ಸೊಸೈಟಿ ಆಡಳಿತ ಮಂಡಳಿ ಸದಸ್ಯ ಎಂ. ಕೊಟ್ರೇಶ್ ಉಪಸ್ಥಿತರಿದ್ದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

EDUCATION CORNER ಕ್ಲಾಸಿಫೈಡ್ಸ್

JOB OPPORTUNITIES

General

IMMEDIATE RECRUITMENT
BANGALORE MYSORE AND HUBLI OFFICES
BRANCH MANAGERS
Killer Sales Instinct, People's Person, Polished Communication, Any Graduate, Min. 3 years Exp in Direct Sales
SALES MANAGERS
Go Getter Sales Pro, Ambitious, Any Graduate, Min 1 Year Exp in Direct Sales
BANGALORE OFFICE
TICKETING MANAGERS
IATA Trained, 2 Years Experience in International Ticketing, Group Experience, Very Good communication
9945775555
atmanand@chariotworldtours.com
CHARIOT
CHARIOT WORLD TOURS LIMITED
3446/40, 1st 'F' Cross, Next to Bunts Sangha, Vijayanagar, Bangalore 40

GOODWILL CHRISTIAN COLLEGE FOR WOMEN
No.10, Promenade Road, Frazer Town (Opp. Coles Park) Bengaluru - 560 005
CSI Karnataka Central Diocese
Affiliated to Bengaluru North University
NAAC ACCREDITED
Phone: 080 - 41516793, 41100422, 7022905576
Website: www.goodwillchristiancollege.com
E-mail: goodwillchristiancollege@gmail.com
Instagram: goodwillchristiancollege
ADMISSIONS OPEN 2024-2025
COURSES OFFERED
B.Com BBA BCA B.Sc B.A.

SRI KRISHNA GROUP OF INSTITUTIONS
ITI Layout (Near Vidyapeeta), Banashankari 3rd Stage, Bangalore-560 085
ADMISSIONS OPEN 2024-25
PUC: SCIENCE & COMMERCE
DEGREE: B.COM DAY EVENING, BBA & BCA
PUC STATE TOPPERS 2022-24 BATCH
BENGALURU CITY UNIVERSITY RANK HOLDERS 2020-23 BATCH
SCIENCE 9TH RANK – VISHNU S BHARDWAJ
COMMERCE 10TH RANK – TEJASWINI R
BBA 1ST RANK – MS. RUTH R
BCA 5TH RANK – MR. MAHESH G
CONTACT: 9844784320, 9945330589

Wanted
WANTED: PREM Industries Mysuru, is looking for Male Candidates: Mould Maker 2- Diploma from NTTF/ GTTC/ CIPET Exp 4-6 yrs. Mould Designer 2- Diploma or PG from GTTC/ CIPET Exp 3- 5 in Automotive/Electrical Parts. CNC Milling Operator- 2, Diploma or ITI Exp 2- 3 yrs. Mould Polisher 2 ITI or equivalent Exp- 0 to 2 Exp in Mould Polishing Techniques. Send ur CV and Cover Letter to hr@premind.com

COMPUTERS
Hardware
USED COMPUTERS FOR SALE
Dual Core/ 2GB Ram / 80GB HDD / 17"LCD Rs.6,000/-
For Qty of 10 No's Rs.5,000/- per system
For Qty of 10 No's. without Monitor Rs.3,000/- per system
For Qty of 30 No's. without Monitor Rs.2,500/- per system
For Qty of 50 No's. without Monitor Rs.2,000/- per system
Core I 3/ 4GB Ram / 250GB HDD / 17"LCD Rs.10,000/-
For Qty of 10 No's. Rs.9,000/- per system
For Qty of 10 No's. without Monitor Rs.7,000/- per system
For Qty of 40 No's. without Monitor Rs.6,000/- per system
LAPTOP
Core I 3/ 4GB Ram / 500GB HDD / Adaptor Rs.12,000/-
Courier Charges: Rs.1,000/- per system
COMPUTER HOUSE
L-81, SECTOR 11, 8th CROSS, 9th B MAIN, LIC COLONY, JEEVANBHIMA NAGAR, BANGALORE - 560075.
09886038331 / 080- 42076287

B.Com BCA BBA BBA Aviation Management B.Sc. Aircraft Maintenance
Approved by AICTE & Affiliated to Bengaluru North University
Eligibility: 12th Std. or Diploma (DTE approved)
HBS HINDUSTAN BUSINESS SCHOOL MARATHAHALLI, BENGALURU
HINDUSTAN AVIATION ACADEMY
Approved by Directorate General of Civil Aviation, Govt. of India
Aircraft Maintenance Engineering
• B1.1 Aeroplane Turbine
• B2 Avionics
• B.Sc. Aircraft Maintenance
Eligibility: 12th Std. with PCM or Diploma (DTE approved)
HINDUSTAN ELECTRONICS ACADEMY
Approved by DTE & AICTE
Polytechnic Diploma Engineering
Eligibility: 10th Std.
• Aeronautical Engineering
• Mechanical Engineering
• Computer Science Engineering
8971404357 / 9740037853
Ashwathnagar, Marathahalli, Bengaluru - 560037
Ph: 080-25238650, 25232217
E: admissions@hindustanacademy.edu.in
www.hindustanacademy.edu.in
SCAN QR CODE FOR MORE DETAILS
ADMISSIONS ARE OPEN FOR 2024-25

S.G.M. Group of Institutions
GEF Post, Gajendra Nagar (Near Girinagar) Bengaluru 560 026
We Render Quality education with Modern Amenities as per the latest guidelines since 1983. we are happy to congratulate our toppers like every year who make us feel proud by utilizing our service to change themselves better
Toppers of II PUC, 10th ICSE & 10th State Board
100% RESULT
HEARTIEST CONGRATULATIONS FROM MANAGEMENT & STAFF TO ALL II P.U TOPPERS 2024
MONIKA D 96%, ABHISHEK G K 95%, SHREYAS G 94%, VARSHITHA M 94%, DEEPIKA M S 93%, USHA RANI 91%, BHAGIRATH 90%, BHUVAN B S 88%
DEEPTHI T S 88%, APPOORVA C 88%, PAVAN V 85%, DEEPIKA J 84%, HARINI M 84%, MAMATHA G 84%, RAKSHITHA K 82%, CHANDRIKA L 80%, RAJESHWARI 80%
STATE - X Std Board Examination
Chandana S.K 97%, Pruthvishree.R 96%, Raksha.V 93%, Amulya K.R 91%, Deeraj Utlakar. V 90%
Vijay .C 88%, Skanda.A 87%, Dimple Kumar. T 86.7%, Bhavana. S 86.5%, Manikanta Murthy. K 85%
Yashawanth D.R 84.4%, Govindamali .T 82.4%, Varun .S 81%, Mithun. C 80%, Meghana C.K 80%
ICSE- X Std Board Examination
Poorvitha .HK 534/600, Jeevan Kumbar 526/600, Shreyas .P 522/600, Rakshitha .V 513/600, Disha .B.C 492/600
Yashawini H.B 482/600, Aishwarya 474/ 600, Tarun Aditya 474/600, Pankaj Dheer 468/600, Chandini. N 463/600, Chirag M.K 448/600
Admissions open for 2024-2025 Academic Year
For details visit our website sgmgroup.org or Contact us @ 080 25905944 , 9632945096
Nursery
1st to 10th ICSE
1st to 10th State
P.U.C (Commerce)
Degree Course (B.Com, BCA)

V.E.T.B.V.L. POLYTECHNIC
(Recognised by Collegiate and Directorate of Technical Education, Govt. of Karnataka, AICTE, New Delhi)
14th Main, 2nd Phase, J.P. Nagar, Bengaluru - 560078.
Web: vetbvlpolytechnic.edu.in
ACADEMIC ACHIEVERS
KIRAN K U PER-98.67% COMMERCIAL PRACTICE
ANKITHA R PER- 99.25% APPAREL DESIGN & FABRICATION TECHNOLOGY
44 DISTINCTIONS
KAPSHA SURAJ SINGH PER- 99.00% COMPUTER SCIENCE & ENGINEERING
ADMISSIONS OPEN FOR POLYTECHNIC COURSE FOR THE ACADEMIC YEAR 2024-2025
COURSES OFFERED:
1. COMPUTER SCIENCE AND ENGG
2. APPAREL DESIGN & FABRICATION TECHNOLOGY
3. COMMERCIAL PRACTICE
4. INFORMATION SCIENCE & ENGG*
(*Waiting for Approval)
CONTACT: 9513704801

V.V.N. DEGREE COLLEGE
(A Unit of Vasavi Vidyanikethan Trust)
Permanently Affiliated to Bengaluru City University
NAAC Accredited B+ Grade with 2.75 CGPA
Website :vvndegreecollege.in
ADMISSIONS OPEN B.COM & BCA Exclusively for GIRLS
Our Achievers
PRAJWALA KULKARNI J 96%, VINDHYA V 95.5%, YASHASHWINI R 95.5%, DIVYA S 95%
28 Students Secured Above 90% & 98 Students Secured First Class
Scholarship for Meritorious Students
For Details Contact: Vasavi College
9945446185/7411093009
3, Vani Vilas Road, V.V. Puram, Bengaluru-04

PUBLIC NOTICE
ಸಾರ್ವಜನಿಕ ಪ್ರಕಟಣೆ
ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ನನ್ನ ಕಕ್ಷಿದಾರರು ಶ್ರೀ. **ಮರಿಗೌಡ** ರವರ ಮಗಳಾದ **ಬೀನಾ ಎ. ಎಂ.,** ಎಂಬುವವರಿಂದ ಈ ಕೆಳಗಿನ ಶೆಡ್ಯೂಲ್‌ನಲ್ಲಿ ನಮೂದಿಸಿರುವ ಆಸ್ತಿಯನ್ನು ಖರೀದಿಸಲು ಉದ್ದೇಶಿಸಿದ್ದಾರೆ. ಯಾರಾದರೂ ಶೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಹೊಂದಿದ್ದರೆ ಅಥವಾ ಪ್ರಸ್ತಾವಿತ ಮಾರಾಟ ವಹಿವಾಟಿಗೆ ಆಕ್ಷೇಪಣೆ ಹೊಂದಿದ್ದರೆ, ಈ ಪ್ರಕಟಣೆಯ ದಿನಾಂಕದಿಂದ **15 ದಿನಗಳೊಳಗಾಗಿ** ಸಾಕ್ಷ್ಯ ಪುರಾವೆಯೊಂದಿಗೆ ಈ ಕೆಳಗೆ ಸಹಿ ಮಾಡಿದವರಲ್ಲಿ ಸಲ್ಲಿಸಬಹುದು. ಅವಧಿ ಮೀರಿದ ನಂತರ ಯಾವುದೇ ಹಕ್ಕು ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ನನ್ನ ಕಕ್ಷಿದಾರರು ಮಾರಾಟ ವಹಿವಾಟನ್ನು ಪೂರ್ಣಗೊಳಿಸಲು ಬದ್ಧರಾಗಿರುತ್ತಾರೆ.
ಶೆಡ್ಯೂಲ್
ಬಿಡಿಎ ಸೈಟ್ ನಂ.1137, 11ನೇ ಮುಖ್ಯರಸ್ತೆ, ಆರ್.ಪಿ.ಸಿ. ಲೇಔಟ್, ವಿಜಯನಗರ 2ನೇ ಹಂತ, ಬೆಂಗಳೂರು, ಹಾಲಿ ಬಿಬಿಎಂಪಿ ಮುನಿಸಿಪಲ್ ನಂ.37, ಹಳೆಯ ನಂ.1137, ಪಿ.ಐ.ಡಿ.ನಂ.34–112–37, ವಾರ್ಡ್ ನಂ.34–ಆರ್.ಪಿ.ಸಿ. ಲೇಔಟ್, ಪೂರ್ವ ಪಶ್ಚಿಮ 90 ಅಡಿಗಳು ಮತ್ತು ಉತ್ತರ ದಕ್ಷಿಣ 60 ಅಡಿಗಳು ಒಟ್ಟು 5400 ಚದರ ಅಡಿಗಳುಳ್ಳ ಸೈಟು ಮತ್ತು ಇದರಲ್ಲಿ ಕಟ್ಟಿರುವ ವಾಸದ ಮನೆಯುಳ್ಳ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸೈಟ್ ನಂ.1133/ಇ, ಉತ್ತರಕ್ಕೆ ಸೈಟ್ ನಂ.1136, ದಕ್ಷಿಣಕ್ಕೆ ಸೈಟ್ ನಂ.1138.
ಎಂ. ಆರ್. ನಾರಾಯಣ್ ಅಂಡ್ ಕೊ.
ಅಡ್ವೊಕೇಟ್ಸ್ ಅಂಡ್ ಟ್ಯಾಕ್ಸ್ ಕನ್ಸಲ್ಟೆಂಟ್ಸ್, ನಂ.768, 34ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು–560011.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

CONNECT
ವಿಕ್ಷಿಸಿ ' ಮಂಜುನಾಥ್ ಅಡ್ವೊಕೇಟ್ ' ಎಂಬ ಯೂಟ್ಯೂಬ್ ಚಾನಲ್
YouTube SUBSCRIBE
ಉಚಿತ ಕಾನೂನು ಮಾಹಿತಿಯನ್ನು ಪಡೆಯಲು ಮತ್ತು ಎಲ್ಲಾ ರೀತಿಯ ಕಾನೂನು ಸಮಸ್ಯೆಗಳ ಪರಿಹಾರಕ್ಕಾಗಿ!?
*T&C

RENTAL PROPERTIES
Accommodation Available
Commercial
RENT- 18,000-SQFT Multi-Level (GF/1F/ 3F/ 4F Floors) Power,Power-backup on KANAKAPURA ROAD,Near Sarakki Signal Metro Station. Suitable for IT/ ITES/ Office/Pharma/ Warehouse/ Electronic Industry Call-9901453477

PLUG-N-PLAY 4TH Floor Office Space 3,500Sq.Ft 45-SEATER With Lifts, Parking,DG Power,UPS Power-Backup on KANAKAPURA ROAD, Near Sarakki Signal Metro Station.Suitable for IT/ITES/ Office. Call: 9901453477

BUILDERS ESSENTIAL
Water Proofing
LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS
Business to Business
Business
WANTED BUSINESS PARTNER ATTRACTIVE INCOME CONTACT: 88925 01007/ 9606701007

PERSONAL
Lost
DOCUMENT LOST
I, **PRATIMA GUPTA,** Residing at B403, Esperanza by UKN, Thubarahalli Extended Road, Thubarahalli, Bengaluru-560066, have lost my **Land Registration and Sale Deed Document No./Identification No. BNG(U)-TVR 157/2012-2013** While transit. If Found please Contact: **9845065152**

Change of Name
CHANGE OF NAME
I, **GEETHA SURYABABU MUTHYALA @ M GEETHA, GEETHA M @ M GEETA @ GEETHA SURYA BABU M @ MUTHYALA GEETHA** and **MUTHYALA GEETHA SURYABABU** residing at #2, 2nd Cross, Cambridge Road, Opp Balaji Enterprises, Halasuru, Bengaluru-08, declare that all the above names pertain to me only. Vide affidavit dated 17.05.2024 before Notary Meer Hassan, Bengaluru. Henceforth I shall be known as **GEETHA SURYABABU MUTHYALA**

DH Classifieds More value, more impact ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
9731810277
9886213331
9845114560
*Conditions apply

ಪ್ರಜಾವಾಣಿ
ಸ್ಪರ್ಧಾವಾಣಿ
MASTERMIND
ಈ ಸಂಚಿಕೆಯಲ್ಲಿ ಮಾದರಿ ಪ್ರಶ್ನೆಪತ್ರಿಕೆಗಳು, QR ಕೋಡ್ ಆಧಾರಿತ ಮಾದರಿ ಪರೀಕ್ಷೆ ಹಾಗೂ ವಿಡಿಯೋ ಪಾಠಗಳು ಲಭ್ಯ

ಈ QR ಕೋಡ್ ಸ್ಕ್ಯಾನ್ ಮಾಡಿ, ಪ್ರಕಟವಾಗುವ ಅರ್ಜಿ ಭರ್ತಿ ಮಾಡಿ, ಚಂದಾದಾರರಾಗಿ ನೋಂದಣಿ ಮಾಡಿಕೊಳ್ಳಿ
ಚಂದಾದಾರಿಕೆ ಕೇವಲ ₹360 ರಿಂದ ಪ್ರಾರಂಭ

1. ಚಾಮರಾಜಪೇಟೆಯಲ್ಲಿ ಮಳೆಯ ಸಿಂಚನದ ನಡುವೆಯೇ ಸಾಗಿದವರು 2. ನಾಯಂಡಹಳ್ಳಿ ವೃತ್ತದಲ್ಲಿ ಜಲಭರಿತ ರಸ್ತೆಯಲ್ಲಿ ವಾಹನ ಚಾಲಕರು ಚಿಂತಿಸಿ, ಮುಂದೆ ಸಾಗಬೇಕಾಯಿತು 3. ಎಂ.ಜಿ ರಸ್ತೆಯಲ್ಲಿ ಮಗು ಜತೆಗೆ ಹುಡುಗಿಯೊಬ್ಬಳು ಫ್ಲೆಕ್ಸ್ ಕೆಳಗೆ ಕುಳಿತು ಮಳೆಯಿಂದ ರಕ್ಷಣೆ ಪಡೆದಳು –ಪ್ರಜಾವಾಣಿ ಚಿತ್ರಗಳು: ಎಂ.ಎಸ್.ಮಂಜುನಾಥ್, ರಂಜು. ಪಿ, ಕಿಶೋರ್ ಕುಮಾರ್ ಬೋಳಾರ್

ಮಾರತ್‌ಹಳ್ಳಿ, ಎಂ.ಎಸ್.ಪಾಳ್ಯ, ಜಯಮಹಲ್ ರಸ್ತೆಯಲ್ಲಿ ಪರದಾಡಿದ ವಾಹನ ಸವಾರರು

ದಿನವಿಡೀ ಮಳೆ; ತಣ್ಣಗಾಯಿತು ಇಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಭಾನುವಾರ ಉತ್ತಮ ಮಳೆಯಾಗಿದ್ದು, ಯಲಹಂಕದ ನಾರ್ತ್‌ಹುಡ್ ಅಪಾರ್ಟ್‌ಮೆಂಟ್ ಒಳಗೆ ನೀರು ನುಗ್ಗಿದೆ. ವಿವಿಧೆಡೆ ರಸ್ತೆಗಳಲ್ಲಿ ನೀರು ಹರಿದ ಕಾರಣ ವಾಹನ ಸಂಚಾರಕ್ಕೆ ತೊಡಕು ಉಂಟಾಗಿದೆ.

ಶನಿವಾರ ತಡರಾತ್ರಿವರೆಗೆ ಮಳೆ ಸುರಿದಿದ್ದು, ಭಾನುವಾರ ಮುಂಜಾನೆ ಸ್ವಲ್ಪ ಕಡಿಮೆಯಾಗಿತ್ತು. ಬಳಿಕ ದಿನವಿಡೀ ನಗರದ ಬೇರೆ ಬೇರೆ ಪ್ರದೇಶಗಳಲ್ಲಿ ಮಳೆ ಸುರಿಯತೊಡಗಿತು. ಸಂಜೆ ಗುಡುಗು ಸಹಿತ ಮಳೆಯಾಗಿದೆ.

ಮಾರತ್‌ಹಳ್ಳಿ ಪೊಲೀಸ್ ಠಾಣೆ ಬಳಿಯ ಸರ್ವಿಸ್ ರಸ್ತೆಯಲ್ಲಿ ನೀರು ನಿಂತು ಕಾಲುವೆಯಂತಾಯಿತು. ಕಾಡುಬೀಸನಹಳ್ಳಿ ಕಡೆಗೆ ಸಂಚರಿಸುವ ವಾಹನಗಳು ಇದರಿಂದ ನಿಧಾನವಾಗಿ ಸಾಗುವಂತಾಯಿತು. ಎಂ.ಎಸ್. ಪಾಳ್ಯದಲ್ಲಿ ರಸ್ತೆ ಕಾಣದಷ್ಟು ನೀರು ನಿಂತಿತ್ತು. ಜಯಮಹಲ್ ರಸ್ತೆಯ ಸಿಕ್ಯುಎಸಿ ಬಳಿ ನೀರು ಪ್ರವಾಹದಂತೆ ಹರಿಯಿತು. ಬಿನ್ನಿಮಿಲ್ ಬಳಿ ರಸ್ತೆಯಲ್ಲಿ ನೀರು ನಿಂತಿದ್ದರಿಂದ ಹುಣಸೆಮರ ಜಂಕ್ಷನ್ ಕಡೆಗೆ ಸಾಗುವ ವಾಹನಗಳಿಗೆ ತೊಂದರೆ ಉಂಟಾಯಿತು.

ಪೀಣ್ಯ ಫ್ಲೈಓವರ್ ರಸ್ತೆಯಲ್ಲಿ ನೀರು ಹರಿದ ಕಾರಣ ಎರಡೂ ಕಡೆಯ ವಾಹನಗಳ ಸಂಚಾರ ನಿಧಾನಗತಿ ಪಡೆಯಿತು. ಇದರಿಂದ ವಾಹನಗಳು ಸಾಲುಗಟ್ಟಿ ನಿಲ್ಲುವಂತಾಯಿತು. ಸಿಟಿ ಮಾರುಕಟ್ಟೆ ಡೌನ್ ರ‍್ಯಾಂಪ್ ಬಳಿ ನೀರು ನಿಂತಿದ್ದರಿಂದ ಪುರಭವನ ಕಡೆಗೆ ಸಾಗುವ ವಾಹನಗಳು ಪರದಾಡುವಂತಾಯಿತು.

ಬಸವನಗುಡಿ, ಪುಲಕೇಶಿನಗರ, ರಾಜಾಜಿನಗರ, ಎಂ.ಜಿ. ರಸ್ತೆ, ಶಿವಾಜಿನಗರ, ಆರ್.ಟಿ.ನಗರ, ಎಚ್‌ಆರ್‌ಬಿಆರ್ ಬಡಾವಣೆ, ರಿಚ್‌ಮಂಡ್ ಸರ್ಕಲ್, ರಾಜಮಹಲ್ ಗುಟ್ಟಹಳ್ಳಿ, ಆರ್.ಆರ್. ನಗರ, ಯಶವಂತಪುರ, ಹೆಬ್ಬಾಳ, ಸಂಪಂಗಿನಗರ, ಶಾಂತಿನಗರ ಸೇರಿ ಅನೇಕ ಕಡೆ ಉತ್ತಮ ಮಳೆಯಾಗಿದೆ.

ಎರಡು ದಿನ ಭಾರಿ ಮಳೆ: ನಗರದ ಹಲವೆಡೆ ಸೋಮವಾರ ಹಾಗೂ ಮಂಗಳವಾರ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರಲಿದೆ. ಮಧ್ಯಾಹ್ನ, ಸಂಜೆ ಅಥವಾ ತಡರಾತ್ರಿ ಗುಡುಗು, ಮಿಂಚು ಸಹಿತ ಧಾರಾಕಾರ ಮಳೆಯಾಗಲಿದೆ ಎಂದು ಸೂಚನೆ ನೀಡಿದೆ.

ಮೈಸೂರು ರಸ್ತೆಯಲ್ಲಿ ಕೊಡೆ ಹಿಡಿದು ವಾಹನ ಸವಾರರು ಸಂಚರಿಸಿದರು –ಪ್ರಜಾವಾಣಿ ಚಿತ್ರ



ವಿಲ್ಲಾಗಳಿಗೆ ನುಗ್ಗಿದ ಕೊಳಚೆ ನೀರು

ಯಲಹಂಕದಲ್ಲಿ ರಾಜಕಾಲುವೆ ಸಮಸ್ಯೆಯಿಂದಾಗಿ ನಾರ್ತ್‌ಹುಡ್ ಅಪಾರ್ಟ್‌ಮೆಂಟ್ ಮತ್ತು ಸುತ್ತಮುತ್ತಲಿನ ವಿಲ್ಲಾಗಳಿಗೆ ಕೊಳಚೆ ನೀರು ಹಾಗೂ ಮಳೆ ನೀರು ನುಗ್ಗಿತು. ರಸ್ತೆಯೇ ಕಾಣದಂತ ಪರಿಸ್ಥಿತಿ ಉಂಟಾಯಿತು. ಹಲವು ಮನೆಗಳ ಒಳಗೆ ಒಂದಡಿಗಿಂತ ಎತ್ತರದಷ್ಟು ನೀರು ನಿಂತು ದವಸ ಧಾನ್ಯಗಳು, ಬಟ್ಟೆ ಇನ್ನಿತರ ವಸ್ತುಗಳು ನೀರಿನಲ್ಲಿ ಒದ್ದೆಯಾದವು.

‘ರಾಜಕಾಲುವೆಯನ್ನು ಸರಿಪಡಿಸದೇ ಇರುವುದರಿಂದ ಮಳೆ ಬಂದರೆ ಸಮಸ್ಯೆಯಾಗಲಿದೆ ಎಂದು ವಾರದ ಹಿಂದೆಯೇ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ನೀಡಿದ್ದೆವು. ಎಲ್ಲ ಸರಿ ಮಾಡುತ್ತೇವೆ, ಒತ್ತಡ ಹೇರಬೇಡಿ ಎಂದು ಅಧಿಕಾರಿಗಳು ತಿಳಿಸಿದ್ದರು. ಆದರೆ, ಯಾವುದೇ ಕ್ರಮ ಕೈಗೊಂಡಿಲ್ಲ. ಕಳೆದ ವರ್ಷ ಮಳೆಗಾಲದಲ್ಲಿಯೂ ನೀರು ಬಂದಿತ್ತಾದರೂ ಈ ಪ್ರಮಾಣದಲ್ಲಿ ಇರಲಿಲ್ಲ. ಇಷ್ಟೊಂದು ನೀರು ನುಗ್ಗುವಷ್ಟು ಮಳೆಯಾಗಿಲ್ಲ. ರಾಜಕಾಲುವೆಯ ಕೊಳಚೆ ನುಗ್ಗಿದೆ. ವಾಸನೆಯಿಂದ ಬದುಕುವುದೇ ಕಷ್ಟ’ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್

ಪ್ರವಾಹ ಪ್ರದೇಶಗಳಿಗೆ ಖುದ್ದು ಭೇಟಿ ನೀಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರವಾಹ ಪೀಡಿತ ಪ್ರದೇಶಗಳಿಗೆ ಆಯುಕ್ತರು ಮತ್ತು ಎಂಜಿನಿಯರ್‌ಗಳು ಖುದ್ದಾಗಿ ಭೇಟಿ ನೀಡಬೇಕು. ಸಮಸ್ಯೆ ಪರಿಹಾರ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ಶನಿವಾರ ರಾತ್ರಿ ಮತ್ತು ಭಾನುವಾರ ಬೆಳಿಗ್ಗೆ ಸುರಿದ ಮಳೆಯಿಂದ ಪ್ರವಾಹ ಉಂಟಾಗಿರುವ ಹಾಗೂ ಮನೆಗಳಿಗೆ ನೀರು ನುಗ್ಗಿರುವ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿ ಅವರು ಮಾತನಾಡಿದರು.

ಪಂಪ್ ಬಳಕೆ: ಶನಿವಾರ ಸುರಿದ ಮಳೆಯಿಂದ ರಾಜಕಾಲುವೆಯಲ್ಲಿ ನೀರಿನ ಹರಿವು ಹೆಚ್ಚಾಗಿ ಹಿಮ್ಮುಖವಾಗಿ ಚಲಿಸಿದ ಕಾರಣ ಯಲಹಂಕ ವಲಯ ವ್ಯಾಪ್ತಿಯ ರಮಣಶ್ರೀ ಗಾರ್ಡೇನಿಯಾ ಲೇಔಟ್ ಹಾಗೂ ನಾರ್ತ್ ಹುಡ್‌ನಲ್ಲಿ ಸುಮಾರು 20 ವಿಲ್ಲಾಗಳಿಗೆ ಮಳೆ ನೀರು ನುಗ್ಗಿತ್ತು. 15 ಎಚ್.ಪಿ. ಪಂಪ್ ಮೂಲಕ ನೀರನ್ನು ತೆರವುಗೊಳಿಸಲಾಯಿತು ಎಂದು ಅವರು ತಿಳಿಸಿದರು.

ಮರ ಬಿದ್ದಿರುವ ವಿವರ: ನಗರದಲ್ಲಿ ಶನಿವಾರ ಮತ್ತು ಭಾನುವಾರ 15 ಮರ ಹಾಗೂ 49 ರೆಂಬೆ, ಕೊಂಬೆಗಳು ಬಿದ್ದಿವೆ. ಈ ಪೈಕಿ 13 ಮರ ಹಾಗೂ 32 ರೆಂಬೆಗಳನ್ನು ತೆರವುಗೊಳಿಸಲಾಗಿದ್ದು, ಉಳಿದವುಗಳ ತೆರವು ಕಾರ್ಯ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ವಿಶೇಷ ಆಯುಕ್ತರ ಭೇಟಿ: ಯೋಜನಾ ವಿಭಾಗದ ವಿಶೇಷ ಆಯುಕ್ತ ಡಾ. ಕೆ. ಹರೀಶ್ ಕುಮಾರ್, ವಿಪತ್ತು ನಿರ್ವಹಣಾ ವಿಭಾಗದ ವಿಶೇಷ ಆಯುಕ್ತ ಸುರೊಳ್ಕರ್ ವಿಕಾಸ್ ಕಿಶೋರ್ ಇಂದು ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ, ಕವಿಕಾ, ನಾಯಂಡಹಳ್ಳಿ, ಸಿಲ್ಕ್ ಬೋರ್ಡ್ ಜಂಕ್ಷನ್ ಹಾಗೂ ಹೆಚ್.ಎಸ್.ಆರ್ ಲೇಔಟ್ ಬಳಿ ರಾಜಕಾಲುವೆಗಳನ್ನು ಪರಿಶೀಲಿಸಿದರು. ರಾಜಕಾಲುವೆಗಳಲ್ಲಿ ಸಂಪೂರ್ಣ ಹೂಳನ್ನು ತೆರವುಗೊಳಿಸಿ ಸರಾಗವಾಗಿ ಮಳೆ ನೀರು ಹರಿದು ಹೋಗುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಿಯಂತ್ರಣ ಕೊಠಡಿಗಳ ಪರಿಶೀಲನೆ: ಪಾಲಿಕೆಯ ಆಯಾ ವಲಯಗಳಲ್ಲಿರುವ ನಿಯಂತ್ರಣ ಕೊಠಡಿಗಳಿಗೆ ವಲಯ ಆಯುಕ್ತರು ಹಾಗೂ ಜಂಟಿ ಆಯುಕ್ತರು ಭೇಟಿ ನೀಡಿ ನಾಗರಿಕರಿಂದ ಬಂದ ದೂರುಗಳನ್ನು ಪರಿಶೀಲಿಸಿದರು. ಪಾಲಿಕೆ ನಿಯಂತ್ರಣ ಕೊಠಡಿಗೆ ಬರುವ ದೂರುಗಳನ್ನು ತ್ವರಿತಗತಿಯಲ್ಲಿ ಅಧಿಕಾರಿಗಳ ಗಮನಕ್ಕೆ ತಂದು ಇತ್ಯರ್ಥಪಡಿಸಲು ಸೂಚನೆ ನೀಡಿದರು.

ಯಲಹಂಕ ವಲಯ ವ್ಯಾಪ್ತಿಯ ರಮಣಶ್ರೀ ಗಾರ್ಡೇನಿಯಾ ಲೇಔಟ್ ಹಾಗೂ ನಾರ್ತ್ ಹುಡ್‌ನಲ್ಲಿ ನುಗ್ಗಿರುವ ರಾಜಕಾಲುವೆ ನೀರನ್ನು ಪಂಪ್ ಮೂಲಕ ಹೊರಹಾಕಲಾಯಿತು

ಮದುವೆ ಫೋಟೊ–ವಿಡಿಯೊ ವಿಚಾರಕ್ಕೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆ ಸಮಾರಂಭದ ಊಟದ ಸಂದರ್ಭದಲ್ಲಿ ಫೋಟೊ ಹಾಗೂ ವಿಡಿಯೊ ತೆಗೆಯುವ ವಿಚಾರಕ್ಕೆ ಗಲಾಟೆ ನಡೆದಿದ್ದು, ಫೋಟೊಗ್ರಾಫರ್–ವಿಡಿಯೊಗ್ರಾಫರ್ ಮೇಲೆ ಹಲ್ಲೆ ಮಾಡಲಾಗಿದೆ. ಈ ಬಗ್ಗೆ ಭಾರತಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಶಿವಾಜಿನಗರದ ಶಮ್ಸ್ ಕನ್ವೆನ್ಶನ್ ಸಭಾಭವನದಲ್ಲಿ ಶನಿವಾರ ರಾತ್ರಿ ಗಲಾಟೆ ನಡೆದಿದೆ. ಫೋಟೊ–ವಿಡಿಯೊ ಜವಾಬ್ದಾರಿ ವಹಿಸಿಕೊಂಡಿದ್ದ ಜಯಂತ್ ಹಾಗೂ ರಘು ಎಂಬುವವರ ಮೇಲೆ ಹಲ್ಲೆ ಮಾಡಲಾಗಿದೆ. ಗಾಯಗೊಂಡಿರುವ ಅವರಿಬ್ಬರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಘಟನೆ ಸಂಬಂಧ ಠಾಣೆಗೆ ದೂರು ನೀಡಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಹಾಲ್‌ನಲ್ಲಿ ಕೆಲವರು ಊಟ ಮಾಡುತ್ತಿದ್ದರು. ಜಯಂತ್ ಹಾಗೂ ರಘು, ಊಟ ಮಾಡುತ್ತಿದ್ದವರ ವಿಡಿಯೊ–ಫೋಟೊ ತೆಗೆಯುತ್ತಿದ್ದರು. ಇದೇ ಸಂದರ್ಭದಲ್ಲಿ ಮೂವರು ಆರೋಪಿಗಳು ತಮ್ಮ ಫೋಟೊ ಹಾಗೂ ವಿಡಿಯೊ ಚೆನ್ನಾಗಿ ತೆಗೆಯುತ್ತಿಲ್ಲವೆಂದು ಹೇಳಿ ಗಲಾಟೆ ಮಾಡಿದ್ದರು. ಮಾತಿನ ಚಕಮಕಿ ನಡೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಆರೋಪಿಗಳು, ಊಟದ ತಟ್ಟೆಯಿಂದ ಜಯಂತ್–ರಘು ಅವರಿಗೆ ಹೊಡೆದಿದ್ದರು. ನಂತರ, ಹಲ್ಲೆ ಸಹ ಮಾಡಿದ್ದರು. ಗಲಾಟೆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿದ್ದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ, ಜಯಂತ್ ಹಾಗೂ ರಘು ಅವರನ್ನು ರಕ್ಷಿಸಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ’ ಎಂದು ತಿಳಿಸಿದರು.

‘ಮೂವರೂ ಆರೋಪಿಗಳ ಗುರುತು ಪತ್ತೆಯಾಗಿದೆ. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ, ಮುಂದಿನ ಕ್ರಮ ಜರುಗಿಸಲಾಗುವುದು’ ಎಂದು ಹೇಳಿದರು.

Get an instant bonus upto ₹ 12,800#/-
5% Instant Cashback up to ₹ 3,000*/- on HDFC Credit Card EMI
Best in Segment Flat Interest rate of 6.20%~
Tenure up to 72 months | Instant approval | IDFC FIRST Bank ALWAYS YOU FIRST HDFC BANK
Finance up to 100%

WELCOME TO THE WORLD OF CB LEGACY
Honda BigWing —EXCITES THE WORLD— HONDA

~Flat rate of interest will transforms to reducing rate of interest 11.49%. Applicable for customers with previous loan track and in urban operating locations only. Loan amount and tenure are at sole discretion of bank. Rate of Interest calculated based on flat rate for a tenure of 72 months. *Terms and Conditions are applicable. Bonus valid on Ex-showroom (Including Taxes). Limited Period Offer. Creative visualisation, actual product may vary from the image shown. All features and colours may not be a part of all variants. Accessories shown in the picture are not part of standard equipment.

For more details: Bangalore: Honda BigWing Bengaluru East: **(Indiranagar):** 6366922291, 7795690889, Honda BigWing Bengaluru North **(Sadashivnagar):** 8792922274, 080-45048888, Honda BigWing Topline **(Lavelle Road):** 9844564831, 8884967272, Honda BigWing **RR Nagar:** 8197156468, 9844726971, Honda BigWing **Banashankari:** 8123707722, 8123697722, Honda BigWing **Mahadevapura:** 7795690886, 7795690878, Honda BigWing **Hennur:** 8904612970, 7795690878, Honda BigWing **Yelahankha:** 7204582224, 8792922267; **Belgaum**: Honda BigWing Belagavi South **(Tilakwadi):** 9686203854; **Mangalore:** Honda BigWing Mangalore North **(Derebail):** 8147599847; **Mysore:** Honda BigWing Mysuru Central **(Saraswathipuram):** 7676523911; **Hubli**: Honda BigWing Hubballi Central **(Bannigida):** 6366763110, 8884433693.

ಉರಿಬಿಸಿಲು: ಗೃಹಜ್ಯೋತಿ ಯೋಜನೆ ಕಾರಣದಿಂದಾಗಿ ಗ್ರಾಹಕರಿಗೆ ತಗ್ಗಿದ ಬಿಲ್ ಬಿಸಿ

4 ಕೋಟಿ ಯೂನಿಟ್ ಹೆಚ್ಚುವರಿ ವಿದ್ಯುತ್ ಬಳಕೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಈ ಬಾರಿ ವಿಪರೀತ ಸೆಕೆ ವಾತಾವರಣ ಇದ್ದುದು ವಿದ್ಯುತ್ ಬಳಕೆಯನ್ನು ಹೆಚ್ಚಿಸಿದೆ. ಹೀಗಾಗಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ವ್ಯಾಪ್ತಿಯಲ್ಲಿ ಗೃಹ ಬಳಕೆಗೆ ತಿಂಗಳಿಗೆ ಸರಾಸರಿ 4.3 ಕೋಟಿ ಯೂನಿಟ್ ಹೆಚ್ಚುವರಿಯಾಗಿ ಬಳಕೆಯಾಗಿದೆ.

ರಾಜ್ಯ ಸರ್ಕಾರದ 'ಗೃಹಜ್ಯೋತಿ' ಯೋಜನೆಯಿಂದಾಗಿ ಗ್ರಾಹಕರು ವಿದ್ಯುತ್ ಬಿಲ್ಲಿನ ದೊಡ್ಡ ಹೊರೆಯಿಂದ ತಪ್ಪಿಸಿಕೊಂಡಿದ್ದಾರೆ. ಆದರೂ ನಿಗದಿಗಿಂತ ಹೆಚ್ಚಿನ ಬಳಕೆಗೆ ಹಣ ಪಾವತಿ ಮಾಡಬೇಕಿದೆ. ಇದರಿಂದ ಮಾರ್ಚ್ ತಿಂಗಳು ಒಂದರಲ್ಲಿಯೇ ಬೆಸ್ಕಾಂಗೆ ₹47.18 ಕೋಟಿ ಪಾವತಿಯಾಗಿದೆ.

'ನಮಗೆ ತಿಂಗಳಿಗೆ ₹600 ಬಿಲ್ ಬರುತ್ತಿತ್ತು. ಗೃಹಜ್ಯೋತಿಯಿಂದಾಗಿ ₹60 ಮಾತ್ರ ಪಾವತಿಸಬೇಕಿತ್ತು. ಸೆಕೆ ವಿಪರೀತವಾಗಿರುವುದರಿಂದ ಫ್ಯಾನ್ ಮತ್ತು ಕೂಲರ್ ಹೆಚ್ಚು ಬಳಕೆಯಾಯಿತು. ಇದರಿಂದ ಏಪ್ರಿಲ್‌ನಲ್ಲಿ ₹850 ಬಿಲ್ ಬಂದಿದೆ. ₹255 ಮಾತ್ರ ಪಾವತಿ ಮಾಡಬೇಕಿದೆ. ಗೃಹಜ್ಯೋತಿ ಯೋಜನೆ ಇಲ್ಲದೇ ಇದ್ದಿದ್ದರೆ ಅಷ್ಟೂ ಮೊತ್ತ ಕಟ್ಟಬೇಕಿತ್ತು' ಎಂದು ಸುಬ್ರಹ್ಮಣ್ಯನಗರ ನಿವಾಸಿ ಎಚ್.ಸಿ. ರಮೇಶ್ ತಿಳಿಸಿದರು.

'ಯೋಜನೆಯಡಿ ಗರಿಷ್ಠ 200 ಯೂನಿಟ್‌ವರೆಗೆ ಉಚಿತವಿದೆ. ಫಲಾನುಭವಿ ಗ್ರಾಹಕರು ತಿಂಗಳಿಗೆ ಬಳಕೆ ಮಾಡುತ್ತಿದ್ದ ಸರಾಸರಿ ಯೂನಿಟ್‌ಗಿಂತ 10 ಯೂನಿಟ್ ಹೆಚ್ಚುವರಿಯಾಗಿ ಬಳಸಿದರೂ ಉಚಿತವಾಗಿಯೇ ಇರುತ್ತದೆ. ಹೆಚ್ಚುವರಿ 10 ಯೂನಿಟ್ ಮೀರಿದರೆ ಅದಕ್ಕೆ ಬಿಲ್ ಪಾವತಿ ಮಾಡಬೇಕಾಗುತ್ತದೆ. ಉದಾಹರಣೆಗೆ 100 ಯೂನಿಟ್ ವಿದ್ಯುತ್ ಬಳಸುತ್ತಿದ್ದ ಒಬ್ಬ ಗ್ರಾಹಕ 110 ಯೂನಿಟ್‌ವರೆಗೆ ಬಳಸಿದರೂ ಉಚಿತವಾಗಿರುತ್ತದೆ. 110 ಯೂನಿಟ್ ದಾಟಿದರೆ ಹೆಚ್ಚುವರಿ ಯೂನಿಟ್‌ಗಷ್ಟೇ ಬಿಲ್ ಪಾವತಿಸಬೇಕು. ಆದರೆ, ಒಟ್ಟು ಯೂನಿಟ್ ಪ್ರಮಾಣ 200 ದಾಟಿದರೆ ಗೃಹಜ್ಯೋತಿ ಅನ್ವಯವಾಗುವುದಿಲ್ಲ. ಮೊದಲ ಯೂನಿಟ್‌ನಿಂದಲೇ ಹಣ ಪಾವತಿ ಮಾಡಬೇಕಾಗುತ್ತದೆ. ಗೃಹಜ್ಯೋತಿಯ ಶೇ 90ಕ್ಕೂ ಅಧಿಕ ಗ್ರಾಹಕರು ಸರಾಸರಿ 10 ಯೂನಿಟ್ ಮೀರಿದ್ದರೂ ಗರಿಷ್ಠ ಮಿತಿ ದಾಟಿಲ್ಲ. ಹಾಗಾಗಿ ಅವರಿಗೆ ಹೆಚ್ಚುವರಿ ಬಳಕೆಗಷ್ಟೇ ಬಿಲ್ ಕಳುಹಿಸಲಾಗಿದೆ' ಎಂದು ಬೆಸ್ಕಾಂ ಅಧಿಕಾರಿಗಳು ಮಾಹಿತಿ ನೀಡಿದರು.

ಗೃಹಜ್ಯೋತಿಯಿಂದಲೂ ಬಳಕೆ ಹೆಚ್ಚಳ: ಗೃಹಜ್ಯೋತಿ ಯೋಜನೆ ಜಾರಿಯಾಗುವವರೆಗೆ ಬೆಸ್ಕಾಂ ವ್ಯಾಪ್ತಿಯಲ್ಲಿ ತಿಂಗಳಿಗೆ ಸರಾಸರಿ 75 ಕೋಟಿ ಯೂನಿಟ್ ವಿದ್ಯುತ್ ಮನೆ ಬಳಕೆಗೆ ಬೇಕಾಗುತ್ತಿತ್ತು. ಯೋಜನೆ ಜಾರಿಯಾದ ಮೇಲೆ ಜನರು ನಿರಾಳವಾಗಿ ಬಳಸತೊಡಗಿದ್ದರು. 2023ರ ಆಗಸ್ಟ್‌ನಿಂದ 2024ರ ಜನವರಿವರೆಗೆ ತಿಂಗಳಿಗೆ ಸರಾಸರಿ 2 ಕೋಟಿ ಯೂನಿಟ್ ಬಳಕೆ ಅಧಿಕವಾಗಿತ್ತು.

'ಉಚಿತ ವಿದ್ಯುತ್ ಯೋಜನೆ ಜಾರಿಯಾದ ಮೇಲೆ ಜನರು ಜಾಗರೂಕವಾಗಿ ವಿದ್ಯುತ್ ಬಳಕೆ ಮಾಡುವುದು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದ್ದು ನಿಜ. ಇದರಿಂದಾಗಿ ಬಹುತೇಕ ಗ್ರಾಹಕರಿಗೆ 'ಶೂನ್ಯ' ಬಿಲ್ ಬದಲು ಸಣ್ಣ ಮೊತ್ತ ಪಾವತಿಗೆ ಬರುತ್ತಿತ್ತು' ಎಂದು ಬೆಸ್ಕಾಂ ಅಧಿಕಾರಿಗಳು ಮಾಹಿತಿ ನೀಡಿದರು.

'ಕಡಿಮೆ ಆಗಲಿದೆ ಬಿಲ್'

ಮಹಾಂತೇಶ ಬೀಳಗಿ

ಫೆಬ್ರುವರಿಯಿಂದ ವಿದ್ಯುತ್ ಬಳಕೆ ಹೆಚ್ಚಾಗತೊಡಗಿದ್ದು, ಏಪ್ರಿಲ್‌ನಲ್ಲಿ ಅತಿ ಹೆಚ್ಚು ಬಳಕೆಯಾಗಿತ್ತು. ಬಿಸಿಲಿನಿಂದ ಪಾರಾಗಲು ಮನೆಗಳಲ್ಲಿ ಫ್ಯಾನ್, ಕೂಲರ್, ಎ.ಸಿ ಬಳಕೆ ಹೆಚ್ಚು ಮಾಡಿರುವುದು ಅದಕ್ಕೆ ಕಾರಣ. ಈಗ ಮಳೆ ಬರುತ್ತಿದೆ. ಮುಂದಿನ ತಿಂಗಳಿನಿಂದ ಮತ್ತೆ ವಿದ್ಯುತ್ ಬಳಕೆ ಕಡಿಮೆಯಾಗಲಿದೆ. ಅದಕ್ಕೆ ಸರಿಯಾಗಿ ಬಿಲ್ ಕೂಡ ಕಡಿಮೆಯಾಗಲಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ 'ಪ್ರಜಾವಾಣಿ'ಗೆ ತಿಳಿಸಿದರು.

ಮೂರು ತಿಂಗಳ ವಿದ್ಯುತ್ ಪ್ರಮಾಣ (ಕೋಟಿ ಯೂನಿಟ್‌ಗಳಲ್ಲಿ)

77.94 — ಫೆಬ್ರುವರಿಯಲ್ಲಿ ಬಳಕೆಯಾದ ವಿದ್ಯುತ್

75.98 — ಮಾರ್ಚ್‌ನಲ್ಲಿ ಬಳಕೆಯಾದ ವಿದ್ಯುತ್

90 — ಏಪ್ರಿಲ್‌ನಲ್ಲಿ ಬಳಕೆಯಾದ ವಿದ್ಯುತ್

ಸರಾಸರಿ ವಿದ್ಯುತ್ ಬಳಕೆ ವಿವರ

74.9 ಕೋಟಿ ಯೂನಿಟ್ — ಗೃಹಜ್ಯೋತಿ ಜಾರಿಗೆ ಮೊದಲು 3 ತಿಂಗಳಿಗೆ ಬಳಕೆಯಾಗುತ್ತಿದ್ದ ಸರಾಸರಿ ವಿದ್ಯುತ್

76.9 ಕೋಟಿ ಯೂನಿಟ್ — ಗೃಹಜ್ಯೋತಿ ಜಾರಿ ನಂತರ 3 ತಿಂಗಳಿಗೆ ಬಳಕೆಯಾಗುತ್ತಿದ್ದ ಸರಾಸರಿ ವಿದ್ಯುತ್

81.3 ಕೋಟಿ ಯೂನಿಟ್ — ಈ ಬೇಸಿಗೆಯಲ್ಲಿ 3 ತಿಂಗಳಿಗೆ ಬಳಕೆಯಾದ ಸರಾಸರಿ ವಿದ್ಯುತ್

ಲೈಂಗಿಕ ದೌರ್ಜನ್ಯ: ಭದ್ರತಾ ಸಿಬ್ಬಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹತ್ತು ವರ್ಷ ವಯಸ್ಸಿನ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ರಾಜೇಶ್ (55) ಎಂಬುವವರನ್ನು ಹೆಬ್ಬಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಿಹಾರದ ರಾಜೇಶ್, ಕೆಲಸ ಹುಡುಕಿಕೊಂಡು ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದ. ನಾಗೇನಹಳ್ಳಿ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸಕ್ಕೆ ಸೇರಿದ್ದ' ಎಂದು ಪೊಲೀಸರು ಹೇಳಿದರು.

'ಸಂತ್ರಸ್ತ ಬಾಲಕಿಯ ಪೋಷಕರು ನೇಪಾಳದವರು. ಅವರು ಸಹ ಕೆಲಸ ಹುಡುಕಿಕೊಂಡು ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದಾರೆ. ನಾಗೇನಹಳ್ಳಿಯಲ್ಲಿರುವ ಮತ್ತೊಂದು ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಪೋಷಕರು ಕೆಲಸ ಮಾಡುತ್ತಿದ್ದರು. ಅವರ ಜೊತೆ ಬಾಲಕಿ ವಾಸವಿದ್ದಳು' ಎಂದು ತಿಳಿಸಿದರು.

ಚಾಕೊಲೇಟ್ ಆಮಿಷ: 'ಬಾಲಕಿಯನ್ನು ಪರಿಚಯ ಮಾಡಿಕೊಂಡಿದ್ದ ಆರೋಪಿ, ಆಗಾಗ ಮಾತನಾಡಿಸುತ್ತಿದ್ದ. ಶನಿವಾರ ರಾತ್ರಿ ಬಾಲಕಿ ಬಳಿ ಹೋಗಿದ್ದ ಆರೋಪಿ, ಚಾಕೊಲೇಟ್ ಕೊಡಿಸುವುದಾಗಿ ಆಮಿಷವೊಡ್ಡಿ ಶೌಚಾಲಯದೊಳಗೆ ಕರೆದೊಯ್ದು ದೌರ್ಜನ್ಯ ಎಸಗಿದ್ದ' ಎಂದು ಪೊಲೀಸರು ಹೇಳಿದರು.

'ದೌರ್ಜನ್ಯದ ಸಂಗತಿಯನ್ನು ಬಾಲಕಿ ಪೋಷಕರಿಗೆ ತಿಳಿಸಿದ್ದಳು. ಬಳಿಕವೇ ಪೋಷಕರು ಠಾಣೆಗೆ ದೂರು ನೀಡಿದ್ದಾರೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ಆರೋಪಿ ರಾಜೇಶ್‌ನನ್ನು ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ತಿಳಿಸಿದರು.

ಅಪರಾಧ ಸುದ್ದಿ

ಅಡ್ಡಾದಿಡ್ಡಿ ಚಾಲನೆ: ಸರಣಿ ಅಪಘಾತ– ಒಂದು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾನಮತ್ತ ಚಾಲಕನೊಬ್ಬ ಅಡ್ಡಾದಿಡ್ಡಿ ಕಾರು ಚಲಾಯಿಸಿ ಸರಣಿ ಅಪಘಾತವನ್ನುಂಟು ಮಾಡಿದ್ದು, ಇದರಿಂದಾಗಿ ಬೈಕ್ ಸವಾರ ವಿನಯ್ (32) ಎಂಬುವವರು ಮೃತಪಟ್ಟಿದ್ದಾರೆ.

ಸುಬ್ರಮಣ್ಯನಗರದ ಮುಖ್ಯರಸ್ತೆಯಲ್ಲಿ ಭಾನುವಾರ ಸರಣಿ ಅಪಘಾತ ಸಂಭವಿಸಿದ್ದು, ಈ ಸಂಬಂಧ ಮಲ್ಲೇಶ್ವರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸುಬ್ರಮಣ್ಯನಗರದ ವಿನಯ್ ಅವರು ಸ್ನೇಹಿತನ ಜೊತೆ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತಕ್ಕೆ ಕಾರಣ ಎನ್ನಲಾದ ಕಾರು ಚಾಲಕ ಹರಿನಾಥ್ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಮಲ್ಲೇಶ್ವರ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಪಾನಮತ್ತನಾಗಿದ್ದ ಹರಿನಾಥ್, ಕಾರು ಚಲಾಯಿಸಿಕೊಂಡು ಹೊರಟಿದ್ದ. ಸುಬ್ರಮಣ್ಯನಗರದ ಮುಖ್ಯರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ಕಾರು ಚಲಾಯಿಸಿ, ಆಟೊಗೆ ಗುದ್ದಿಸಿದ್ದ. ನಂತರ, ವಿನಯ್ ಅವರ ಬೈಕ್‌ಗೂ ಕಾರು ಡಿಕ್ಕಿ ಹೊಡೆದಿತ್ತು. ಅಪಘಾತದಿಂದಾಗಿ ವಿನಯ್ ಹಾಗೂ ಸ್ನೇಹಿತನಿಗೆ ತೀವ್ರ ಗಾಯವಾಗಿತ್ತು. ಇಬ್ಬರನ್ನೂ ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು' ಎಂದು ತಿಳಿಸಿದರು.

'ವಿನಯ್ ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಸ್ನೇಹಿತನ ಆರೋಗ್ಯ ಸ್ಥಿತಿಯೂ ಚಿಂತಾಜನಕವಾಗಿದೆ' ಎಂದು ಪೊಲೀಸರು ಹೇಳಿದರು.

ಕಾರಿನಿಂದ ಇಳಿಯದ ಆರೋಪಿ: 'ಅಪಘಾತದ ನಂತರವೂ ಆರೋಪಿ ಕಾರಿನಿಂದ ಇಳಿದಿರಲಿಲ್ಲ. ಸ್ಥಳದಲ್ಲಿ ಸೇರಿದ್ದ ಜನ, ಆತನನ್ನು ಕಾರಿನಿಂದ ಇಳಿಸಲು ಯತ್ನಿಸಿ ವಿಫಲರಾಗಿದ್ದರು. ಸ್ಥಳಕ್ಕೆ ಹೋಗಿದ್ದ ಗಸ್ತು ವಾಹನದ ಸಿಬ್ಬಂದಿ, ಆರೋಪಿಯನ್ನು ಕಾರಿನಿಂದ ಇಳಿಸಿ ವಶಕ್ಕೆ ಪಡೆದು ಠಾಣೆಗೆ ಒಪ್ಪಿಸಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಆರೋಪಿ ಮದ್ಯ ಕುಡಿದು ಕಾರು ಚಲಾಯಿಸಿದ್ದರಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ವರದಿ ಬರಬೇಕಿದೆ' ಎಂದು ಪೊಲೀಸರು ಹೇಳಿದರು.

ಕೆ.ಆರ್. ಮಾರುಕಟ್ಟೆ: ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಮಾರುಕಟ್ಟೆಯ ವಾಣಿಜ್ಯ ಸಂಕೀರ್ಣದ ಬಳಿ ವ್ಯಕ್ತಿಯೊಬ್ಬರ ಮೃತದೇಹ ಪತ್ತೆಯಾಗಿದ್ದು, ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

'ಭಾನುವಾರ ಬೆಳಿಗ್ಗೆ ಮೃತದೇಹ ಪತ್ತೆಯಾಗಿದ್ದು, ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿದೆ. ಮೃತ ವ್ಯಕ್ತಿಯ ಹೆಸರು ಹಾಗೂ ವಿಳಾಸ ಗೊತ್ತಾಗಿಲ್ಲ. ಕೊಲೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಂದಾಜು 30 ವರ್ಷದಿಂದ 35 ವರ್ಷದ ವ್ಯಕ್ತಿಯ ತಲೆಗೆ ತೀವ್ರ ಪೆಟ್ಟಾಗಿದೆ. ಆರೋಪಿಗಳು ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಂದು ಪರಾರಿಯಾಗಿರುವ ಶಂಕೆ ಇದೆ. ಮೃತನ ಫೋಟೊವನ್ನು ಎಲ್ಲ ಠಾಣೆಗಳಿಗೆ ಕಳುಹಿಸಲಾಗಿದ್ದು, ಗುರುತು ಪತ್ತೆ ಮಾಡಲಾಗುತ್ತಿದೆ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಭಾರತದ ಮೊದಲ 'ಬಾಹ್ಯಾಕಾಶ ಪ್ರವಾಸಿ' ಗೋಪಿ ಥೋಟಾಕುರ

ಹ್ಯೂಸ್ಟನ್ (ಪಿಟಿಐ): ಉದ್ಯಮಿ ಗೋಪಿ ಥೋಟಾಕುರ ಭಾನುವಾರ ಬಾಹ್ಯಾಕಾಶ ಪ್ರವಾಸಕ್ಕೆ ತೆರಳಿದ ಮೊದಲ ಭಾರತೀಯರೆನಿಸಿಕೊಂಡರು.

ಅಮೆಜಾನ್ ಸಂಸ್ಥಾಪಕ ಜೆಫ್ ಬೆಝೋ ಅವರ 'ಬ್ಲ್ಯೂ ಆರಿಜಿನ್‌ನ ಎನ್‌ಎಸ್‌–25' ಬಾಹ್ಯಾಕಾಶ ಯಾನಕ್ಕೆ ಆಯ್ಕೆಯಾದ ಆರು ಸದಸ್ಯರಲ್ಲಿ ಥೋಟಾಕುರ ಅವರೂ ಒಬ್ಬರೆನಿಸಿಕೊಂಡರು.

'ಬ್ಲ್ಯೂ ಆರಿಜಿನ್‌ನ ಎನ್‌ಎಸ್‌–25'ರ ಏಳನೇ

ಬಾಹ್ಯಾಕಾಶ ವಿಮಾನವನ್ನು ಪಶ್ಚಿಮ ಟೆಕ್ಸಾಸ್‌ನ ಉಡ್ಡಯನ ಪ್ರದೇಶದಿಂದ ಭಾನುವಾರ ಬೆಳಿಗ್ಗೆ ಉಡಾವಣೆ ಮಾಡಲಾಯಿತು ಎಂದು ಕಂಪನಿಯು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದೆ.

ಭಾರತ ಸೇನೆಯ ವಿಂಗ್ ಕಮಾಂಡರ್ ಆಗಿದ್ದ ರಾಕೇಶ್ ಶರ್ಮ ಅವರು 1984ರಲ್ಲಿ ಬಾಹ್ಯಾಕಾಶ ಯಾನವನ್ನು ಕೈಗೊಂಡ ಮೊದಲಿಗರೆನಿಸಿಕೊಂಡಿದ್ದರು. ಆದರೆ, ಥೋಟಾಕುರ ಅವರು ಭಾರತದ ಮೊದಲ 'ಸ್ಪೇಸ್ ಟೂರಿಸ್ಟ್' ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಹಾರ್ಟ್ಸ್‌ಫೀಲ್ಡ್–ಜಾಕ್ಸನ್ ಅಟ್ಲಾಂಟಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಪ್ರಿಸರ್ವ್ ಲೈಫ್ ಕಾರ್ಪೊರೇಷನ್ ಎಂಬ ಕಂಪನಿ ಇದ್ದು, ಗೋಪಿ ಥೋಟಾಕುರ ಅದರ ಸಹ ಸಂಸ್ಥಾಪಕರಾಗಿದ್ದಾರೆ.

ತುಂಡಾದ ಜಿಪ್‌ಲೈನ್ ತಂತಿ ಬಿದ್ದು ಮಹಿಳೆ ಸಾವು

ಹಾರೋಹಳ್ಳಿ: ತಾಲ್ಲೂಕಿನ ಬೆಟ್ಟಹಳ್ಳಿ ಗ್ರಾಮದ ಜಂಗಲ್ ಟ್ರಯಲ್ಸ್ ರೆಸಾರ್ಟ್‌ನಲ್ಲಿ ಭಾನುವಾರ ಬೆಳಿಗ್ಗೆ ಜಿಪ್‌ಲೈನ್ ಆಡುವಾಗ ತಂತಿ ತುಂಡರಿಸಿದ ಕಾರಣ 20 ಅಡಿ ಎತ್ತರದಿಂದ ಬಿದ್ದು ಮಹಿಳೆಯೊಬ್ಬರು ಸಾವಿಗೀಡಾಗಿದ್ದಾರೆ. ಘಟನೆಯಲ್ಲಿ ಇಬ್ಬರು ಗಾಯಗೊಂಡಿದ್ದಾರೆ.

ಆನೇಕಲ್ ತಾಲ್ಲೂಕಿನ ಅತ್ತಿಬೆಲೆಯ ರಂಜನಿ (35) ಮೃತ ಮಹಿಳೆ. ಅವರಿಗೆ ಪತಿ ಮತ್ತು ಇಬ್ಬರು ಮಕ್ಕಳಿದ್ದಾರೆ. ಬೆಂಗಳೂರಿನ ಜೆ.ಪಿ. ನಗರದ ಮಿಲನ ನರ್ಸಿಂಗ್ ಹೋಂನಲ್ಲಿ ಅವರು ಕೆಲಸ ಮಾಡುತ್ತಿದ್ದರು. ರೆಸಾರ್ಟ್ ವ್ಯವಸ್ಥಾಪಕ ಕನಕಪುರದ ಪುಟ್ಟಮಾದು ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ರೆಸಾರ್ಟ್ ಮಾಲೀಕರು ಸುರಕ್ಷಾ ನಿಯಮ ಪಾಲಿಸಿಲ್ಲ. ಅಜಾಗರೂಕತೆ, ನಿರ್ಲಕ್ಷ್ಯ ವಹಿಸಿದ್ದಾರೆ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆರೋಪಿಸಿ ರಂಜನಿ ಅವರ ಸ್ನೇಹಿತೆ ನಿರ್ಮಲಾ ಹಾರೋಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಹಾರೋಹಳ್ಳಿ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಪೆಟ್ರೋಲ್ ಟ್ಯಾಂಕ್ ಮೇಲೆ ಯುವತಿ: ಸವಾರ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್‌ನ ಪೆಟ್ರೋಲ್ ಟ್ಯಾಂಕ್ ಮೇಲೆ ಯುವತಿಯನ್ನು ಕೂರಿಸಿಕೊಂಡು ಅಪಾಯಕಾರಿ ರೀತಿಯಲ್ಲಿ ಚಾಲನೆ ಮಾಡಿದ್ದ ಆರೋಪದಡಿ ಸಿಲಂಬರಸನ್ (21) ಎಂಬುವವರನ್ನು ಹೆಬ್ಬಾಳ ಸಂಚಾರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಯಲಹಂಕದಿಂದ ಹೆಬ್ಬಾಳಕ್ಕೆ ಸಂಪರ್ಕ ಕಲ್ಪಿಸುವ ಕೊಡಿಗೇಹಳ್ಳಿ ಮೇಲ್ಸೇತುವೆಯಲ್ಲಿ ಯುವತಿ ಜೊತೆ ಆರೋಪಿ ಬೈಕ್‌ನಲ್ಲಿ ಸಂಚರಿಸಿದ್ದ. ಇದರ ವಿಡಿಯೊ ಚಿತ್ರೀಕರಿಸಿದ್ದ ಸಾರ್ವಜನಿಕರೊಬ್ಬರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದರು. ಅದನ್ನು ಆಧರಿಸಿ ಆರೋಪಿಯನ್ನು ಪತ್ತೆ ಮಾಡಲಾಗಿದೆ. ಬೈಕ್ ಸಹ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಬೈಕ್‌ನ ಪೆಟ್ರೋಲ್ ಟ್ಯಾಂಕ್ ಮೇಲೆ ಯುವತಿಯನ್ನು ಕೂರಿಸಿಕೊಂಡಿದ್ದ ಆರೋಪಿ, ಅತಿ ವೇಗವಾಗಿ ಬೈಕ್ ಚಲಾಯಿಸಿದ್ದ. ಜತೆಗೆ, ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ. ಇವರ ವರ್ತನೆಯಿಂದ ಸಾರ್ವಜನಿಕರ ಜೀವಕ್ಕೆ ಕುತ್ತು ಉಂಟಾಗುವ ಸಾಧ್ಯತೆ ಇತ್ತು' ಎಂದರು.

ಗೋವಾದಲ್ಲಿ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷದ ಲೋಕಸಭಾ ಚುನಾವಣೆ ಪ್ರಣಾಳಿಕೆ ಬಗ್ಗೆ ಸುಳ್ಳು ಸುದ್ದಿ ಪೋಸ್ಟ್ ಮಾಡಿದ್ದ ಆರೋಪದಡಿ ವಿನಿತ್ ನಾಯ್ಕ್ ಅಲಿಯಾಸ್ ಭಿಕುಮಾತ್ರೆ ಎಂಬುವವರನ್ನು ನಗರದ ಸೈಬರ್ ಕ್ರೈಂ ಠಾಣೆ ಪೊಲೀಸರು ಗೋವಾದಲ್ಲಿ ಬಂಧಿಸಿದ್ದಾರೆ.

'ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಆರೋಪಿ ಪೋಸ್ಟ್ ಪ್ರಕಟಿಸಿದ್ದ. ಈ ಬಗ್ಗೆ ಕಾಂಗ್ರೆಸ್ ಕಾರ್ಯಕರ್ತ ಜೆ. ಸರವಣನ್ ಅವರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿತ್ತು. ತಾಂತ್ರಿಕ ಪುರಾವೆಗಳನ್ನು ಆಧರಿಸಿ ಆರೋಪಿಯನ್ನು ಗೋವಾದಲ್ಲಿ ಬಂಧಿಸಲಾಗಿದ್ದು, ನಗರಕ್ಕೆ ಕರೆತರಲಾಗಿದೆ' ಎಂದು ಪೊಲೀಸರು ಹೇಳಿದರು.

'ಹಿಂದಿ ಸಿನಿಮಾವೊಂದರ ಪಾತ್ರಧಾರಿ ಹೆಸರು ಭಿಕುಮಾತ್ರೆ. ಇದೇ ಹೆಸರು ಬಳಸಿಕೊಂಡು ಆರೋಪಿ, 'ಎಕ್ಸ್'ನಲ್ಲಿ ಖಾತೆ ತೆರೆದಿದ್ದ. 'ಭಿಕುಮಾತ್ರೆ (ಮೋದಿ ಫ್ಯಾಮಿಲಿ)' ಎಂಬುದಾಗಿ ಬರೆದುಕೊಂಡಿದ್ದ. ಇದೇ ಖಾತೆಯಲ್ಲಿಯೇ ಏಪ್ರಿಲ್ 22ರಂದು ಸುಳ್ಳು ಪೋಸ್ಟ್ ಪ್ರಕಟಿಸಿದ್ದ.'

'ಹಿಂದೂ– ಮುಸ್ಲಿಂ ಸಮುದಾಯಗಳ ನಡುವೆ ದ್ವೇಷವನ್ನು ಉಂಟುಮಾಡುವ ಹಾಗೂ ಕೋಮು ಸೌಹಾರ್ದಕ್ಕೆ ಧಕ್ಕೆ ತರುವ ಉದ್ದೇಶ ಪೋಸ್ಟ್‌ನಲ್ಲಿರುವುದಾಗಿ ದೂರುದಾರರು ಆರೋಪಿಸಿದ್ದರು. ಜತೆಗೆ, ಕಾಂಗ್ರೆಸ್ ಪಕ್ಷಕ್ಕೆ ಕೆಟ್ಟ ಹೆಸರು ತರುವ ಕೃತ್ಯವೆಂದು ದೂರಿದ್ದರು' ಎಂದು ಪೊಲೀಸರು ಹೇಳಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಯನ್ನು ತಿರುಚಿ ವಿಡಿಯೊ ಸೃಷ್ಟಿಸಿದ್ದ ಆರೋಪಿ, ಅದನ್ನೂ ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದ. ವಿಡಿಯೊ ಎಲ್ಲೆಡೆ ಹರಿದಾಡುತ್ತಿದ್ದಂತೆ, ಹೆದರಿ ಅಳಿಸಿ ಹಾಕಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಹೇಳಿದರು.

'ಗೋವಾದ ವಿನೀತ್, ಬಿಜೆಪಿಯಲ್ಲಿ ಗುರುತಿಸಿಕೊಂಡಿದ್ದನೆಂದು ಗೊತ್ತಾಗಿದೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ಕೋರಲಾಗುವುದು' ಎಂದು ಪೊಲೀಸರು ಹೇಳಿದರು.

ಸುಲಿಗೆಗೆ ಹೊಂಚು: ಆಟೊ ಚಾಲಕರ ಸೆರೆ

ಬೆಂಗಳೂರು: ಮಾರಕಾಸ್ತ್ರಗಳನ್ನು ಇಟ್ಟುಕೊಂಡು ಜನರನ್ನು ಸುಲಿಗೆ ಮಾಡಲು ಹೊಂಚು ಹಾಕುತ್ತಿದ್ದ ಇಬ್ಬರು ಆರೋಪಿಗಳನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕಾವಲ್‌ಭೈರಸಂದ್ರದ ಮುಬಾರಕ್ ಪಾಷಾ, ಗೋವಿಂದಪುರದ ಫರಾಜ್ ಷರೀಫ್ ಬಂಧಿತರು. ಇವರಿಬ್ಬರೂ ಆಟೊ ಚಾಲಕರು. ಇವರಿಬ್ಬರು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸರು ಹೇಳಿದರು.

'ಚೇಳಿಕೆರೆ ಬಳಿಯ ಪೂಜಪ್ಪ ಬಡಾವಣೆಯಲ್ಲಿ ಆರೋಪಿಗಳು ಅನುಮಾನಾಸ್ಪದ ರೀತಿಯಲ್ಲಿ ಸುತ್ತಾಡುತ್ತಿದ್ದರು. ಗಸ್ತಿನಲ್ಲಿದ್ದ ಸಿಬ್ಬಂದಿ, ಆರೋಪಿಯನ್ನು ವಿಚಾರಿಸಿದ್ದರು. ಇದೇ ಸಂದರ್ಭದಲ್ಲಿ ಆರೋಪಿಗಳ ಬಳಿ ಮಾರಕಾಸ್ತ್ರಗಳಿರುವುದು ಗೊತ್ತಾಗಿತ್ತು. ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆ ನಡೆಸಿದಾಗ, ಅಪರಾಧ ಕೃತ್ಯಕ್ಕೆ ಹೊಂಚು ಹಾಕುತ್ತಿದ್ದ ಸಂಗತಿ ಪತ್ತೆಯಾಯಿತು' ಎಂದರು.

'ಪೆನ್‌ಡ್ರೈವ್ ವ್ಯಾಪಾರಕ್ಕಿಟ್ಟ ದೇವರಾಜೇಗೌಡ'

ಬೆಂಗಳೂರು: 'ಹಾಸನ ಜಿಲ್ಲೆಯ ಬಿಜೆಪಿ ಮುಖಂಡ ದೇವರಾಜೇಗೌಡ ಅಶ್ಲೀಲ ವಿಡಿಯೊ ಒಳಗೊಂಡ ಪೆನ್‌ಡ್ರೈವ್‌ಗಳನ್ನು ವ್ಯಾಪಾರಕ್ಕೆ ಇಟ್ಟಿದ್ದಾರೆ' ಎಂದು ಮಾಜಿ ಸಚಿವ ಎಲ್.ಆರ್. ಶಿವರಾಮೇಗೌಡ ಆರೋಪಿಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಪೆನ್‌ಡ್ರೈವ್ ಪ್ರಕರಣದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ನನ್ನ ಪಾತ್ರ ಇಲ್ಲ. ಪ್ರಜ್ವಲ್ ಪ್ರಕರಣ ಹೊರಬಂದ ಬಳಿಕ ನನ್ನನ್ನು ಸಂಪರ್ಕಿಸಿದ್ದ ಅವರು, ಶಿವಕುಮಾರ್ ಅವರನ್ನು ಭೇಟಿ ಮಾಡಿಸುವಂತೆ ಕೋರಿದ್ದರು. ಹಾಗಾಗಿ, ದೂರವಾಣಿಯಲ್ಲಿ ಮಾತನಾಡಿದ್ದೆ. ಅದೇ ದೊಡ್ಡ ಅಪರಾಧವಾಗಿದೆ' ಎಂದರು.

ಇರಾನ್ ಅಧ್ಯಕ್ಷರಿದ್ದ ಹೆಲಿಕಾಪ್ಟರ್ ಅಪಘಾತ

ಒಂದನೇ ಪುಟದಿಂದ...

63 ವರ್ಷ ವಯಸ್ಸಿನ, ಅಧ್ಯಕ್ಷ ಇಬ್ರಾಹಿಂ ರೈಸಿ ಅವರ ಸುರಕ್ಷತೆ ಕುರಿತಂತೆ ಇರಾನ್‌ನಲ್ಲಿ ಆತಂಕ ಮನೆಮಾಡಿದೆ. ಹೆಲಿಕಾಪ್ಟರ್‌ನಲ್ಲಿ ರೈಸಿ ಅವರಲ್ಲದೇ, ಇರಾನ್‌ನ ವಿದೇಶಾಂಗ ವ್ಯವಹಾರಗಳ ಸಚಿವ ಅಮೀರ್ ಅಬ್ದೊಲ್ಲಾಹಿಯಾಂ ಹಾಗೂ ಕೆಲ ಹಿರಿಯ ಅಧಿಕಾರಿಗಳು ಇದ್ದರು.

ಹೆಲಿಕಾಪ್ಟರ್ 'ನಾಪತ್ತೆ'ಯಾಗಿರುವ ಪರ್ವತ ಪ್ರದೇಶಗಳಲ್ಲಿ ದಟ್ಟನೆಯ ಮಂಜು ಮುಸುಕಿದ್ದು, ಶೋಧ ಕಾರ್ಯಕ್ಕೆ ತೊಡಕಾಗಿದೆ. ಶೋಧ ಹಾಗೂ ರಕ್ಷಣಾ ತಂಡಗಳು ಕಾರ್ಯಾಚರಣೆಯನ್ನು ಚುರುಕುಗೊಳಿಸಿವೆ.

'ಅಧ್ಯಕ್ಷರು ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್ ಜೋಲ್ಫಾ ವಲಯದಲ್ಲಿ ಅಪಘಾತಕ್ಕೀಡಾಗಿದೆ' ಎಂದು ಇರಾನ್‌ನ ರಾಷ್ಟ್ರೀಯ ಸುದ್ದಿ ವಾಹಿನಿ ವರದಿ ಮಾಡಿದೆ. 'ಇದು ಅಪಘಾತ' ಎಂದು ಕೆಲ ಅಧಿಕಾರಿಗಳು ಹೇಳಿದ್ದಾರೆ.

ಪ್ರತಿಕೂಲ ಹವಾಮಾನದಿಂದಾಗಿ ರಕ್ಷಣಾ ಕಾರ್ಯ ಕಷ್ಟಕರವಾಗಿದೆ. ಅಪಘಾತ ಸ್ಥಳ ಪತ್ತೆ ಮಾಡುವುದು ಹಾಗೂ ಅಲ್ಲಿಗೆ ತಲುಪುವುದು ದುಸ್ತರವಾಗಿದೆ ಎಂದು ವಾಹಿನಿಯೊಂದು ವರದಿ ಮಾಡಿದೆ.

ಶ್ವಾನದಳದ ನೆರವು ಹಾಗೂ ಡ್ರೋನ್‌ಗಳ ಸಹಾಯವನ್ನೂ ಒದಗಿಸಿ, 40ಕ್ಕೂ ಹೆಚ್ಚು ತಂಡಗಳನ್ನು ರಕ್ಷಣಾ ಕಾರ್ಯಕ್ಕಾಗಿ ಅಪಘಾತ ನಡೆದಿರುವ ಸ್ಥಳಕ್ಕೆ ಕಳುಹಿಸಲಾಗಿದೆ ಎಂದು ಐಆರ್‌ಎನ್‌ಎ ಸುದ್ದಿ ಸಂಸ್ಥೆ ವರದಿ ತಿಳಿಸಿದೆ.

ಸೇನಾಯೋಧರು, ಭದ್ರತಾ ಸಿಬ್ಬಂದಿ, ಪೊಲೀಸರ ತಂಡಗಳನ್ನೂ ನಿಯೋಜಿಸಲಾಗಿದೆ ಎಂದು ಸೇನ ಮುಖ್ಯಸ್ಥ ಮೊಹಮ್ಮದ್ ಬಘೇರಿ ತಿಳಿಸಿದ್ದಾರೆ.

ಅಣೆಕಟ್ಟು ಉದ್ಘಾಟಿಸಲು ಬಂದಿದ್ದರು: ಅಜರ್‌ಬೈಜಾನ್‌ನಲ್ಲಿ ಅರಾಸ್ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಅಣೆಕಟ್ಟು ಉದ್ಘಾಟನೆಗಾಗಿ ರೈಸಿ ಆಗಮಿಸಿದ್ದರು. ಈ ಕಾರ್ಯಕ್ರಮದಲ್ಲಿ ಅಜರ್‌ಬೈಜಾನ್ ಅಧ್ಯಕ್ಷ ಇಲ್ಹಮ್ ಅಲಿಯೆವ್ ಅವರು ಇದ್ದರು.

ರೈಸಿ ಅವರು ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್‌ನ ಜೊತೆಗೆ ಬೆಂಗಾವಲಿನ ಎರಡು ಹೆಲಿಕಾಪ್ಟರ್‌ಗಳು ಹಾರಾಟ ಆರಂಭಿಸಿದ್ದವು. ಅವು ಸುರಕ್ಷಿತವಾಗಿ ನಿಗದಿತ ತಾಣ ತಲುಪಿವೆ ಎಂದು ತಾಸಿಂ ಸುದ್ದಿ ಸಂಸ್ಥೆ ವರದಿ ತಿಳಿಸಿದೆ.

ಶೋಧ ಕಾರ್ಯಕ್ಕೆ ವಿದೇಶಗಳ ನೆರವು

ಇರಾನ್‌ನ ಅಧ್ಯಕ್ಷರು ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್ ಅಪಘಾತಕ್ಕೀಡಾಗಿದೆ ಎಂಬ ಬೆಳವಣಿಗೆಯನ್ನು ವಿದೇಶಗಳು ಸೂಕ್ಷ್ಮವಾಗಿ ಗಮನಿಸುತ್ತಿವೆ.

ಹಮಾಸ್ ಬಂಡುಕೋರರು ಮತ್ತು ಇರಾನ್ ನಡುವೆ ಗಾಜಾದಲ್ಲಿ ಸಂಘರ್ಷ ನಡೆದಿದ್ದು, ಪ್ರಾದೇಶಿಕವಾಗಿ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿರುವ ಈ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಲು ಕಾರಣವಾಗಿದೆ.

'ಸಂಬಂಧಿಸಿದ ವರದಿಗಳನ್ನು ನಾವು ಗಮನಿಸುತ್ತಿದ್ದೇವೆ. ಈ ಹಂತದಲ್ಲಿ ಯಾವುದೇ ಪ್ರತಿಕ್ರಿಯೆ ನೀಡಬಯಸುವುದಿಲ್ಲ' ಎಂದು ಅಮೆರಿಕ ರಕ್ಷಣಾ ಇಲಾಖೆಯ ವಕ್ತಾರರು ತಿಳಿಸಿದ್ದಾರೆ.

ನೆರೆಯ ಇರಾಕ್‌ನ ಪ್ರಧಾನಮಂತ್ರಿ ಮೊಹಮ್ಮದ್ ಶಿಯಾ ಅಲ್ ಸುದಾನಿ ಅವರು, ಒಳಾಡಳಿತ ಸಚಿವಾಲಯದ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಅಗತ್ಯವಿರುವ ಎಲ್ಲ ನೆರವು ಒದಗಿಸಲು ಸೂಚಿಸಿದ್ದಾರೆ.

ಅಜರ್‌ಬೈಜಾನ್ ಅಧ್ಯಕ್ಷ ಅಲಿಯೆವ್ ಅವರು, 'ಗಣ್ಯರ ಸುರಕ್ಷತೆಗಾಗಿ ನಾವು ದೇವರಲ್ಲಿ ಪ್ರಾರ್ಥಿಸುತ್ತೇವೆ. ಯಾವುದೇ ರೀತಿಯ ನೆರವು ಒದಗಿಸಲು ದೇಶ ಸಜ್ಜಾಗಿದೆ' ಎಂದು 'ಎಕ್ಸ್'ನಲ್ಲಿ ಸಂದೇಶ ಪೋಸ್ಟ್ ಮಾಡಿದ್ದಾರೆ.

'ಇಲಾಖೆ ಮೇಲೆ ಒತ್ತಡವಿಲ್ಲ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ನೇಹಾ ಹಾಗೂ ಅಂಜಲಿ ಕೊಲೆ ಪ್ರಕರಣಗಳಲ್ಲಿ ತಪ್ಪು ಮಾಡಿದವರ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಈ ವಿಷಯದಲ್ಲಿ ಇಲಾಖೆ ಮೇಲೆ ಯಾವುದೇ ರಾಜಕೀಯ ಒತ್ತಡವಿಲ್ಲ' ಎಂದು ಪೊಲೀಸ್ ಮಹಾನಿರ್ದೇಶಕ (ಕಾನೂನು ಸುವ್ಯವಸ್ಥೆ) ಆರ್.ಹಿತೇಂದ್ರ ಹೇಳಿದರು.

ನಗರದಲ್ಲಿ ಈಚೆಗೆ ಕೊಲೆಗೀಡಾದ ನೇಹಾ ಹಿರೇಮಠ ಮತ್ತು ಅಂಜಲಿ ಅಂಬಿಗೇರ ಅವರ ಮನೆಗಳಿಗೆ ಭಾನುವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. 'ಇಬ್ಬರು ಯುವತಿಯರ ಕೊಲೆ ಘಟನೆಯಿಂದಾಗಿ ಸಾರ್ವಜನಿಕರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಕೊಲೆ ಘಟನೆಗಳು ನಮಗೂ ನೋವುಂಟು ಮಾಡಿವೆ. ಈ ಹಿನ್ನೆಲೆಯಲ್ಲಿ ಹುಬ್ಬಳ್ಳಿಗೆ ಭೇಟಿ ನೀಡಿದ್ದೇನೆ. ನೇಹಾ ಕೊಲೆಗೆ ಸಂಬಂಧಿಸಿದಂತೆ ಈಗಾಗಲೇ ಸಿಐಡಿ ತನಿಖೆ ನಡೆಸುತ್ತಿದೆ. ಅಂಜಲಿ ಪ್ರಕರಣಕ್ಕೆ ಸಂಬಂಧಿಸಿ ಗೃಹ ಸಚಿವರು ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದರು.

'ರಾಜ್ಯದಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗಿದ್ದರೂ ಆರೋಪಿಗಳ ವಿರುದ್ಧ ಕ್ರಮಕೈಗೊಂಡಿಲ್ಲ ಎನ್ನಲಾಗುತ್ತಿದೆ' ಎಂಬ ಮಾಧ್ಯಮದವರ ಪ್ರಶ್ನೆಗೆ, 'ಈ ಮಾತು ನಾನು ಒಪ್ಪುವುದಿಲ್ಲ. 2022–23ನೇ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಕೊಲೆ ಪ್ರಕರಣಗಳ ಸಂಖ್ಯೆ ಕಡಿಮೆ ಇದೆ' ಎಂದು ಹೇಳಿದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ: 9606038256

ಕುಸಿದ ರಸ್ತೆ ದುರಸ್ತಿಗೊಳಿಸಿ

ಶ್ರೀನಿವಾಸಪುರದ ರಸ್ತೆ ಕುಸಿದಿರುವುದು.

ಇತ್ತೀಚೆಗೆ ನಗರದಲ್ಲಿ ಸುರಿದ ಮಳೆಗೆ 198ನೇ ವಾರ್ಡ್‌ನ ಶ್ರೀನಿವಾಸಪುರ ಕಾಲೊನಿಯ 2ನೇ ಕ್ರಾಸ್ ರಸ್ತೆಯು ಕುಸಿದುಹೋಗಿದೆ. ಇದರಿಂದ, ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಪ್ರತಿನಿತ್ಯ ಈ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುತ್ತವೆ. ಆದರೆ, ರಸ್ತೆ ಕುಸಿದ ಪರಿಣಾಮ ಸುತ್ತು ಹಾಕಿ ಮನೆಗಳಿಗೆ ತಲುಪುವ ಸ್ಥಿತಿ ಇಲ್ಲಿನ ಸ್ಥಳೀಯರಿಗೆ ಬಂದಿದೆ. ಈ ಬಗ್ಗೆ ಬಿಬಿಎಂಪಿಗೆ ದೂರು ನೀಡಲಾಗಿದೆ. ಕೂಡಲೇ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಚೆಲುವರಾಜು, ಶ್ರೀನಿವಾಸಪುರ

ಒಣಗಿದ ಮರ ತೆರವುಗೊಳಿಸಿ

ಶ್ರೀರಾಮಪುರ ವ್ಯಾಪ್ತಿಯ ಪ್ರಕಾಶನಗರದ ಪಾದಚಾರಿ ಮಾರ್ಗದಲ್ಲಿ ಮರವೊಂದು ಒಣಗಿಹೋಗಿದೆ. ಈ ಮರ ಗಾಳಿ–ಮಳೆಗೆ ಯಾವಾಗ ಬೇಕಾದರೂ ಬೀಳುವ ಆತಂಕವಿದೆ. ಇಲ್ಲಿನ ಪಾದಚಾರಿ ಮಾರ್ಗದಲ್ಲಿ ಪ್ರತಿನಿತ್ಯ ವೃದ್ಧರು, ಮಕ್ಕಳು, ಮಹಿಳೆಯರು ಸೇರಿದಂತೆ ವಿದ್ಯಾರ್ಥಿಗಳು ಓಡಾಡುತ್ತಾರೆ. ಇಲ್ಲಿ ಏನಾದರೂ ಅನಾಹುತವಾಗುವ ಮುನ್ನ ಈ ಒಣಗಿದ ಮರವನ್ನು ತೆರವುಗೊಳಿಸಬೇಕು.

ಗಿರೀಶ್ ಕುಮಾರ್ ಎಚ್., ಪ್ರಕಾಶನಗರ

ಶ್ರೀರಾಮಪುರದ ಪಾದಚಾರಿ ಮಾರ್ಗದಲ್ಲಿ ಒಣಗಿ ನಿಂತಿರುವ ಮರ.

ರಸ್ತೆಯಲ್ಲಿ ಹರಿಯುವ ಕೊಳಚೆ ನೀರು

ಬಳೆಪೇಟೆ ಮುಖ್ಯರಸ್ತೆಯಲ್ಲಿ ಒಂದು ತಿಂಗಳಿನಿಂದ ಕೊಳಚೆ ನೀರು ಹರಿಯುತ್ತಿದೆ. ಇದರಿಂದ, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ. ಜೊತೆಗೆ ವಾಹನ ಸಂಚಾರಕ್ಕೂ ತೊಂದರೆಯಾಗಿದ್ದು, ಸಂಚಾರ ದಟ್ಟಣೆ ಹೆಚ್ಚುತ್ತಿದೆ. ರಸ್ತೆಯ ಮಧ್ಯದಲ್ಲಿ ಕೊಳಚೆ ನೀರು ಹರಿಯುವುದರಿಂದ, ಬೀದಿಬದಿಯ ವ್ಯಾಪಾರಿಗಳ ವ್ಯಾಪಾರಕ್ಕೂ ಅಡಚಣೆ ಆಗಿದೆ. ತ್ಯಾಜ್ಯ ನೀರು ಹರಿದುಹೋಗಲು ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಪ್ರತಿನಿತ್ಯ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ.

ಎಚ್. ವಿನಾಯಕ್ ಕಲ್ಬುರ್ಗಿ, ಬಳೆಪೇಟೆ

ಬಳೆಪೇಟೆ ಮುಖ್ಯರಸ್ತೆಯಲ್ಲಿ ಹರಿಯುತ್ತಿರುವ ಚರಂಡಿ ನೀರು.

ವರದಿ ಪರಿಣಾಮ

ಗಾಂಧಿನಗರದಲ್ಲಿ ರಸ್ತೆಯಲ್ಲಿ ಹೊಸ ವಿದ್ಯುತ್ ಬಾಕ್ಸ್ ಅಳವಡಿಸಿರುವುದು.

ಗಾಂಧಿನಗರದ ಎರಡನೇ ಮುಖ್ಯರಸ್ತೆಯ ಕ್ರಾಸ್‌ನಲ್ಲಿ ಬಾಗಿಲು ತೆರೆದ ಸ್ಥಿತಿಯಲ್ಲಿದ್ದ ವಿದ್ಯುತ್ ಬಾಕ್ಸ್ ಅನ್ನು ತೆರವುಗೊಳಿಸಿ, ಹೊಸ ಬಾಕ್ಸ್ ಅನ್ನು ಅಳವಡಿಸಲಾಗಿದೆ. 'ಪ್ರಜಾವಾಣಿ'ಯ 'ಕುಂದು ಕೊರತೆ' ವಿಭಾಗದಲ್ಲಿ ಮೇ 13ರಂದು 'ವಿದ್ಯುತ್ ಬಾಕ್ಸ್ ಸರಿಪಡಿಸಿ' ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಬೆಸ್ಕಾಂ ಅಧಿಕಾರಿಗಳು ವಿದ್ಯುತ್ ಬಾಕ್ಸ್ ಅನ್ನು ತೆರವುಗೊಳಿಸುವ ಮೂಲಕ ಮುಂದಾಗುವ ಅನಾಹುತಗಳನ್ನು ತಪ್ಪಿಸಲಾಗಿದೆ' ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

'ಅ.ನ.ಕೃ.ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಲೇಖಕ ಎಸ್‌.ಆರ್‌.ರಾಮಸ್ವಾಮಿ ಅಭಿಮತ

'ಸಾಹಿತ್ಯವನ್ನು ಜೀವನಕ್ಕೆ ಹತ್ತಿರ ತಂದ ಅ.ನ.ಕೃ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡಿಗರಲ್ಲಿ ಓದುವ ಅಭಿರುಚಿ ಬೆಳೆಸಿದ ಅ.ನ.ಕೃಷ್ಣರಾಯರು(ಅ.ನ.ಕೃ), ಸಾಹಿತ್ಯವನ್ನು ಕಾದಂಬರಿ ಪ್ರಕಾರದ ಮೂಲಕ ನಮ್ಮ ಜೀವನಕ್ಕೆ ಹತ್ತಿರ ತಂದರು' ಎಂದು ಲೇಖಕ ಎಸ್.ಆರ್.ರಾಮಸ್ವಾಮಿ ತಿಳಿಸಿದರು.

ಅ.ನ.ಕೃ. ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಬಿ.ಎಸ್.ಸ್ವಾಮಿ ಅವರ ಜತೆಗೆ 'ಅ.ನ.ಕೃ.ಪ್ರಶಸ್ತಿ' ಸ್ವೀಕರಿಸಿ, ಮಾತನಾಡಿದರು. ಪ್ರಶಸ್ತಿಯು ತಲಾ ₹50 ಸಾವಿರ ನಗದು ಒಳಗೊಂಡಿದೆ.

'ಸಾಹಿತ್ಯ, ಸಂಸ್ಕೃತಿಯ ಪರಿಪೋಷಣೆಗೆ ಅ.ನ.ಕೃ ನೀಡಿದ ಕೊಡುಗೆ ಅಪಾರ. ಅವರು ಬಹುಮುಖ ಸಾಧನೆ ಮಾಡಿದ್ದು, ಸಾಹಿತ್ಯ ಕಾರ್ಯವು ಅವರ ಸಾಧನೆಯ ಒಂದು ಮುಖವಾಗಿದೆ. ಕನ್ನಡ ಪರ ಸಂಘಟಿತ ಹೋರಾಟಕ್ಕೂ ಅವರು ಜನ್ಮ ನೀಡಿದ್ದರು. ಕಾದಂಬರಿಯ ಜತೆಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿಯೂ ಅವರು ಸಾಹಿತ್ಯ ಸೃಷ್ಟಿಸಿದ್ದಾರೆ. ಭಾರತೀಯ ಸಾಂಸ್ಕೃತಿಕ ಮೌಲ್ಯವನ್ನು ಅವರು ಕಾದಂಬರಿಗಳ ಮೂಲಕ ಎತ್ತಿಹಿಡಿದರು. ಉದಯೋನ್ಮುಖ ಬರಹಗಾರರನ್ನು ಬೆಳೆಸಿದ ಅವರು, ಉನ್ನತ ಸಂಸ್ಕೃತಿಯ ಮೂರ್ತರೂಪ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಬಿ.ಎಸ್‌.ಸ್ವಾಮಿ ಹಾಗೂ ಎಸ್‌.ಆರ್‌.ರಾಮಸ್ವಾಮಿ ಅವರಿಗೆ 'ಅ.ನ.ಕೃ.ಪ್ರಶಸ್ತಿ' ಪ್ರದಾನ ಮಾಡಲಾಯಿತು. (ಎಡದಿಂದ) ಬಂಡ್ಲಹಳ್ಳಿ ವಿಜಯಕುಮಾರ್, ಶತಾವಧಾನಿ ಆರ್. ಗಣೇಶ್, ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎ. ಜಯಸಿಂಹ, ಶಾ.ಮಂ. ಕೃಷ್ಣರಾಯ ಹಾಗೂ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಗೌತಮ್ ಅ.ನ.ಕೃ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಲೇಖಕ ಬಿ.ಎಸ್.ಸ್ವಾಮಿ, 'ಬರವಣಿಗೆ ಜನಸಾಮಾನ್ಯರನ್ನು ತಲುಪಬೇಕೆ ಹೊರತು ಕೇವಲ ವಿದ್ವಾಂಸರನ್ನು ತಲುಪಿದರೆ ಪ್ರಯೋಜನವಿಲ್ಲ. ಆದ್ದರಿಂದಲೇ ಅ.ನ.ಕೃ ಅವರು ಕಾದಂಬರಿ ಪ್ರಕಾರದ ಮೂಲಕ ಜನರನ್ನು ತಲುಪಿದರು. ಹಲವು ಪ್ರತಿಭೆಗಳನ್ನು ಹೊಂದಿದ್ದ ಅವರು, ಜ್ಞಾನ ಸಂಪಾದನೆ ಹಾಗೂ ಜೀವನಾನುಭವದಿಂದ ಉತ್ತಮ ಭಾಷಣಕಾರರಾಗಿದ್ದರು' ಎಂದು ಹೇಳಿದರು.

ಪ್ರತಿಷ್ಠಾನದ ವಿಶ್ವಸ್ಥ ಹಾಗೂ ಸಾಹಿತಿ ಶಾ.ಮಂ. ಕೃಷ್ಣರಾಯ, 'ಅ.ನ.ಕೃ ಅವರು ಸ್ವಾತಂತ್ರ್ಯ ಸೇರಿ ಅನೇಕ ಚಳವಳಿಗಳಲ್ಲಿ ಭಾಗವಹಿಸಿದ್ದರು. ನಾವೆಲ್ಲ ಅವರಿಂದ ಸ್ಫೂರ್ತಿ ಪಡೆದಿದ್ದೇವೆ' ಎಂದು ಹೇಳಿದರು.

ಎಸ್.ಆರ್.ರಾಮಸ್ವಾಮಿ ಅವರ ಬಗ್ಗೆ ಅಭಿನಂದನಾ ಭಾಷಣ ಮಾಡಿದ ವಿದ್ವಾಂಸ ಶತಾವಧಾನಿ ಆರ್. ಗಣೇಶ್, 'ರಾಮಸ್ವಾಮಿ ಅವರು ಮೂರು ಶತಮಾನದ ಬದುಕಿಗೆ ಸಾಕ್ಷಿಯಾಗಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಇರುವ ಅವಧೂತರಾಗಿದ್ದಾರೆ. ಡಿ.ವಿ.ಜಿ ಅವರಿಗೆ ಸಮರ್ಥ ಉತ್ತರಾಧಿಕಾರಿಯಾಗಿದ್ದು, ಸಾಹಿತ್ಯಿಕ ಕೆಲಸಗಳ ಜತೆಗೆ ಪರಿಸರ, ಸ್ವದೇಶಿ ಆಂದೋಲನಗಳನ್ನೂ ಮಾಡಿದ್ದಾರೆ' ಎಂದು ಹೇಳಿದರು.

ಬಿ.ಎಸ್.ಸ್ವಾಮಿ ಅವರ ಬಗ್ಗೆ ಅಭಿನಂದನಾ ಭಾಷಣ ಮಾಡಿದ ಬರಹಗಾರ ಬಂಡ್ಲಹಳ್ಳಿ ವಿಜಯಕುಮಾರ್, 'ಆಕಾಶವಾಣಿಯಲ್ಲಿ ಕಾರ್ಯಕ್ರಮ ಸಂಯೋಜಕರಾಗಿ ಕಾರ್ಯನಿರ್ವಹಿಸಿದ ಸ್ವಾಮಿ ಅವರು, ಸಂಗೀತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಗ್ರಾಮೀಣ ಭಾಗದ ಕಲಾವಿದರನ್ನು ಸಂದರ್ಶಿಸಿ, ಅವರ ಹಾಡುಗಳನ್ನು ದಾಖಲಿಸಿದ್ದಾರೆ. ವಿವಿಧ ಜನಪದ ಗೀತೆಗಳ ಧಾಟಿ ಕಲಾವಿದರ ಜತೆಗೆ ಮಣ್ಣಾಗುತ್ತಿರುವ ಹೊತ್ತಿನಲ್ಲಿ ಆ ಧಾಟಿಗಳನ್ನು ಉಳಿಸುವ ಕೆಲಸ ಮಡಿದ್ದಾರೆ. ಅವರ ಸಾಹಿತ್ಯದ ಹರವು ದೊಡ್ಡದಾಗಿದೆ' ಎಂದು ತಿಳಿಸಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಶಿಕ್ಷಣ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಗಣಿತ

ಅಧ್ಯಾಯ1 :ಸಮಾಂತರ ಶ್ರೇಢಿ

ಅಭ್ಯಾಸ 1.1

1. ಈ ಕೆಳಗಿನ ಯಾವ ಸಂದರ್ಭಗಳಲ್ಲಿ ಕೊಟ್ಟಿರುವ ಸಂಖ್ಯಾ ಪಟ್ಟಿಯು ಸಮಾಂತರ ಶ್ರೇಢಿಯನ್ನುಂಟು ಮಾಡುತ್ತದೆ ಮತ್ತು ಏಕೆ?

ಪರಿಹಾರ: (..........ಹಿಂದಿನ ಸಂಚಿಕೆಯಿಂದ)

$$=\frac{3x}{4}-\frac{x}{4}\left(\frac{3x}{4}\right)=\frac{3x}{4}-\left(\frac{3x}{16}\right)=\frac{9x}{16}units$$

$$=\left(\frac{3}{4}\right)^2 x \quad units = a_3$$

$$=\left(\frac{3}{4}\right)\left(\frac{3}{4}\right)x$$

$$=\left(\frac{3}{4}\right)^3 x \ units = a_4$$

ಹೀಗೆಯೇ ಮುಂದುವರಿಯುವುದು

$$a_2-a_1=\left(\frac{3x}{4}\right)-x=-\frac{x}{4}units$$

$$a_3-a_2=\left(\frac{3}{4}\right)^2 x-\frac{3}{4}x=-\frac{3}{16}x \quad units$$

$$a_2-a_1 \neq a_3-a_2,$$

ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

ಪರಿಹಾರ: (iii)

ಬಾವಿಯನ್ನು ತೋಡುವಾಗ ಮೊದಲಮೀಟರ್‌ಗೆ ರೂ.150/-= a_1

ಬಾವಿಯನ್ನು ತೋಡುವಾಗ ಎರಡನೇ ಮೀಟರ್‌ಗೆ =

ರೂ 150+ ರೂ 50 = 200 = a_2

ಬಾವಿಯನ್ನು ತೋಡುವಾಗ ಮೂರನೇ ಮೀಟರ್‌ಗೆ =

ರೂ. 200+ರೂ 50 = 250 = a_3

ಬಾವಿಯನ್ನು ತೋಡುವಾಗ ನಾಲ್ಕನೇ ಮೀಟರ್‌ಗೆ =

ರೂ. 250 + ರೂ 50 = 300 = a_4

ಹೀಗೆಯೇ ಮುಂದುವರಿಯುವುದು

$$\Rightarrow a_2-a_1=\text{Rs. }200-\text{Rs. }150=\text{Rs.}50$$

$$\Rightarrow a_3-a_2=\text{Rs.}250-\text{Rs.}200=\text{Rs.}50$$

$$\Rightarrow a_4-a_3=\text{Rs.}300-\text{Rs.}250=\text{Rs.}50$$

ಅಂದರೆ a_{k+1} - a_k ಯು ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ. ಆದ್ದರಿಂದ ಸಾಮಾನ್ಯ ವ್ಯತ್ಯಾಸ d = 50 ಇರುವ ಸಮಾಂತರ ಶ್ರೇಢಿಯನ್ನುಂಟು ಮಾಡಿದೆ.

iv) ಆರಂಭಿಕ ಠೇವಣಿ ರೂ.10000ಕ್ಕೆ 8% ಚಕ್ರಬಡ್ಡಿಯಂತೆ ಪ್ರತಿವರ್ಷ ಆಗುವ ಮೊತ್ತ

ಪರಿಹಾರ: ಚಕ್ರಬಡ್ಡಿ= $P\left(1+\frac{r}{100}\right)^n$

ಇಲ್ಲಿ A =ಅಸಲು, r = ಬಡ್ಡಿದರ n= ವರ್ಷಗಳ ಸಂಖ್ಯೆ

p = 10000 n =8%

ಮೊದಲನೇ ವರ್ಷದ ನಂತರದ ಮೊತ್ತ

$$=\text{Rs.}10000\left(1+\frac{8}{100}\right)=a_1$$

ಎರಡನೇ ವರ್ಷದ ನಂತರದ ಮೊತ್ತ

$$=\text{Rs.}10000\left(1+\frac{8}{100}\right)^2=a_2$$

ಮೂರನೇ ವರ್ಷದ ನಂತರದ ಮೊತ್ತ

$$=\text{Rs.}10000\left(1+\frac{8}{100}\right)^3=a_3$$

ಮೊದಲನೇ ವರ್ಷದ ನಂತರದ ಮೊತ್ತ

$$=\text{Rs.}10000\left(1+\frac{8}{100}\right)=a_1$$

ಎರಡನೇ ವರ್ಷದ ನಂತರದ ಮೊತ್ತ

$$=\text{Rs.}10000\left(1+\frac{8}{100}\right)^2=a_2$$

ಮೂರನೇ ವರ್ಷದ ನಂತರದ ಮೊತ್ತ

$$=\text{Rs.}10000\left(1+\frac{8}{100}\right)^3=a_3$$

ಹೀಗೆಯೇ ಮುಂದುವರಿಯುತ್ತದೆ

ಆದ್ದರಿಂದ ಸಾಮಾನ್ಯ ವ್ಯತ್ಯಾಸ(d) ಸ್ಥಿರವಾಗಿಲ್ಲ ಹೀಗಾಗಿ

$$a_2-a_1 \neq a_3-a_2$$

ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

2) ಮೊದಲನೆ ಪದ a, ಸಾಮಾನ್ಯ ವ್ಯತ್ಯಾಸ d ಈ ಕೆಳಗಿನಂತಿರುವ ಸಮಾಂತರ ಶ್ರೇಢಿಯ ಮೊದಲ ನಾಲ್ಕು ಪದಗಳನ್ನು ಕಂಡುಹಿಡಿಯಿರಿ.

i) a = 10, d = 10 ii) a = -2, d = 0

iii) a = -1, d = ½

ಪರಿಹಾರ:

(i) a = 10, d = 10

ಸಮಾಂತರ ಶ್ರೇಢಿಯು ಕೆಳಗಿನ ರೂಪದಲ್ಲಿದೆ

a, a + d, a + 2d, a + 3d,.........

10, **10 + 10**, 10 + 2(10), **10 + 3(10)**, ...

10, 20, 30, 40,............

ಪರಿಹಾರ: (ii) a = −2, d = 0

ಸಮಾಂತರ ಶ್ರೇಢಿಯು ಕೆಳಗಿನ ರೂಪದಲ್ಲಿದೆ

a, a + d, a + 2d, a + 3d, ...

−2, −2+ 0, −2 + 0, −2 + 0,.........

−2, −2, −2, −2 ....

ಪರಿಹಾರ: (iii) $a = -1, \ d = \frac{1}{2}$

ಸಮಾಂತರ ಶ್ರೇಢಿಯು ಕೆಳಗಿನ ರೂಪದಲ್ಲಿದೆ

a, a + d, a + 2d, a + 3d, ...

$$-1, -1+\frac{1}{2}, -1+2\left(\frac{1}{2}\right), -1+3\left(\frac{1}{2}\right), ...$$

$$-1, -\frac{1}{2}, -1+\frac{1}{4}, -1+\frac{3}{2} ....$$

$$\Rightarrow -1, -\frac{1}{2}, -\frac{3}{4}, \frac{1}{2}, ...$$

3) ಇವುಗಳಲ್ಲಿ ಯಾವುವು ಸಮಾಂತರ ಶ್ರೇಢಿಗಳಾಗಿವೆ? ಸಮಾಂತರ ಶ್ರೇಢಿಗಳಾಗಿದ್ದಲ್ಲಿ ಸಾಮಾನ್ಯ ವ್ಯತ್ಯಾಸ ಕಂಡುಹಿಡಿದು ಅದರ ಮುಂದಿನ ಮೂರು ಪದಗಳನ್ನು ಬರೆಯಿರಿ

(i) 2, 4, 8, 16, . . .

(ii) 2, 5/2 , 3, 7/2 ....

(iii) – 1.2, – 3.2, – 5.2, – 7.2, . . .

(iv) – 10, – 6, – 2, 2, . . .

(v) 3, $3+\sqrt{2}$, $3+2\sqrt{2}$, $3+3\sqrt{2}$, . . .

(vi) 0.2, 0.22, 0.222, 0.2222, . . .

(vii) 0, – 4, – 8, –12, ...

(viii) $-\frac{1}{2}, -\frac{1}{2}, -\frac{1}{2}, -\frac{1}{2}$..................

(ix) 1, 3, 9, 27,

(ಮುಂದುವರಿಯುವುದು)

II PUC PHYSICS

Chapter – 2

ELECTROSTATIC POTENTIAL AND CAPACITANCE

45. Depict the equipotential surfaces for a system of two identical positive point charges placed at distance *d* apart.

Ans: (.....Contd)



46. Given figure shows the variation of electric potential V with 1/r (where r is the distance from the point charge for 2 charges Q_1 & Q_2)

(i) Give signs of two charges Q_1 and Q_2

(ii) Which of the two charges has a larger magnitude? Justify.

Ans:- i) Electric potential due to a point charge Q at a point at distance r from Q is given by,

$$V=\frac{1}{4\pi\epsilon_0}\frac{Q}{r}$$



V is +ve if Q is +ve and V is -ve if Q is -ve. Therefore, Q_1 is +ve charge and Q_2 is -ve charge.

ii) Since $V_2 > V_1$ so charge Q_2 has larger magnitude than that

CAPACITANCE

Answer the following questions:-

1. What are capacitors?

Ans:- Capacitors are electrical devices used for storing large quantity of charge and hence electrical energy.

2. What is capacitance of a capacitor?

Ans:- The capacitance of a capacitor is defined as the ratio of the magnitude of charge on either conductor to the potential difference between the conductors forming the capacitor.

3. Which are the different types of capacitors?

Ans:- The different types of the capacitors are - Parallel plate capacitor, Spherical capacitor and Cylindrical capacitor.

4. Define the dielectric constant.

Ans:- Dielectric constant of a medium is merely the ratio between the capacitance of a capacitor with medium as dielectric and the capacity of the same capacitor with the air as dielectric.

5. What is the S.I unit of the capacitance? What is one picofarad?

Ans:- The S.I unit of the capacitance is Farad. One picofarad = 10^{-12} F.

6. Can desired charge be given to the capacitor?

Ans:- No, the desired amount of charge cannot be given to the capacitor, because the maximum charge that can be given to a capacitor is limited by the dielectric strength of the medium between the two plates of the capacitor.

7. Give reason why water has a much greater dielectric constant (= 80) than mica (= 6)?

Ans:- Water has a much greater dielectric constant (= 80) than mica (= 6) because water molecules have a permanent dipole moment while the molecules of mica do not have it.

8. Why does the electric field inside a dielectric decrease, when it is placed in an external electric field?

Ans:- When a dielectric is placed in an external electric field, the electric field due to polarization of the dielectric opposes it. Hence, the dielectric field gets reduced.

9. Two metallic spheres of same radii, one solid and the other hollow are charged to the same potential. Which of the two will hold more charge?

Ans: - Two metallic spheres of same radii, both hold the same amount of charge, no matter they are hollow or solid the amount of charge holding capacity only depends on the radius of the capacitor.

10. Define the Farad.

Ans:- The capacitance of the conductor is said to be one farad if the addition of one coulomb of charge raises its potential by one volt. It is equal to 1 coulomb/ volt.

11. What is the nature of the electric field between the oppositely charged plates of a parallel plate capacitor?

Ans:- The electric field between the oppositely charged plates of a parallel plate capacitor is uniform. The field is distorted at the edges.

12. What happens to the charge on a parallel plate capacitor when the p.d between its plates is doubled?

Ans:- The charge on a parallel plate capacitor gets doubled, when the p.d between its plates is doubled.

13. A metal foil is placed midway between the plates of a parallel plate capacitor. What is the capacitance of the capacitor? *(Contd….)*

ಎಂಬಿಎಗೆ ಯಾವ ವಿಷಯ ಸೂಕ್ತ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

ನನಗೆ ಮುಂದೆ ಎಂಬಿಎ ಮಾಡುವ ಇಚ್ಛೆಯಿದ್ದು, ಯಾವ ವಿಷಯದಲ್ಲಿ ಮಾಡಬಹುದು?

ಹೆಸರು, ಊರು ತಿಳಿಸಿಲ್ಲ.

ಎಂಬಿಎ ಕೋರ್ಸಿನಲ್ಲಿ ಮಾರ್ಕೆಟಿಂಗ್,ಮಾನವ ಸಂಪನ್ಮೂಲ ನಿರ್ವಹಣೆ, ಹಣಕಾಸು, ಲಾಜಿಸ್ಟಿಕ್ಸ್, ಬಿಸಿನೆಸ್ ಅನಾಲಿಟಿಕ್ಸ್, ಉತ್ಪಾದನೆ, ಇಂಟರ್‌ನ್ಯಾಷನಲ್ ಬಿಸಿನೆಸ್ ವಿಭಾಗಗಳಿದ್ದು ನಿಮ್ಮ ವೃತ್ತಿಯೋಜನೆಯಂತೆ ಆಯ್ಕೆ ಮಾಡಿಕೊಳ್ಳಬಹುದು. ಮ್ಯಾನೇಜ್‌ಮೆಂಟ್ ತತ್ವ ಮತ್ತು ಸಿದ್ಧಾಂತಗಳು, ಕಾನೂನು, ಸಂಖ್ಯಾಶಾಸ್ತ್ರ ಮಾನವ ಸಂಪನ್ಮೂಲ, ಅರ್ಥಶಾಸ್ತ್ರ, ಮಾರ್ಕೆಟಿಂಗ್ ನಿರ್ವಹಣೆ, ಬಿಸಿನೆಸ್ ಸಂವಹನ ವಿಭಾಗಗಳಿವೆ. ವೃತ್ತಿಗೂ, ಜೀವನಕ್ಕೂ ಅಗತ್ಯ ತತ್ವಗಳ ಮನದಟ್ಟಾಗುತ್ತದೆ. ಮಾರ್ಗದರ್ಶನಕ್ಕಾಗಿ, ಈ ವಿಡಿಯೊ ವೀಕ್ಷಿಸಿ: https://www. youtube.com watch?v = WHZTFCmu3zg

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani. co.inಕ್ಕೆ ಕಳಿಸಬಹುದು.

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ www.exammastermind.comಗೆ ಭೇಟಿ ಕೊಡಿ

www.isbr.in

ISBR GROUP OF INSTITUTIONS REAL WORLD. REAL LEARNING

ADMISSIONS 2024

Electronic City Phase - 1, Bangalore

BBA | BBA CMA | B.COM | B.COM ACCA
BBA AVIATION | BCA | B.COM EVENING
BBA LL.B | LL.B | MBA | PGDM

Fee subsidy upto 70% for Karnataka Students

Contact : 9341733331 | 9731445485

CMR UNIVERSITY

Private University Estd in Karnataka State by Act No. 45 of 2013

BENGALURU



SCAN TO UNLOCK A DEDUCTION OF 25% IN APPLICATION FEES

Create The Future

20+ INSTITUTIONS | 75+ ACADEMIC DEPARTMENTS | 1000+ WORLD CLASS FACULTY | STUDENTS OF 45+ NATIONALITIES | 20000+ ALUMNI ACROSS THE GLOBE

CMRU Accelerated Credits
STAY AHEAD OF THE COMPETITION
APPLY TODAY
to get trained and certified for FREE in niche courses

SCHOOL OF ARCHITECTURE
B.Arch.

SCHOOL OF ENGINEERING & TECHNOLOGY
B.Tech.
• Computer Science & Engineering
• Computer Science & Engineering (Artificial Intelligence & Machine Learning)
• Computer Science & Engineering (Data Science)
• Computer Engineering NEW
• Computer Science and Technology NEW
• Information Technology
• Electronics and Communication Engineering

M.Tech. (For Regular and Professionals)
• Computer Science & Engineering
• Artificial Intelligence

Ph.D.
• Computer Science and Engineering (Artificial Intelligence & Machine Learning, Networking and Cloud Computing, Data Analytics, Cyber Security, Data Science and Internet of Things)
• ECE • Mechanical Engineering

SCHOOL OF DESIGN
B.Des.
• Communication Design • Product Design
• Fashion Design • Interior Design

PGCET code: MBA (City Campus) - B150
MBA (OMBR Campus) - B149 | MBA (Lakeside Campus) - B395 | MCA (OMBR Campus) - C527
MCA (Lakeside Campus) - C521
CET codes: B.Tech. - E257 | B.Arch. - E245

SCHOOL OF LIBERAL STUDIES (Formerly School of Social Science & Humanities)
B.A. / B.A (Hons)* (Major + Minor)
• Psychology • English • Journalism
• Economics • Political Science
• History • Sociology • Media Studies
• Travel & Tourism
B.Sc. | Psychology
M.Sc. | Psychology
• Clinical • Counselling • Human Resource Development and Management
Ph.D.
• Psychology

SCHOOL OF ECONOMICS & COMMERCE
B.Com. / B.Com. (Hons.)*
• General • International Accounting & Finance • Professional - CA Integrated
• Data Science NEW • Certified Management Accountant (US CMA) NEW
Ph.D.
• Economics • Commerce

SCHOOL OF LEGAL STUDIES
B.A., LL.B. (Hons.)
B.B.A., LL.B. (Hons.)
LL.B.
LL.M.
• Constitutional Law • Commercial Law
• Criminal Law NEW
Ph.D. | Law

We honour JEE, Comedk, and all National-level tests.

SCHOOL OF SCIENCE & COMPUTER STUDIES (Formerly School of Science Studies)
BCA / BCA (Hons)*
• General • Cloud Computing
• Data Science • Game Development
B.Sc.
• Sound Engineering • Visual Effects & Animation • Information Technology NEW
M.Sc.
• Information Technology in Data Science NEW
MCA
Ph.D. | Computer Application

SCHOOL OF MANAGEMENT
BBA / BBA (Hons.)*
• General • Digital Marketing
• Business Analytics
MBA with Dual Specialisation in
• Marketing • HR • Finance
• Business Analytics • Digital Marketing
• Supply Chain Management
MBA | Business Analytics & Business Intelligence NEW
Executive MBA | Product Leadership
Ph.D. | Management

*Honours degree is 4 years and optional, subjected to government norms.

200+ recruiters
BOSCH KPMG Capgemini EY IBM zomato amazon Deloitte.
and many more..

CELEBRATING 30 YEARS
CMRIT
CMR INSTITUTE OF TECHNOLOGY, BENGALURU.

A++ NAAC | NBA NATIONAL BOARD of ACCREDITATION | nirf RANKED

CMR INSTITUTE OF TECHNOLOGY
Permanently affiliated to VTU | Approved by AICTE | Recognised by the Govt. of Karnataka | Accredited by NAAC with A++ grade | NBA Accredited | NIRF Ranked

B.E. | CSE | CSE (AI & ML) | AI & DS | AI & ML | CSE (Data Science) | ISE | ECE
MBA | MCA
Ph.D. | CSE | ECE | EEE | Mechanical | Civil | Physics | Mathematics | Chemistry | Business Administration | Computer Applications

B.E : CET code - E097 | ComedK code - E032
PGCET code : MCA - C420MC | MBA - B151MB

www.cmrit.ac.in
admission@cmrit.ac.in

SCAN FOR DETAILS

Registrations Open
CMRUAT
Providing opportunities to get scholarship worth 12 Crores

Admissions Open
AY 2024-25

+91 93429 00666

www.cmr.edu.in
admissions@cmr.edu.in

Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043
CMRIT Campus: 132, AECS Layout, ITPL Main Road, Kundalahalli, Bengaluru - 560 037

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಕಾಲಪ್ರಜ್ಞೆ ಇಲ್ಲದವನಿಗೆ ಗಡಿಯಾರ ಬರೀ ಅಲಂಕಾರವಷ್ಟೆ.

-ಕೆ.ಎಸ್.ನಿಸಾರ್ ಅಹಮದ್

ಪಿಎಂಎಲ್‌ಎ ದುರ್ಬಳಕೆಗೆ ಕಡಿವಾಣ 'ಸುಪ್ರೀಂ' ತೀರ್ಪು ಸ್ವಾಗತಾರ್ಹ

ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಆರೋಪಿಯಾಗಿರುವ ವ್ಯಕ್ತಿಯನ್ನು ಬಂಧಿಸುವ ವಿಚಾರದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಕ್ಕೆ ಮಿತಿ ಹೇರಿ ಸುಪ್ರೀಂ ಕೋರ್ಟ್ ಕಳೆದ ವಾರ ತೀರ್ಪು ನೀಡಿದೆ. ಜೀವಿಸುವ ಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯವನ್ನು ಎತ್ತಿಹಿಡಿದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪುಗಳ ಸಾಲಿಗೆ ಪಿಎಂಎಲ್‌ಎ ಪ್ರಕರಣದ ಈ ತೀರ್ಪು ಕೂಡ ಸೇರುತ್ತದೆ. ಗಂಭೀರ ಸ್ವರೂಪದ ಅಪರಾಧಕ್ಕೆ ಸಂಬಂಧಿಸಿದಂತೆ ಪಿಎಂಎಲ್‌ಎ ಅಡಿಯಲ್ಲಿ ದಾಖಲಾಗುವ ದೂರನ್ನು ವಿಶೇಷ ನ್ಯಾಯಾಲಯವು ವಿಚಾರಣೆಗೆ ಅಂಗೀಕರಿಸಿದ ಬಳಿಕ ಆರೋಪಿಯನ್ನು ಇ.ಡಿ. ಬಂಧಿಸುವಂತಿಲ್ಲ, ಆರೋಪ ಎದುರಿಸುತ್ತಿರುವ ವ್ಯಕ್ತಿಯು ವಿಚಾರಣೆಗಾಗಿ ತನ್ನ ವಶಕ್ಕೆ ಬೇಕಿದ್ದರೆ ತನಿಖಾ ಸಂಸ್ಥೆಯು (ಇ.ಡಿ) ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಸಮನ್ಸ್ ಜಾರಿಗೊಳಿಸಿದ ಬಳಿಕ ಆರೋಪಿಯು ವಿಶೇಷ ನ್ಯಾಯಾಲಯದ ಎದುರು ಹಾಜರಾದರೆ ಆರೋಪಿಯು ವಶದಲ್ಲಿದ್ದಾನೆ ಎಂದು ಪರಿಗಣಿಸುವಂತಿಲ್ಲ ಹಾಗೂ ಆತನು ಜಾಮೀನು ಮಂಜೂರು ಮಾಡುವಂತೆ ಕೋರಿ ಅರ್ಜಿ ಸಲ್ಲಿಸುವ ಅಗತ್ಯವೂ ಇರುವುದಿಲ್ಲ. ವಿಚಾರಣೆಗಾಗಿ ಆರೋಪಿಯು ತನ್ನ ವಶಕ್ಕೆ ಬೇಕಿದ್ದರೆ, ಇ.ಡಿ. ನಿರ್ದಿಷ್ಟವಾದ ಕಾರಣಗಳನ್ನು ಮುಂದಿಟ್ಟು ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬೇಕಾಗುತ್ತದೆ. ಒಮ್ಮೆ ವಿಚಾರಣೆಗೆ ಹಾಜರಾದ ಆರೋಪಿಗೆ ಮುಂದಿನ ದಿನಗಳಲ್ಲಿ ವಿಚಾರಣೆಗೆ ಖುದ್ದು ಹಾಜರಾಗುವುದರಿಂದ ವಿನಾಯಿತಿ ನೀಡುವ ಅಧಿಕಾರವೂ ವಿಶೇಷ ನ್ಯಾಯಾಲಯಕ್ಕೆ ಇದೆ ಎಂದೂ ಸುಪ್ರೀಂ ಕೋರ್ಟ್ ತಿಳಿಸಿದೆ.

ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯನ್ನು ಅಸ್ತ್ರ ಮಾಡಿಕೊಂಡು ಜನರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವ ಪ್ರವೃತ್ತಿಗೆ ಸುಪ್ರೀಂ ಕೋರ್ಟ್‌ನ ಈ ತೀರ್ಪು ತಡೆಹಾಕಲಿದೆ

ಜಾರಿ ನಿರ್ದೇಶನಾಲಯವು ಕಠಿಣವಾದ ಪಿಎಂಎಲ್‌ಎ ಬಳಸಿಕೊಂಡು ಜನರನ್ನು ಬಂಧಿಸಿ ದೀರ್ಘಕಾಲದವರೆಗೆ ಬಂಧನದಲ್ಲಿ ಇರಿಸುವಂತಹ ಸ್ವೇಚ್ಛಾಚಾರದ ನಡೆಯನ್ನು ಅನುಸರಿಸುತ್ತಿರುವ ಕಾಲಘಟ್ಟದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಮಹತ್ವದ್ದಾಗಿದೆ. ಪಿಎಂಎಲ್‌ಎ ಅಡಿಯಲ್ಲಿ ದಾಖಲಾಗುವ ಪ್ರಕರಣಗಳಲ್ಲಿ ಆರೋಪಿಗೆ ಜಾಮೀನು ಮಂಜೂರು ಮಾಡಬೇಕಾದರೆ ತಾನು ನಿರಪರಾಧಿ ಎಂಬುದನ್ನು ನ್ಯಾಯಾಲಯದಲ್ಲಿ ಸಾಬೀತುಪಡಿಸಬೇಕು ಮತ್ತು ಜಾಮೀನಿನ ಮೇಲೆ ಹೊರಗಿರುವ ಅವಧಿಯಲ್ಲಿ ಪುನಃ ಅಂತಹ ಅಪರಾಧ ಕೃತ್ಯ ಎಸಗುವುದಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಡಬೇಕು. ಈ ಎರಡು ಕಠಿಣ ಷರತ್ತುಗಳಿಂದಾಗಿ ಪಿಎಂಎಲ್‌ಎ ಪ್ರಕರಣಗಳಲ್ಲಿ ಆರೋಪಿಗಳಿಗೆ ಜಾಮೀನು ಪಡೆಯುವುದು ಸಾಹಸದ ಕೆಲಸವಾಗಿ ಪರಿಣಮಿಸಿದೆ. ಪಿಎಂಎಲ್‌ಎ ಅಡಿಯಲ್ಲಿ ದಾಖಲಾಗುವ ಪ್ರಕರಣಗಳಲ್ಲಿ ಆರೋಪಿಗಳ ಅಪರಾಧ ಸಾಬೀತಾಗಿ, ಶಿಕ್ಷೆಯಾಗುವ ಪ್ರಮಾಣ ತೀರಾ ಕಡಿಮೆ ಇದೆ. ಈ ದೃಷ್ಟಿಯಿಂದ ಪಿಎಂಎಲ್‌ಎ ಬಳಸಿಕೊಂಡು ವ್ಯಕ್ತಿಗಳನ್ನು ಬಂಧಿಸುವುದು ಮತ್ತು ವರ್ಷಾನುಗಟ್ಟಲೆ ಜಾಮೀನು ದೊರೆಯದಂತೆ ಕಾರಾಗೃಹದಲ್ಲಿ ಇರಿಸುವುದು ಸರಿಯಲ್ಲ. ಇಂತಹ ಪ್ರಕರಣಗಳಲ್ಲಿ ಆರೋಪಿಗಳಾಗಿರುವ ಹಲವು ವ್ಯಕ್ತಿಗಳು ತಮ್ಮ ಜೀವನದ ಹಲವು ಅಮೂಲ್ಯ ವರ್ಷಗಳನ್ನು ಜೈಲು ವಾಸದಲ್ಲೇ ವ್ಯರ್ಥ ಮಾಡಿಕೊಂಡಿದ್ದಾರೆ. ಈ ಐದು ವರ್ಷಗಳಲ್ಲಿ ತನ್ನ ಅಧಿಕಾರವನ್ನು ಎಗ್ಗಿಲ್ಲದೆ ಬಳಸಿರುವ ಇ.ಡಿ., ಬಂಧಿಸುವುದರಲ್ಲೇ ಖುಷಿ ಕಾಣುವ ಪ್ರವೃತ್ತಿಯನ್ನು ಪ್ರದರ್ಶಿಸಿದೆ. ದೆಹಲಿ ಮುಖ್ಯಮಂತ್ರಿಯಾಗಿರುವ ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಸೇರಿದಂತೆ ವಿರೋಧ ಪಕ್ಷಗಳ ಹಲವು ನಾಯಕರು ಇ.ಡಿ. ನಡೆಸಿದ ಇಂತಹ ಕಾರ್ಯಾಚರಣೆಗಳ ಬಲಿಪಶುಗಳಾಗಿದ್ದಾರೆ. ಕೇಜ್ರಿವಾಲ್ ಮಧ್ಯಂತರ ಜಾಮೀನು ಪಡೆದು ಹೊರಬಂದಿದ್ದರೆ, ಇನ್ನೂ ಹಲವರು ಜೈಲಿನಲ್ಲೇ ಬಂದಿಯಾಗಿದ್ದಾರೆ. ನಿರಂತರವಾಗಿ ಜಾಮೀನು ನಿರಾಕರಿಸುತ್ತಿರುವುದರಿಂದ ಜೈಲಿನಿಂದ ಹೊರಬರಲು ಅವರಿಗೆ ಸಾಧ್ಯವಾಗುತ್ತಿಲ್ಲ.

ಆರೋಪಿಗಳನ್ನು ಬಂಧಿಸುವ ವಿಚಾರದಲ್ಲಿ ಇ.ಡಿ. ಹೊಂದಿದ್ದ ಅಧಿಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ಬಂಧ ವಿಧಿಸಿರುವುದು ಸ್ವಾಗತಾರ್ಹ. ನಾಗರಿಕರೊಬ್ಬರ ಬಂಧನವು ಆತ ಸಂವಿಧಾನಾತ್ಮಕವಾಗಿ ಹೊಂದಿರುವ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಜತೆ ನಂಟು ಹೊಂದಿರುತ್ತದೆ. ಆದ್ದರಿಂದ ತನಿಖಾ ಸಂಸ್ಥೆಗಳು ಬಂಧನದ ಅಧಿಕಾರವನ್ನು ನ್ಯಾಯೋಚಿತವಾಗಿ ಬಳಸಬೇಕಾಗುತ್ತದೆ. ಯಾವುದೇ ವ್ಯಕ್ತಿಯ ಸ್ವಾತಂತ್ರ್ಯದ ಮೇಲೆ ಸಕಾರಣವಿಲ್ಲದೆ ಒಂದು ದಿನದ ಮಟ್ಟಿಗೆ ನಿರ್ಬಂಧ ಹೇರುವುದೂ ಕೂಡ ತಪ್ಪು ಎಂದು ಬೇರೊಂದು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು. ಹಣದ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣಗಳನ್ನು ನ್ಯಾಯಾಲಯವು ವಿಚಾರಣೆಗೆ ಕೈಗೆತ್ತಿಕೊಂಡ ನಂತರವೂ ಆ ಪ್ರಕರಣದ ಆರೋಪಿಯು ಜಾಮೀನು ಪಡೆಯಲು ಅವಳಿ ಕಠಿಣ ಷರತ್ತುಗಳನ್ನು ಪೂರೈಸಬೇಕೇ ಎಂಬ ಪ್ರಶ್ನೆಗೆ ಸುಪ್ರೀಂ ಕೋರ್ಟ್ ಈ ಪ್ರಕರಣದಲ್ಲಿ ಸ್ಪಷ್ಟ ಉತ್ತರ ನೀಡಿದೆ. ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಗೆ ಅಂಗೀಕೃತವಾದ ಬಳಿಕ ಇ.ಡಿ. ಸ್ವೇಚ್ಛಾಚಾರದಿಂದ ಬಂಧಿಸುವಂತಿಲ್ಲ ಎಂಬ ಸುಪ್ರೀಂ ಕೋರ್ಟ್ ತೀರ್ಪು ಹಲವರನ್ನು ಬಂಧನದಿಂದ ಪಾರು ಮಾಡಲಿದೆ ಮತ್ತು ನಾಗರಿಕರ ಜೀವಿಸುವ ಹಕ್ಕು ಹಾಗೂ ವೈಯಕ್ತಿಕ ಸ್ವಾತಂತ್ರ್ಯಕ್ಕೆ ರಕ್ಷಣೆ ಒದಗಿಸಲಿದೆ. ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯನ್ನು ಅಸ್ತ್ರ ಮಾಡಿಕೊಂಡು ಜನರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವ ಪ್ರವೃತ್ತಿಗೆ ಸುಪ್ರೀಂ ಕೋರ್ಟ್‌ನ ಈ ತೀರ್ಪು ತಡೆಹಾಕಲಿದೆ.

ದಿನದ ಟ್ವೀಟ್

ಪಡೆಯಿರಿ ಕಪ್...

ಅಭಿನಂದನೆಗಳು ಮತ್ತು ಶುಭಹಾರೈಕೆಗಳು. ತಂಡವು ಈಗ ಸುಸ್ಥಿತಿಯಲ್ಲಿರುವ ಮಷೀನ್‌ನಂತೆ ಆಗಿದೆ. ಚೆನ್ನಾಗಿ ಆಡುತ್ತಿದೆ. ಕೀಪ್ ಇಟ್ ಅಪ್, ಗೆಲ್ಲಿರಿ ಕಪ್.

(ಐಪಿಎಲ್‌ನಲ್ಲಿ ಆರ್‌ಸಿಬಿ ತಂಡವು ಸಿಎಸ್‌ಕೆ ತಂಡವನ್ನು ಮಣಿಸಿ ಪ್ಲೇ ಆಫ್ ಪ್ರವೇಶಿಸಿದ್ದಕ್ಕೆ ಪ್ರತಿಕ್ರಿಯೆ)

ಆನಂದ ಗುಂಡೂರಾವ್, ಬಿ-ಪ್ಯಾಕ್ ಸದಸ್ಯ

ಕಿಡಿನುಡಿ

ಬೆಂಗಳೂರು ಜೀವಿಸಲು ಯೋಗ್ಯವಾಗಿಲ್ಲ, ಬಲುಬೇಗ ಅಧೋಗತಿಗೆ ತಲುಪಲಿದೆ ಎಂಬಂತಹ ಹೇಳಿಕೆಗಳನ್ನು ನೀಡುವುದು ಈಗ ಶೋಕಿ ಆಗಿಬಿಟ್ಟಿದೆ. ಸತ್ಯಸಂಗತಿಯೆಂದರೆ, ನಾವು ಸವಾಲುಗಳನ್ನು ಎದುರಿಸುತ್ತಿರುವುದರ ನಡುವೆಯೂ ಜೀವಿಸಲು ಉತ್ತಮವಾದ ನಗರವಾಗಿ ಉಳಿದಿದೆ ಬೆಂಗಳೂರು...

ಶ್ರೀನಿವಾಸ್ ಅಲವಿಲ್ಲಿ, ಸಹ ಸಂಸ್ಥಾಪಕ, ಸಿಟಿಜನ್ಸ್ ಫಾರ್ ಬೆಂಗಳೂರು

25 ವರ್ಷಗಳ ಹಿಂದೆ

ಗುರುವಾರ, 20-5-1999

• ಪಾಲಿಟೆಕ್ನಿಕ್ ಪರೀಕ್ಷೆಯಲ್ಲಿ ಪಠ್ಯೇತರ ಪ್ರಶ್ನೆಗೆ ಆತಂಕ

ಬೆಂಗಳೂರು, ಮೇ 19– ಪಾಲಿಟೆಕ್ನಿಕ್ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಮೇ 5ರಂದು ನಡೆದ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ 20 ಅಂಕಗಳ ಪ್ರಶ್ನೆಯೊಂದು ಪಠ್ಯೇತರ ಪ್ರಶ್ನೆಯಾಗಿದ್ದು, ವಿದ್ಯಾರ್ಥಿಗಳಿಗೆ ಆತಂಕವನ್ನುಂಟು ಮಾಡಿದೆ.

ಈ ಪ್ರಶ್ನೆಗೆ ಪರಿಹಾರ ದೊರೆಯದಿದ್ದಲ್ಲಿ 100 ಅಂಕಗಳಲ್ಲಿ 20 ಅಂಕಗಳು ತಾವಾಗಿಯೇ ಕೈಬಿಟ್ಟು ಹೋಗುವುದರಿಂದ ಪಡೆಯುವ ಅಂಕ ಕಡಿಮೆಯಾಗಿ, ಫಲಿತಾಂಶವೂ ಕಡಿಮೆಯಾಗುವ ಸಂಭವವಿದೆ.

ಪ್ರಥಮ ವರ್ಷದ ಫಲಿತಾಂಶ ಶೇ 20ರಿಂದ 25ರಷ್ಟು ಇದ್ದು, ಆ ಪ್ರಮಾಣ ಈ ವರ್ಷ ಎಳೆಂಟರಷ್ಟು ಕಡಿಮೆಯಾಗುವ ಆತಂಕ ಇದೆ ಎಂಬುದು ನಗರದ ಸರ್ಕಾರಿ ಪಾಲಿಟೆಕ್ನಿಕ್ ಉಪನ್ಯಾಸಕರೊಬ್ಬರ ಅಭಿಪ್ರಾಯ.

• ಸೋನಿಯಾ ಅಭಿಮಾನಿ ಆತ್ಮಾಹುತಿ ಯತ್ನ

ನವದೆಹಲಿ, ಮೇ 19 (ಯುಎನ್‌ಐ, ಪಿಟಿಐ)– ಸೋನಿಯಾ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ನೀಡಿರುವ ರಾಜೀನಾಮೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ ಇಲ್ಲಿನ ಅವರ ನಿವಾಸದ ಸಮೀಪ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಅಭಿಮಾನಿಗಳು ಆತ್ಮಾಹುತಿಗೆ ಯತ್ನಿಸಿದ ಘಟನೆಗಳು ಬುಧವಾರ ನಡೆದಿವೆ.

ಸೋನಿಯಾ ಅವರ ನಿವಾಸದ ಹೊರಗೆ ಮಹಿಳಾ ಅಭಿಮಾನಿಯೊಬ್ಬರು ತಮ್ಮ ಮೈಮೇಲೆ ಬೆಂಕಿ ಹಚ್ಚಿಕೊಂಡರೆ, ಹೈದರಾಬಾದಿನಲ್ಲಿ ಕಾಂಗ್ರೆಸ್ ಕಾರ್ಯಕರ್ತೆಯರು ನಡೆಸಿದ ಆತ್ಮಾಹುತಿ ಯತ್ನವನ್ನು ವಿಫಲಗೊಳಿಸಲಾಯಿತು.

50 ವರ್ಷಗಳ ಹಿಂದೆ

ಸೋಮವಾರ, 20-5-1974

• ಆಫ್ರಿಕಾದಲ್ಲಿನ ವಸಾಹತುಗಳ ವಿಮೋಚನೆಗೆ ಭಾರತದ ನೆರವು

ನವದೆಹಲಿ, ಮೇ 19– ಆಫ್ರಿಕಾದಲ್ಲಿ ಇನ್ನೂ ವಸಾಹತುಶಾಹಿ ಆಡಳಿತದಲ್ಲಿರುವ ಪ್ರದೇಶಗಳ ವಿಮೋಚನೆಗೆ ನಡೆಯುವ ಸ್ವಾತಂತ್ರ್ಯ ಹೋರಾಟಕ್ಕೆ ಭಾರತವು ಪೂರ್ಣ ಬೆಂಬಲ ನೀಡುವುದೆಂದು ರಾಷ್ಟ್ರಪತಿ ವಿ.ವಿ. ಗಿರಿ ಅವರು ಭರವಸೆ ನೀಡಿದ್ದಾರೆ.

ಆಫ್ರಿಕಾದ ಸ್ವತಂತ್ರ ರಾಷ್ಟ್ರಗಳೊಡನೆ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸಹಕಾರವನ್ನು ತೀವ್ರಗೊಳಿಸಲು ಆ ರಾಷ್ಟ್ರಗಳೊಡನೆ ಭಾರತವು ಸಂಬಂಧವನ್ನಿಟ್ಟುಕೊಳ್ಳುವುದೆಂದು ಅವರು ನುಡಿದರು.

• ರೈಲುಗಳ ಸಂಚಾರದಲ್ಲಿ ಗಣನೀಯ ಪ್ರಗತಿ: ಮತ್ತೆ 5000 ಜನ ಕೆಲಸಕ್ಕೆ

ನವದೆಹಲಿ, ಮೇ 19– 'ಪ್ರಯಾಣಿಕರ ಹಾಗೂ ಸಾಮಗ್ರಿ ಸಾಗಣೆ ರೈಲುಗಳ ಸಂಚಾರದಲ್ಲಿ ಅದ್ಭುತ ಸುಧಾರಣೆಯಾಗಿದೆ' ಎಂದು ರೈಲ್ವೆ ಖಾತೆಯ ವಕ್ತಾರರೊಬ್ಬರು ಇಂದು ಇಲ್ಲಿ ತಿಳಿಸಿದರು.

ಕಳೆದ 24 ಗಂಟೆಗಳ ಅವಧಿಯಲ್ಲಿ ಸುಮಾರು ಐದು ಸಾವಿರ ಮಂದಿ ರೈಲ್ವೆ ಸಿಬ್ಬಂದಿ ಕೆಲಸಕ್ಕೆ ಹಾಜರಾಗಿರುವುದೇ ಈ ಸುಧಾರಣೆಗೆ ಕಾರಣವೆಂದೂ ತಿಳಿಸಿದ್ದಾರೆ.

ಅಭಿಮಾನಿ ಬಳಗವೇ 'ವಿರಾಟ್ ಶಕ್ತಿ', ಹತ್ತರಿಂದ ನಾಲ್ಕನೇ ಸ್ಥಾನಕ್ಕೆ ಜಿಗಿದ ಯಶೋಗಾಥೆ

ಹೊಸ ಅಧ್ಯಾಯ ಬರೆಯುವುದೇ ಆರ್‌ಸಿಬಿ?

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಜಯವು ಅಭಿಮಾನಿಗಳಲ್ಲಿ ಸಂಭ್ರಮದ ಅಲೆಯನ್ನೇ ಎಬ್ಬಿಸಿತು. ಭಾನುವಾರದ ಬೆಳಗಿನವರೆಗೂ ರಾಜಧಾನಿಯ ರಸ್ತೆಗಳಲ್ಲಿ ಯುವಜನರ ಸಂತಸ ಹೊನಲಾಯಿತು. ತಮ್ಮ ನೆಚ್ಚಿನ ತಂಡ ಪ್ಲೇ ಆಫ್ ಹಂತ ಪ್ರವೇಶಿಸಿದ್ದರ ಸಂಭ್ರಮ ಮುಗಿಲುಮುಟ್ಟಿತು. ಒಂದುವೇಳೆ ಆರ್‌ಸಿಬಿ ಕಪ್ ಗೆದ್ದರೆ ಹೇಗಿರುತ್ತದೆ?!

ಹಿಂದಿನ 16 ವರ್ಷಗಳಿಂದ 'ಈ ಸಲ ಕಪ್ ನಮ್ದೆ...' ಎಂದು ಹೇಳುತ್ತಲೇ ಬಂದಿರುವ ಅಭಿಮಾನಿಗಳ ಉತ್ಕಟ ಪ್ರೀತಿಗಾದರೂ ತಂಡವು ಈ ಸಲ ಟ್ರೋಫಿಗೆ ಮುತ್ತಿಕ್ಕಬೇಕು. ಈ ಬಾರಿಯ ಟೂರ್ನಿಯಲ್ಲಿ ಗೆದ್ದರಂತೂ ಅದು ಕ್ರಿಕೆಟ್ ಇತಿಹಾಸದಲ್ಲಿಯೇ ಹೊಸ ಅಧ್ಯಾಯ ಆಗಲಿದೆ. ಏಕೆಂದರೆ, ಹಿಂದಿನ ಎಲ್ಲ ಆವೃತ್ತಿಗಳಿಗಿಂತಲೂ ಈ ಬಾರಿ ತಂಡವು ನೋವು, ನಲಿವು ಎರಡನ್ನೂ ಕಂಡಿದೆ. ವೈಫಲ್ಯದ ಪ್ರಪಾತದಿಂದ ಮೇಲೆದ್ದು ನಾಲ್ಕರ ಘಟ್ಟಕ್ಕೆ ಬಂದು ನಿಂತಿದೆ.

ಇಂದಿಗೆ ಸರಿಯಾಗಿ ಒಂದು ತಿಂಗಳ ಹಿಂದೆ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಬರೀ 1 ರನ್ ಅಂತರದಿಂದ ಆರ್‌ಸಿಬಿ ತಂಡವು ಸೋತಿತು. ಅದು ತಂಡಕ್ಕೆ ಎಂಟನೇ ಪಂದ್ಯ ಹಾಗೂ ಏಳನೇ ಸೋಲಾಗಿತ್ತು. ಅಂಕಪಟ್ಟಿಯಲ್ಲಿ ಎರಡು ಪಾಯಿಂಟ್ಸ್‌ನೊಂದಿಗೆ ಕೊನೆಯ ಸ್ಥಾನದಲ್ಲಿ ಇತ್ತು. ಪ್ರತಿ ಸೋಲಿಗೂ ಸಾಗರದೋಪಾದಿಯಲ್ಲಿ ಟೀಕೆಗಳು ಹರಿದುಬಂದವು. ವ್ಯಂಗ್ಯಗಳು, ಮೀಮ್‌ಗಳಿಗೂ ಕೊರತೆ ಇರಲಿಲ್ಲ. ದಿಗ್ಗಜ ಕ್ರಿಕೆಟಿಗರಿಂದ ಹಿಡಿದು ಸಾಮಾನ್ಯರವರೆಗೂ ವ್ಯಂಗ್ಯವಾಡಿದವರೇ ಹೆಚ್ಚು. ಆದರೆ ಆರ್‌ಸಿಬಿಯ ಕಟ್ಟಾ ಅಭಿಮಾನಿಗಳು ಮಾತ್ರ ತಮ್ಮ ವಿಶ್ವಾಸ ಕಳೆದುಕೊಳ್ಳಲಿಲ್ಲ. ದುಬಾರಿ ಟಿಕೆಟ್‌ಗಳನ್ನು ವಿವಿಧ ಮೂಲಗಳಿಂದ 'ಹರಸಾಹಸ' ಮಾಡಿ ಖರೀದಿಸಿ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಲಗ್ಗೆ ಇಡುವುದನ್ನು ಬಿಡಲಿಲ್ಲ. ಅಷ್ಟೇ ಅಲ್ಲ, ಅಧಿಕೃತ ಪ್ರಸಾರದ ಟಿ.ವಿ. ಮತ್ತು ಆ್ಯಪ್‌ಗಳ ಮೂಲಕವೂ ಆರ್‌ಸಿಬಿ ಪಂದ್ಯವನ್ನು ಲಕ್ಷಾಂತರ ಜನ ವೀಕ್ಷಿಸಿದರು. ಬಹುಶಃ ತಂಡವು ಪುಟಿದೇಳಲು ಶಕ್ತಿ ನೀಡಿದ್ದು ಅಭಿಮಾನಿಗಳ ಈ ಅದಮ್ಯ ಪ್ರೀತಿಯೇ ಇರಬೇಕೇನೋ?

ತನ್ನ ಒಂಬತ್ತನೇ ಪಂದ್ಯದಲ್ಲಿ ಆರ್‌ಸಿಬಿಯು ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಅದರ ತವರಿನಲ್ಲಿಯೇ ಮಣಿಸುವುದರೊಂದಿಗೆ ಎದ್ದು ನಿಂತಿತು. ಅಲ್ಲಿಂದ ಯಾರಿಗೂ ತಲೆಬಾಗಲಿಲ್ಲ. ಆದರೆ ಕಟ್ಟಕಡೆಯಲ್ಲಿ ಒಂದು ಕಠಿಣವಾದ ಸವಾಲು ಇತ್ತು. ಅದೇ ಚೆನ್ನೈ ಸೂಪರ್ ಕಿಂಗ್ಸ್ ತಂಡ. ಹಾಲಿ ಚಾಂಪಿಯನ್ ಚೆನ್ನೈ ತಂಡವು ಆರನೇ ಬಾರಿ ಪ್ರಶಸ್ತಿ ಗೆಲ್ಲುವ ಛಲದಲ್ಲಿತ್ತು. ಆ ತಂಡದ ಯುವನಾಯಕ ಋತುರಾಜ್ ಗಾಯಕವಾಡ ತಮ್ಮ ಛಾಪು ಮೂಡಿಸುವ ಕನಸು ಕಂಡಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ಆ ತಂಡದ ಆಧಾರಸ್ತಂಭವಾಗಿರುವ ಮಹೇಂದ್ರಸಿಂಗ್ ಧೋನಿ ಅವರಿಗೆ ಟ್ರೋಫಿ ಗೆದ್ದು ವಿದಾಯ ನೀಡುವ ಭಾವನಾತ್ಮಕ ಸಂಗತಿಯೂ ಬೆಸೆದುಕೊಂಡಿತ್ತು. ಲೀಗ್ ಹಂತದಲ್ಲಿ ತನ್ನ ಕೊನೆಯ ಪಂದ್ಯಕ್ಕೂ ಮುನ್ನ ಚೆನ್ನೈ ತಂಡವು 14 ಅಂಕ ಗಳಿಸಿ ಮೂರನೇ ಸ್ಥಾನದಲ್ಲಿತ್ತು. ಆದರೆ ಶನಿವಾರ ರಾತ್ರಿ ಆರ್‌ಸಿಬಿ ತಂಡ ಮೇಲುಗೈ ಸಾಧಿಸಿ ಇತಿಹಾಸ ಬರೆಯಿತು. ಪಂದ್ಯದ ನಂತರ ತಂಡದ ತಾರೆ ವಿರಾಟ್ ಕೊಹ್ಲಿ ಅವರ ಕಂಗಳಿಂದ ಹರಿದ ಹರ್ಷಧಾರೆಯೇ ಎಲ್ಲವನ್ನೂ ಹೇಳುತ್ತಿತ್ತು.

ಈ ಟೂರ್ನಿಯ ಆರಂಭದಿಂದಲೂ 'ಆರೆಂಜ್ ಕ್ಯಾಪ್' ಕಾಪಿಟ್ಟುಕೊಂಡಿರುವ ವಿರಾಟ್ ಕೂಡ ಹಲವು ಟೀಕೆಗಳನ್ನು ಎದುರಿಸಬೇಕಾಯಿತು. ವಿರಾಟ್ ಅವರ ಸ್ಟ್ರೈಕ್‌ರೇಟ್ ಬಗ್ಗೆ ಸುನಿಲ್ ಗಾವಸ್ಕರ್ ಟೀಕಿಸಿದರು. ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಕೊಹ್ಲಿ ಅವರಿಗೆ ಸ್ಥಾನ ಸಿಗುವುದು ಅನುಮಾನ ಎಂದು ಹೇಳಿದವರು ಮತ್ತೊಬ್ಬರು. ಇವೆಲ್ಲಕ್ಕೂ ಕೊಹ್ಲಿ ಕೂಡ ಖಡಕ್ ಆಗಿಯೇ ತಿರುಗೇಟು ನೀಡಿದರು.

ಪ್ರಸ್ತುತ ಕ್ರಿಕೆಟ್‌ನಲ್ಲಿ ಅತ್ಯಂತ ಹೆಚ್ಚು ವರ್ಚಸ್ವಿ, ಪ್ರತಿಭಾವಂತ ಮತ್ತು ಪ್ರಭಾವಿ ಆಟಗಾರ ಕೊಹ್ಲಿ ಎನ್ನುವುದರಲ್ಲಿ ಎರಡು ಮಾತಿಲ್ಲ. ತಮ್ಮ ಬ್ಯಾಟಿಂಗ್, ಫಿಟ್‌ನೆಸ್ ಜೊತೆಗೆ ವ್ಯಕ್ತಿತ್ವದಲ್ಲಿಯೇ ಆಕ್ರಮಣಶೀಲತೆಯನ್ನು ಮೈಗೂಡಿಸಿಕೊಂಡಿದ್ದಾರೆ. ಅವರು 2008ರಲ್ಲಿ ಆರ್‌ಸಿಬಿಗೆ ಸೇರ್ಪಡೆಯಾದಾಗ ವೃತ್ತಿಜೀವನದ ಆರಂಭಿಕ ಹಂತದಲ್ಲಿದ್ದರು. ಹಿಂದಿನ ಒಂದೂವರೆ ದಶಕದಲ್ಲಿ ವಿರಾಟ್ ಬೆಳೆದ ರೀತಿ ಅನನ್ಯವಾದುದು. ಅವರ ಪ್ರತಿಭೆ, ವರ್ಚಸ್ಸಿಗೆ ದೊಡ್ಡ ಮೊತ್ತ ಹೂಡಿಕೆ ಮಾಡಲು ಎಲ್ಲ ತಂಡಗಳೂ ಸಿದ್ಧವಾಗಿವೆ. ಆದರೂ ಅವರು ಆರ್‌ಸಿಬಿಯನ್ನು ಬಿಟ್ಟು ಬೇರೆ ತಂಡಗಳಿಗೆ ಹೋಗಲಿಲ್ಲ. ಈ ಅವಧಿಯಲ್ಲಿ ತಂಡವು ಒಂಬತ್ತು ಸಲ ಪ್ಲೇ ಆಫ್ ಪ್ರವೇಶಿಸಿದೆ. ಮೂರು ಬಾರಿ ಫೈನಲ್‌ನಲ್ಲಿ ಎಡವಿದೆ.

ಎರಡು ವರ್ಷಗಳ ಹಿಂದೆ ನಾಯಕತ್ವ ಬಿಟ್ಟುಕೊಟ್ಟ ವಿರಾಟ್, ನಾಯಕ ಫಫ್ ಡುಪ್ಲೆಸಿ ಅವರ ಭುಜಕ್ಕೆ ಭುಜ ಕೊಟ್ಟು, ತಂಡದಲ್ಲಿರುವ ಯುವ ಆಟಗಾರರಿಗೆ ಸ್ಫೂರ್ತಿ ತುಂಬುತ್ತಿದ್ದಾರೆ. 'ಆಟ ಮುಗಿಸುವ ಮುನ್ನ ಯಾವುದೇ ಕೊರಗೂ ಕಾಡದಂತೆ ಎಲ್ಲವನ್ನೂ ಸಾಧಿಸಿ ಹೋಗುವುದೇ ಗುರಿ' ಎಂದು ತಮ್ಮ ನಿವೃತ್ತಿಯ ಯೋಜನೆ ಕುರಿತು ಪರೋಕ್ಷವಾಗಿ ಹೇಳಿದ್ದರು. ಎಲ್ಲ ಸಾಧನೆಗಳಲ್ಲಿ ಆರ್‌ಸಿಬಿ ಕಪ್ ಗೆಲ್ಲುವುದು ಕೂಡ ಎಂಬುದೂ ಅವರ ಮಾತುಗಳಲ್ಲಿ ಧ್ವನಿಸಿತ್ತು.

ತಂಡದಲ್ಲಿ ವಿರಾಟ್ ಇರುವಾಗಲೇ ಪ್ರಶಸ್ತಿ ಗೆದ್ದರೆ ಆರ್‌ಸಿಬಿಯ 'ಬ್ರ್ಯಾಂಡ್ ಮೌಲ್ಯ' ಮತ್ತಷ್ಟು ಎತ್ತರಕ್ಕೆ ಏರುವುದರಲ್ಲಿ ಅನುಮಾನವಿಲ್ಲ. ಅಷ್ಟೇ ಅಲ್ಲ, ಈ ಸಲ ಕಪ್ ಜಯಿಸಿದರೆ ತಂಡದಲ್ಲಿರುವ ಯುವ ಆಟಗಾರರ ಭವಿಷ್ಯದ ಬಾಗಿಲು ತೆರೆಯಲಿದೆ. ಹೋದ ವರ್ಷ ಗುಜರಾತ್ ಟೈಟನ್ಸ್‌ನಲ್ಲಿದ್ದ ಎಡಗೈ ವೇಗಿ ಯಶ್ ದಯಾಳ್ ಅವರ ಒಂದೇ ಓವರ್‌ನಲ್ಲಿ ರಿಂಕು ಸಿಂಗ್ ಅವರು ಐದು ಸಿಕ್ಸರ್ ಬಾರಿಸಿದ್ದರು. ಆಗ ಯಶ್ ಅಪಾರ ಟೀಕೆಗೊಳಗಾಗಿದ್ದರು. ನಂತರದ ಹರಾಜು ಪ್ರಕ್ರಿಯೆಯಲ್ಲಿ ಆರ್‌ಸಿಬಿಯು ₹ 5 ಕೋಟಿ ಕೊಟ್ಟು ಅವರನ್ನು ಖರೀದಿಸಿತ್ತು. ಇದರಿಂದಾಗಿ ತಂಡದ ವ್ಯವಸ್ಥಾಪನ ಮಂಡಳಿ ಟೀಕೆಗೆ ಗುರಿಯಾಗಿತ್ತು. ಆದರೆ ಈಗ ಅದೇ ಯಶ್, ಚೆನ್ನೈ ಎದುರಿನ ಪಂದ್ಯದ ಕೊನೆಯ ಓವರ್‌ನಲ್ಲಿ ಆರ್‌ಸಿಬಿಗೆ ಗೆಲುವಿನ ಕಾಣಿಕೆ ನೀಡಿದರು.

ಆಸ್ಟ್ರೇಲಿಯಾದ ಕ್ಯಾಮರಾನ್ ಗ್ರೀನ್ ಅವರು ಆರಂಭಿಕ ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದ್ದರು. ಆಗ ಟಿ.ವಿ. ವೀಕ್ಷಕ ವಿವರಣೆಗಾರರು ಕಟುವಾಗಿ ಟೀಕಿಸಿದ್ದರು. ಬಾಲ್ಯದಿಂದಲೂ ಮೂತ್ರಪಿಂಡದ ಕಾಯಿಲೆ ಇದ್ದರೂ ಉತ್ತಮ ಆಲ್‌ರೌಂಡರ್ ಆಗಿ ಬೆಳೆದಿರುವ ಗ್ರೀನ್, ಆರ್‌ಸಿಬಿಯ ಸತತ ಆರು ಪಂದ್ಯಗಳ ಜಯದಲ್ಲಿ ಮಹತ್ವದ ಕಾಣಿಕೆ ನೀಡಿದ್ದಾರೆ. ವಿಶ್ವಕಪ್ ಟೂರ್ನಿಯಲ್ಲಿ ಆಡಲು ಆಯ್ಕೆಯಾಗಿರುವ ಮೊಹಮ್ಮದ್ ಸಿರಾಜ್, ಬಹುತೇಕ ತಮ್ಮ ಜೀವನದ ಕೊನೆಯ ಐಪಿಎಲ್ ಆಡುತ್ತಿರುವ ದಿನೇಶ್ ಕಾರ್ತಿಕ್, ಹರಾಜಿನಲ್ಲಿ ಮ್ಯಾನೇಜ್‌ಮೆಂಟ್‌ನವರು ಆಯ್ಕೆ ಮಾಡಿಕೊಂಡು ಬಂದ 'ಹಿಂದಿನ ಬೆಂಚಿನ' ಹುಡುಗರನ್ನು ಕಟ್ಟಿಕೊಂಡು ತಂಡವನ್ನು ನಾಲ್ಕರ ಘಟ್ಟಕ್ಕೆ ತಂದಿರುವ ಆರ್‌ಸಿಬಿ ನಾಯಕ ಡುಪ್ಲೆಸಿ ಹಾಗೂ ಅಪಾರ ಅಭಿಮಾನಿ ಬಳಗಕ್ಕೆ ಪ್ರಶಸ್ತಿ ಜಯಿಸಿದ ಖುಷಿ ಅನುಭವಿಸುವ ಅವಕಾಶವನ್ನು ದೊರಕಿಸುವುದಕ್ಕಾದರೂ ಯುವಪಡೆ ಟ್ರೋಫಿ ಜಯಿಸಬೇಕಿದೆ.

ಇದರಿಂದಾಗಿ, ಕ್ರಿಕೆಟ್ ಜಗತ್ತಿನಲ್ಲಿ ಛಾಪು ಮೂಡಿಸಲು ಹಾತೊರೆಯುತ್ತಿರುವ ರಜತ್ ಪಾಟೀದಾರ್, ಸ್ವಪ್ನಿಲ್ ಸಿಂಗ್, ವೈಶಾಖ ವಿಜಯಕುಮಾರ್, ಮಹಿಪಾಲ್ ಲೊಮ್ರೊರ್ ಹಾಗೂ ಅನುಭವಿ ಕರ್ಣ ಶರ್ಮಾ ರಾತ್ರಿ ಬೆಳಗಾಗುವುದರಲ್ಲಿ ತಾರೆಗಳಾಗಬಹುದು.

ಈ ಹಿಂದೆ ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ಎಬಿ ಡಿವಿಲಿಯರ್ಸ್, ಕ್ರಿಸ್ ಗೇಲ್, ಕೆ.ಎಲ್.ರಾಹುಲ್, ರಾಬಿನ್ ಉತ್ತಪ್ಪ, ಬ್ರೆಂಡನ್ ಮೆಕಲಂ, ಮನೀಷ್ ಪಾಂಡೆ ಅವರಂತಹ ಖ್ಯಾತನಾಮರು ಇದ್ದಾಗಲೂ ತಂಡಕ್ಕೆ ಪ್ರಶಸ್ತಿ ಜಯಿಸುವುದು ಸಾಧ್ಯವಾಗಿರಲಿಲ್ಲ. ಅಂದು ಅವರೆಲ್ಲ ಕಂಡ ಕನಸುಗಳನ್ನು ನನಸು ಮಾಡುವ ಅವಕಾಶ ಈಗ ರಾಯಲ್ ಚಾಲೆಂಜರ್ಸ್‌ಗೆ ಇದೆ. ಅದಕ್ಕಾಗಿ ಮುಂದಿರುವ ಪ್ಲೇ ಆಫ್ ಹಂತದ ಸವಾಲು ಮೀರಿ ನಿಲ್ಲಬೇಕಿದೆ.

ಹಿಂದಿನ ಆರು ಪಂದ್ಯಗಳಲ್ಲಿ ಕಂಡುಬಂದಂತಹ ಹೋರಾಟದ ಮನೋಭಾವವೇ ಮುಂದುವರಿದರೆ, 'ಈ ಸಲ ಕಪ್ ನಮ್ಮದಾಯಿತು' ಎಂಬ ಹೊಸ ಘೋಷವಾಕ್ಯ ಪ್ರತಿಧ್ವನಿಸಬಹುದಲ್ಲವೇ?

ಚುರುಮುರಿ

ಸುದ್ದಿಗೆ ಗುದ್ದು

• ಸುಮಂಗಲಾ

ಬೆಕ್ಕಣ್ಣ ಸುದ್ದಿ ಓದುತ್ತ ಮುಸಿಮುಸಿ ನಗುತ್ತಿತ್ತು.

'ನೀ ಹಿಂಗೆ ನಗೋ ಅಂಥದ್ದು ಏನೈತಲೇ ಅದ್ರಾಗೆ?' ಎಂದೆ ಕುತೂಹಲದಿಂದ.

'ಒಂದಲ್ಲ, ಎರಡು ಸುದ್ದಿ ಅದಾವು. ಮೊದಲ್ನೇದ್ದು... ಯಾರೋ ಡಾಕ್ಟರು ನಾಲ್ಕು ವರ್ಷದ ಮಗುವಿನ ಕೈ ಆಪರೇಷನ್ ಮಾಡೋದ್ರ ಬದಲಿಗೆ ನಾಲಿಗೆ ಆಪರೇಷನ್ ಮಾಡಿದ್ರಂತೆ' ಬೆಕ್ಕಣ್ಣ ನಗುತ್ತಲೇ ಹೇಳಿತು.

'ಕೈ ಬದಲಿಗೆ ನಾಲಿಗಿ ಆಪರೇಷನ್ ಮಾಡ್ತಾರ ಅಂದ್ರ ಎಷ್ಟ್ ಗಂಭೀರ ವಿಷಯ... ನಗೂದು ಬಿಡಲೇ. ಆ ಡಾಕ್ಟ್ರು ಎಲ್ಲ ಸರಿಯಾಗಿದ್ದ ನಾಲಿಗೆಗೆ ಅದೇನು ಆಪರೇಷನ್ ಮಾಡಿದ್ರು ಅಂತ! ಆಪರೇಷನ್ ಮಾಡೂಮುಂದ ಎದಕ್ಕ ಮಾಡಾಕ ಹತ್ತೀನಿ ಅಂತ ಜರಾ ಗ್ಯಾನ ಬ್ಯಾಡೇನು?'

'ಅದೇ ನನಗೂ ವಿಚಿತ್ರ ಎನ್ನಿಸ್ತೈತಿ. ಖರೇ ಅಂದ್ರ ನಾಲಿಗೆ ಆಪರೇಷನ್ ಮಾಡಬೇಕಾಗಿದ್ದುದು ಆ ಮಗುವಿಗಲ್ಲ... ನಮ್ಮ ರಾಜಕೀಯ ನಾಯಕರಿಗೆ! ಮಗುವಿನ ನಾಲಿಗೆ ಆಪರೇಷನ್ ಮಾಡಿ ಅನುಭವ ತಗಂಡ್ಯಲ್ಲ, ಈಗ ರಾಜಕಾರಣಿಗಳ ನಾಲಿಗೆ ಆಪರೇಷನ್ ಮಾಡಪಾ ಅಂತ ಡಾಕ್ಟರಿಗೆ ಹೇಳಬಕು' ಬೆಕ್ಕಣ್ಣ ಮತ್ತೆ ಮುಸಿಮುಸಿ ನಕ್ಕಿತು.

'ಜೋರಾಗಿ ಹೇಳಬ್ಯಾಡಲೇ. ಮತ್ತ ನಿನ್ನ, ನನ್ನ ಕೂಡೇ ಜೈಲಿಗೆ ಹಾಕತಾರೆ. ರಾಜಕಾರಣಿಗಳಿಗೆ ನಾಲಿಗೆಯೇ ಅಸ್ತ್ರ, ನಾಲಿಗೆಯೇ ಶಸ್ತ್ರ... ಮನಸ್ಸಿಗೆ ಬಂದಂಗೆ ಝಳಪಿಸೂದು ಅವರ ಹಕ್ಕು ಅಂದ್ಕೊಂಡಾರೆ. ಸರಿ, ಇನ್ನೊಂದು ಸುದ್ದಿ ಏನು' ಕೇಳಿದೆ.

'ನಮ್ ನಂದಿನಿಯವರು ಟಿ-20ಗೆ ಸ್ಕಾಟ್ಲೆಂಡ್, ಐರ್ಲೆಂಡ್ ತಂಡಕ್ಕೆ ಪ್ರಾಯೋಜಕತ್ವ ವಹಿಸ್ತಾರೆ'.

'ಇದು ಖುಷಿ ಸುದ್ದಿ ಕಣಲೇ! ನಂದಿನಿ ಲೋಗೊ ಇರೋ ಜೆರ್ಸಿ ಹಾಕ್ಕಂಡು ಆ ತಂಡಗಳು ಆಡತಾವೆ, ನಮ್ ನಂದಿನಿ ಬ್ರ್ಯಾಂಡ್ ಇಡೀ ವಿಶ್ವಕ್ಕೆ ತಿಳಿತೈತಿ'.

'ಮದ್ಲು ನಮ್ಮ ಹೈನುಗಾರರಿಗೆ ಛಲೋ ಸವಲತ್ತು ಕೊಟ್ಟಮೇಲೆ ಇವೆಲ್ಲ ಮಾಡಬೇಕಪ್ಪ. ಸ್ಪಾನ್ಸರ್ ಮಾಡೋದೇ ಇದ್ರೆ ನಮ್ ದೇಶದ ಆಟಗಾರರಿಗೆ ಕೊಡಬೌದಿತ್ತು... ಮನೆ ಬೆಕ್ಕಿಗೆ ಹಾಲು ಹಾಕಕ್ಕೆ ಅಳತೀರಿ, ವಿದೇಶಿ ಬೆಕ್ಕುಗಳಿಗೆ ಬೆಣ್ಣೆಯನ್ನೇ ತಿನ್ನಿಸ್ತೀರಿ' ಎಂದು ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

ಸಂಗತ

ಎಂಜಿನಿಯರಿಂಗ್: ಕಾಟಾಚಾರದ 'ಚಟುವಟಿಕೆ'

ಉತ್ತಮ ಉದ್ದೇಶದಿಂದ ಜಾರಿಗೆ ತರಲಾದ 'ಚಟುವಟಿಕೆ ಪಾಯಿಂಟ್' ಗಳಿಸುವ ಉಪಕ್ರಮವು ವಿದ್ಯಾರ್ಥಿಗಳಿಗೆ ಬೇಡವಾದ ಕಸರತ್ತಾಗಿ ಮಾತ್ರ ಉಳಿದುಕೊಂಡಿದೆ

• ಎಚ್.ಕೆ.ಶರತ್

ಬರೀ ತಾಂತ್ರಿಕ ಜ್ಞಾನ ಮತ್ತು ಕೌಶಲಗಳಿಂದ ಎಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿ ವೃತ್ತಿಪರತೆ ಮೈಗೂಡಿಸಲು ಸಾಧ್ಯವಿಲ್ಲವೆಂದು ಭಾವಿಸಿದ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ), 2019- 20ನೇ ಸಾಲಿನಲ್ಲಿ 'ಎಐಸಿಟಿಇ ಆ್ಯಕ್ಟಿವಿಟಿ ಪಾಯಿಂಟ್ಸ್' ಎಂಬ ಉಪಕ್ರಮದ ಜಾರಿಗೆ ಮುಂದಾಯಿತು. ಇದರ ಪ್ರಕಾರ, ಎಂಜಿನಿಯರಿಂಗ್ ವಿದ್ಯಾರ್ಥಿಯು ಪದವಿ ಪಡೆಯಲು ಅರ್ಹನಾಗಬೇಕಿದ್ದರೆ ನಾಲ್ಕು ವರ್ಷಗಳ ಅವಧಿಯಲ್ಲಿ 100 ಎಐಸಿಟಿಇ ಚಟುವಟಿಕೆ ಪಾಯಿಂಟ್‌ಗಳನ್ನು ಸಂಪಾದಿಸಬೇಕಿರುವುದು ಕಡ್ಡಾಯ.

ಲ್ಯಾಟರಲ್ ಎಂಟ್ರಿ ಮೂಲಕ ನೇರವಾಗಿ ಎರಡನೇ ವರ್ಷಕ್ಕೆ ಪ್ರವೇಶ ಪಡೆಯುವವರಿಗೆ 25 ಪಾಯಿಂಟ್‌ಗಳ ವಿನಾಯಿತಿ ಇದೆ. ವಿದ್ಯಾರ್ಥಿಯೊಬ್ಬ ಪದವಿಯ ಎಲ್ಲ ವಿಷಯಗಳಲ್ಲೂ ಉತ್ತೀರ್ಣನಾಗಿ ಒಂದುವೇಳೆ ನಿಗದಿತ ಪ್ರಮಾಣದಲ್ಲಿ ಎಐಸಿಟಿಇ ಚಟುವಟಿಕೆ ಪಾಯಿಂಟ್‌ಗಳನ್ನು ಸಂಪಾದಿಸಲು ವಿಫಲನಾಗಿದ್ದರೆ ಅಂತಹ ವಿದ್ಯಾರ್ಥಿಗೆ ಪದವಿ ಪ್ರದಾನ ಮಾಡಲಾಗುವುದಿಲ್ಲ.

ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ತಂಡವಾಗಿ ಒಗ್ಗಟ್ಟಿನಿಂದ ಕೆಲಸ ಮಾಡುವ ಚೈತನ್ಯ ಮತ್ತು ಸಾಫ್ಟ್ ಸ್ಕಿಲ್ಸ್ ಮೈಗೂಡಿಸುವ ಸಲುವಾಗಿ ಈ ಉಪಕ್ರಮವನ್ನು ಜಾರಿಗೆ ತರಲಾಗಿದೆ. ಎಐಸಿಟಿಇ ಚಟುವಟಿಕೆ ಪಾಯಿಂಟ್‌ಗಳನ್ನು ಹೇಗೆ ಸಂಪಾದಿಸಬಹುದು ಎಂಬ ಕುರಿತು ಹೊರಡಿಸಲಾಗಿರುವ ಮಾರ್ಗಸೂಚಿಯಲ್ಲಿ 15 ಚಟುವಟಿಕೆಗಳನ್ನು ಪಟ್ಟಿ ಮಾಡಲಾಗಿದೆ. ಅವುಗಳಲ್ಲಿ ಕೆಲವು: ಸ್ಥಳೀಯ ಮಟ್ಟದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು, ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಿಸುವುದು, ಹಳ್ಳಿಯ ಆದಾಯ ದ್ವಿಗುಣಗೊಳಿಸುವುದು, ಸುಸ್ಥಿರ ನೀರು ನಿರ್ವಹಣಾ ವ್ಯವಸ್ಥೆಯ ಅಭಿವೃದ್ಧಿ, ಹಳ್ಳಿಯ ಜನರ ಆರೋಗ್ಯ ಸುಧಾರಣೆ, ಕಡಿಮೆ ವೆಚ್ಚದ ನೈರ್ಮಲ್ಯ ಸೌಕರ್ಯಗಳ ಅಭಿವೃದ್ಧಿ ಮತ್ತು ಅನುಷ್ಠಾನ, ಸ್ಥಳೀಯ ಪ್ರವಾಸೋದ್ಯಮ ಉತ್ತೇಜನಕ್ಕೆ ಹೊಸ ವಿಧಾನಗಳನ್ನು ಕಂಡುಕೊಳ್ಳುವುದು.

ತಾಂತ್ರಿಕ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಹೊಣೆಗಾರಿಕೆ ಬೆಳೆಸುವುದರ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಬಹಳಷ್ಟು ಸುಧಾರಣೆ ತರಬೇಕಿದ್ದ ಈ ಉಪಕ್ರಮ ಅನುಷ್ಠಾನಕ್ಕೆ ಬಂದು ಐದು ವರ್ಷಗಳಾಗಿವೆ. ಕೊರೊನಾ ಸೋಂಕು ವ್ಯಾಪಕವಾಗಿದ್ದ ಸಂದರ್ಭದಲ್ಲಿ ಚಟುವಟಿಕೆ ಅಂಕಗಳನ್ನು ಸಂಪಾದಿಸುವುದಕ್ಕೆ ವಿನಾಯಿತಿ ನೀಡಲಾಗಿತ್ತು. ಆದರೆ ಇದೀಗ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಪ್ರತಿವರ್ಷ 25 ಪಾಯಿಂಟ್‌ಗಳನ್ನು ಗಳಿಸಬೇಕಿದೆ.

ದೇಶದಾದ್ಯಂತ ನಿಗದಿತ ಪ್ರಮಾಣದ ಎಐಸಿಟಿಇ ಚಟುವಟಿಕೆ ಪಾಯಿಂಟ್‌ಗಳನ್ನು ಸಂಪಾದಿಸಿ ಈಗಾಗಲೇ ಲಕ್ಷಾಂತರ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ. ಆದರೆ, ಈ ಉಪಕ್ರಮ ಅಸಲಿಗೂ ಸಾಮಾಜಿಕ ಬದಲಾವಣೆ ತರುವ ದಿಸೆಯಲ್ಲಿ, ಗ್ರಾಮೀಣ ಜನರ ಜೀವನಮಟ್ಟ ಸುಧಾರಿಸುವಲ್ಲಿ ಇನಿತಾದರೂ ಪರಿಣಾಮ ಬೀರತೊಡಗಿದೆಯೇ ಎಂಬುದನ್ನು ಪರಿಶೀಲಿಸಬೇಕಿದೆ.

ಕರ್ನಾಟಕದ ಉದಾಹರಣೆಯನ್ನೇ ತೆಗೆದುಕೊಂಡು ನೋಡುವುದಾದರೂ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ ಹಿಂದಿನ ಮೂರ್ನಾಲ್ಕು ವರ್ಷಗಳಿಂದ ಪದವಿ ಪಡೆದಿರುವ ವಿದ್ಯಾರ್ಥಿಗಳೆಲ್ಲ ನಿಗದಿತ ಪ್ರಮಾಣದ ಎಐಸಿಟಿಇ ಚಟುವಟಿಕೆ ಪಾಯಿಂಟ್‌ಗಳನ್ನು ಗಳಿಸಿಯೇ ಇರುತ್ತಾರೆ. ಹೀಗೆ ಲಕ್ಷಾಂತರ ವಿದ್ಯಾರ್ಥಿಗಳು ಸಮಾಜ ಸುಧಾರಣೆಗೆ ಪೂರಕವಾದ ಚಟುವಟಿಕೆಗಳಲ್ಲಿ ತೊಡಗಿರುವುದು ಜನಸಾಮಾನ್ಯರ ಅದರಲ್ಲೂ ಗ್ರಾಮೀಣ ಪ್ರದೇಶದ ಜನರ ಗಮನಕ್ಕೆ ಬಾರದಿರಲು ಸಾಧ್ಯವೇ?

ಹಿಂದಿನ ನಾಲ್ಕು ವರ್ಷಗಳಲ್ಲಿ ಎಐಸಿಟಿಇ ಚಟುವಟಿಕೆ ಪಾಯಿಂಟ್‌ಗಳನ್ನು ಸಂಪಾದಿಸುವ ಸಲುವಾಗಿ ವಿದ್ಯಾರ್ಥಿಗಳು ಮಾಡಿದ ಗಮನಾರ್ಹ ಚಟುವಟಿಕೆಗಳು ಯಾವುವು ಎಂಬುದನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪಟ್ಟಿ ಮಾಡಿದರೆ, ಈ ಉಪಕ್ರಮ ತನ್ನ ಉದ್ದೇಶ ಸಾಧನೆಯಲ್ಲಿ ಯಾವ ಮಟ್ಟಿಗೆ ಯಶಸ್ವಿಯಾಗಿದೆ ಎನ್ನುವುದು ಮನದಟ್ಟಾಗಲಿದೆ.

ಎಐಸಿಟಿಇ ಜಾರಿಗೆ ತಂದ ಈ ಉಪಕ್ರಮವು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಹೊಣೆಗಾರಿಕೆ ಬೆಳೆಸುವ ಬದಲಿಗೆ ಮಾಡದ ಕೆಲಸಕ್ಕೆ ದಾಖಲೆ ಹೊಂಚುವ ಕಸರತ್ತಾಗಿ ಪರಿಣಮಿಸಿದೆ. ಈ ಉಪಕ್ರಮವನ್ನು ಕಾಟಾಚಾರಕ್ಕೆ ಮಾಡಿ ಮುಗಿಸಬೇಕಿರುವ ಪ್ರಕ್ರಿಯೆ ಎಂದೇ ಬಹುತೇಕ ವಿದ್ಯಾರ್ಥಿಗಳು ಹಾಗೂ ತಾಂತ್ರಿಕ ಶಿಕ್ಷಣ ನೀಡುವ ಸಂಸ್ಥೆಗಳು ಭಾವಿಸಿವೆ. ಹೀಗಾಗಿ, ಸಾಮಾಜಿಕ ಬದಲಾವಣೆಗೆ ಕಾರಣವಾಗುವ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ತೊಡಗಿಕೊಳ್ಳುತ್ತಿದ್ದಾರೆ ಎಂಬುದು ದಾಖಲೆಗಳಲ್ಲಿ ಇರುವುದಕ್ಕೂ ವಾಸ್ತವದಲ್ಲಿ ನಡೆಯುತ್ತಿರುವುದಕ್ಕೂ ಅಜಗಜಾಂತರ ಇದೆ.

ಉತ್ತಮ ಉದ್ದೇಶ ಇಟ್ಟುಕೊಂಡು ಜಾರಿಗೆ ತಂದ ಈ ಉಪಕ್ರಮದ ಅನುಷ್ಠಾನದ ವೇಳೆ ಎದುರಾಗಬಹುದಾದ ಸವಾಲುಗಳ ಕುರಿತು ಎಐಸಿಟಿಇ ಹೆಚ್ಚು ಗಮನಹರಿಸದ ಕಾರಣದಿಂದಾಗಿ, ಇದು ವಿದ್ಯಾರ್ಥಿಗಳಿಗೆ ಬೇಡವಾದ, ಆದರೆ ಪದವಿ ಗಳಿಸಿಕೊಳ್ಳಲು ಹೇಗಾದರೂ ದಾಖಲೆ ಹೊಂದಿಸಬೇಕಿರುವ ಕಸರತ್ತಾಗಿ ಮಾತ್ರ ಉಳಿದುಕೊಂಡಿದೆ. ತಾಂತ್ರಿಕ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ಸಾಮಾಜಿಕ ಬದ್ಧತೆ ಹೊಂದಲು ಪ್ರೇರೇಪಿಸುವ ಕೆಲ ವಿಷಯಗಳು ಈಗಾಗಲೇ ಎಂಜಿನಿಯರಿಂಗ್ ಪದವಿ ಪಠ್ಯದ ಭಾಗವಾಗಿವೆ.

ಚಟುವಟಿಕೆ ಪಾಯಿಂಟ್ಸ್ ಗಳಿಸಬೇಕೆನ್ನುವ ಉಪಕ್ರಮಕ್ಕಿಂತ 'ಸಾಮಾಜಿಕ ಸಂಪರ್ಕ ಮತ್ತು ಹೊಣೆಗಾರಿಕೆ' (ಸೋಷಿಯಲ್ ಕನೆಕ್ಟಿವಿಟಿ ಆ್ಯಂಡ್ ರೆಸ್ಪಾನ್ಸಿಬಿಲಿಟಿ) ಎಂಬ ವಿಷಯವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ರೂಪಿಸುವುದರೆಡೆಗೆ ತಾಂತ್ರಿಕ ಶಿಕ್ಷಣ ನೀಡುವ ವಿಶ್ವವಿದ್ಯಾಲಯಗಳು ಮತ್ತು ಅವುಗಳಿಗೆ ಮಾರ್ಗದರ್ಶಿ ಸೂತ್ರಗಳನ್ನು ಹಾಕಿಕೊಡುವ ಎಐಸಿಟಿಇ ಗಮನಹರಿಸುವುದು ಸೂಕ್ತ.

ವಾಚಕರ ವಾಣಿ

ಹಣ್ಣಾಗಿಸಲು ರಾಸಾಯನಿಕ ಬಳಕೆ

ಮಾವಿನ ಹಣ್ಣಿನ ಈ ಋತುವಿನಲ್ಲಿ ಕೆಲ ವ್ಯಾಪಾರಸ್ಥರು ರಾಸಾಯನಿಕಗಳನ್ನು ಬಳಸಿ ಮಾವನ್ನು ಹಣ್ಣಾಗಿಸುತ್ತಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ. ಜೊತೆಗೆ ಹಣ್ಣುಗಳು ತಾಜಾ ಮತ್ತು ಆಕರ್ಷಕವಾಗಿ ಕಾಣಲು ಕೆಲವರು ರಾಸಾಯನಿಕಯುಕ್ತ ಬಣ್ಣದ ನೀರಿನಲ್ಲಿ ಮುಳುಗಿಸುತ್ತಿದ್ದಾರೆ. ಇಂತಹ ಹಣ್ಣುಗಳನ್ನು ತಿನ್ನುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಹೀಗಾಗಿ, ಹಣ್ಣುಗಳನ್ನು ಖರೀದಿಸುವಾಗ ಸರಿಯಾಗಿ ಪರಿಶೀಲಿಸಬೇಕು. ಜೊತೆಗೆ, ರಾಸಾಯನಿಕ ಬಳಸಿ ಹಣ್ಣಾಗಿಸುವ ವ್ಯಾಪಾರಸ್ಥರ ವಿರುದ್ಧ ಸಂಬಂಧಿಸಿದ ಅಧಿಕಾರಿಗಳು ಕಠಿಣ ಕ್ರಮ ಕೈಗೊಳ್ಳಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ಬಾರದ ಗೌರವಧನ: ಉಪನ್ಯಾಸಕರಿಗೆ ಹೊರೆ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಅಡಿಯಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ - 1ರ ಉತ್ತರಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಏಪ್ರಿಲ್ ಮೊದಲ ವಾರ ಮುಗಿದಿದೆ. ಆದರೆ ಈ ಕಾರ್ಯದಲ್ಲಿ ಪಾಲ್ಗೊಂಡಿದ್ದ ಉಪನ್ಯಾಸಕರಿಗೆ ಇದುವರೆಗೂ ಆ ಸಂಬಂಧದ ಗೌರವಧನ ಬಂದಿಲ್ಲ. ಈ ಮೊದಲು ಮೌಲ್ಯಮಾಪನದ ಕೊನೆಯ ದಿನವೇ ಮೌಲ್ಯಮಾಪಕರಿಗೆ ಗೌರವಧನವನ್ನು ಚೆಕ್ ರೂಪದಲ್ಲಿ ಆಯಾ ಮೌಲ್ಯಮಾಪನ ಕೇಂದ್ರದಲ್ಲಿಯೇ ವಿತರಿಸಲಾಗುತ್ತಿತ್ತು. ಆದರೆ ಇತ್ತೀಚೆಗೆ ಗೌರವಧನವನ್ನು ಉಪನ್ಯಾಸಕರ ಖಾತೆಗಳಿಗೆ ನೇರವಾಗಿ, ಆದರೆ ಬಹಳ ವಿಳಂಬವಾಗಿ ಜಮಾ ಮಾಡಲಾಗುತ್ತಿದೆ. ಹಿಂದಿನ ವರ್ಷ ಮೌಲ್ಯಮಾಪನ ಪೂರ್ಣಗೊಳಿಸಿದ ಎರಡು– ಮೂರು ತಿಂಗಳ ನಂತರ ಗೌರವಧನ ಜಮೆಯಾಗಿತ್ತು.

ಇದರಿಂದ ಅನುದಾನರಹಿತ ಕಾಲೇಜುಗಳ ಉಪನ್ಯಾಸಕರಿಗೆ ಆರ್ಥಿಕವಾಗಿ ಹೊರೆಯಾಗುತ್ತಿದೆ. ಏಕೆಂದರೆ, ಬೇಸಿಗೆ ರಜೆಯಲ್ಲಿ ಅವರಿಗೆ ಸಂಬಳ ಇರುವುದಿಲ್ಲ. ಮೌಲ್ಯಮಾಪನ ಕಾರ್ಯಕ್ಕೆ ಬೇರೆ ಊರುಗಳಿಗೆ ಸ್ವಂತ ಖರ್ಚಿನಲ್ಲಿ ಅವರು ಹಾಜರಾಗಬೇಕಾಗುತ್ತದೆ. ಅಲ್ಲದೆ ಒಂದು ವಾರದ ವಸತಿ ಮತ್ತು ಊಟದ ವೆಚ್ಚವನ್ನು ಭರಿಸಬೇಕಾಗುತ್ತದೆ. ಖಾಸಗಿ ಕಾಲೇಜುಗಳ ಉಪನ್ಯಾಸಕರ ಹಿತದೃಷ್ಟಿಯಿಂದ ಮೊದಲಿನಂತೆ ಮೌಲ್ಯಮಾಪನದ ಕೊನೆಯ ದಿನ ಅಥವಾ ಮುಗಿದ ಎರಡು– ಮೂರು ದಿನಗಳಲ್ಲಿ ಗೌರವಧನ ಜಮಾ ಮಾಡಲು ಇಲಾಖೆ ಕ್ರಮ ಕೈಗೊಳ್ಳಬೇಕು.

ಅಶೋಕ ಓಜಿನಹಳ್ಳಿ, ಕೊಪ್ಪಳ

ದೀಪ ಆರಿಸದೇ ಹಣಕ್ಕಾಗಿ ಕಾಯುವವರು!

'ರಾಜಕಾರಣಕ್ಕೆ ಆಗಲಿ ನೀತಿಯ ದೀಕ್ಷೆ' ಎಂಬ ರಾಜಕುಮಾರ ಕುಲಕರ್ಣಿ ಅವರ ಲೇಖನ (ಸಂಗತ, ಮೇ 18) ಇಂದಿನ ರಾಜಕಾರಣಿಗಳ ನೈತಿಕ ಅಧಃಪತನದ ಬಗ್ಗೆ ತುಂಬಾ ಚೆನ್ನಾಗಿ ಚರ್ಚಿಸಿದೆ. ಕೆಲವು ವರ್ಷಗಳ ಹಿಂದೆ ರಾಜಕಾರಣಿಯೊಬ್ಬರು ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಾ, 'ರಾಜಕಾರಣಿಗಳು ಭ್ರಷ್ಟರಾದರೆ ಅದು ಯಾವತ್ತಾದರೂ ಸರಿಯಾಗಬಹುದೇನೊ ಎಂದು ಸಮಾಧಾನಪಟ್ಟುಕೊಳ್ಳಬಹುದಿತ್ತು. ಆದರೆ ಪ್ರಜಾಪ್ರಭುತ್ವದ ತಾಯಿಬೇರಾಗಿರುವ ಮತದಾರರೇ ಆ ಹಂತಕ್ಕೆ ಬಂದು ತಲುಪುವುದಿದೆಯಲ್ಲಾ ಅದು ತುಂಬಾ ಆತಂಕದ ವಿಷಯ' ಎಂದಿದ್ದರು. ಅವರ ಈ ಮಾತುಗಳು ನನ್ನ ಮನದಲ್ಲಿ ಸದಾ ಮಾರ್ದನಿಸುತ್ತಿರುತ್ತವೆ.

ಈ ಹಿಂದೆ ಚುನಾವಣೆಯ ಹಿಂದಿನ ದಿನ ಕೂಲಿಕಾರ್ಮಿಕರಿಗೆ ಅವರು ತಮ್ಮ ಕೂಲಿ ಕೆಲಸ ಬಿಟ್ಟು ಮತ ಹಾಕಲು ಬರುತ್ತಾರಲ್ಲಾ ಎನ್ನುವ ಕಾರಣದಿಂದ ಕೆಲವೆಡೆ ಖರ್ಚಿಗೆ ಕಾಸು ಕೊಡುವ ಪರಿಪಾಟ ಇತ್ತು. ರೈತಾಪಿ ವರ್ಗ ಹಾಗೂ ಆರ್ಥಿಕವಾಗಿ ಒಂದಷ್ಟು ಸುಸ್ಥಿತಿಯಲ್ಲಿದ್ದವರ ಮನೆಗಳಿಗೆ ಹಣ ಕೊಡಲು ಹೋಗುವುದಕ್ಕೆ ಪಕ್ಷಗಳ ಕಾರ್ಯಕರ್ತರು ಹೆದರುತ್ತಿದ್ದರು. ಏಕೆಂದರೆ ಅವರಿಂದ ವಾಚಾಮಗೋಚರವಾಗಿ ಬೈಸಿಕೊಂಡು ಬರಬೇಕಾಗಿತ್ತು. ಆದರೆ ಈಗ ಕಾಲ ಬದಲಾಗಿದೆ. ಲಕ್ಷಾಂತರ ರೂಪಾಯಿ ಆದಾಯ ಇರುವವರೂ ಚುನಾವಣೆಯ ಹಿಂದಿನ ದಿನ ಹಣ ಕೊಡದಿದ್ದರೆ 'ನಮಗೇಕೆ ಕೊಡಲಿಲ್ಲ' ಎಂದು ಕ್ಯಾತೆ ತೆಗೆಯುತ್ತಾರೆ. ಅಂದು ಇಡೀ ರಾತ್ರಿ ದೀಪ ಆರಿಸದೇ ಕಾಯುತ್ತಿರುತ್ತಾರೆ. ಮೊನ್ನೆ ಲೋಕಸಭಾ ಚುನಾವಣೆಯಲ್ಲಿ ಹಣ ಕೊಡಲಿಲ್ಲ ಎಂದು ಮತದಾನ ಬಹಿಷ್ಕರಿಸಿದ ಪ್ರಕರಣಗಳೂ ಕೆಲವೆಡೆ ನಡೆದಿವೆ. ಇದಕ್ಕೆಲ್ಲಾ ಅವರು ಕೊಡುವ ಉತ್ತರ, 'ರಾಜಕಾರಣಿಗಳು ಗೆದ್ದು ಹೋದ ಮೇಲೆ ನಮ್ಮ ಕೈಗೆ ಸಿಕ್ಕುವುದಿಲ್ಲ. ಅವರು ಬೇಕಾದಷ್ಟು ಹಣ ಮಾಡಿಕೊಳ್ಳುತ್ತಾರೆ. ಸಿಕ್ಕಷ್ಟು ತೆಗೆದುಕೊಳ್ಳಲು ನಮಗೆ ಚುನಾವಣೆ ಸಂದರ್ಭದಲ್ಲಿ ಮಾತ್ರ ಅವಕಾಶ. ಅದನ್ನೇಕೆ ನಾವು ಕಳೆದುಕೊಳ್ಳಬೇಕು' ಎಂದು. ಹಾಗಾದರೆ ನಾವು ಎಂತಹ ದುಃಸ್ಥಿತಿಯತ್ತ ಸಾಗುತ್ತಿದ್ದೇವೆ ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಬ್ರಹ್ಮಾಂಡ ಭ್ರಷ್ಟಾಚಾರ: ಜಾಣ ಕುರುಡು ಏಕೆ?

ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ಸಂಗ್ರಹವು ನಿರಾಶಾದಾಯಕವಾಗಿರುವ ಕುರಿತು ಪತ್ರಿಕೆಯು 'ಒಳನೋಟ'ದಲ್ಲಿ ಬೆಳಕು ಚೆಲ್ಲಿದೆ (ಪ್ರ.ವಾ., ಮೇ 19). ಸರ್ಕಾರ ಪ್ರತಿವರ್ಷ ಗ್ರಾಮ ಪಂಚಾಯಿತಿಗಳಿಗೆ ಕೋಟ್ಯಂತರ ರೂಪಾಯಿ ಅನುದಾನ ಒದಗಿಸುತ್ತಿದೆ. ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನ ಪಡೆಯಲು ಸದಸ್ಯರ ನಡುವೆ ತೀವ್ರ ಪೈಪೋಟಿ ನಡೆಯುತ್ತದೆ. ಅದಕ್ಕಾಗಿ ಲಕ್ಷಗಟ್ಟಲೆ ಖರ್ಚು ಮಾಡಿ ಕುರ್ಚಿ ಗಿಟ್ಟಿಸಿಕೊಳ್ಳುವ ವ್ಯಕ್ತಿಯು ಗ್ರಾಮದ ಅಭಿವೃದ್ಧಿಗಿಂತ ತಾನು ಹೂಡಿಕೆ ಮಾಡಿದ ಬಂಡವಾಳವನ್ನು ಲಾಭಸಮೇತ ಹಿಂಪಡೆಯಲು ಆಸಕ್ತಿ ವಹಿಸುತ್ತಾನೆ. ಹೀಗಾಗಿಯೇ, ತಮಗೆ ದೊರೆತ ಎಲ್ಲಾ ಅನುದಾನವನ್ನು ಬಳಸಿ ಕಾಮಗಾರಿ ಮಾಡಲಾಗಿದೆ ಎಂದು ದಾಖಲಾತಿಯಲ್ಲಿ ತೋರಿಸಲಾಗುತ್ತದೆ. ಸರ್ಕಾರಿ ಪ್ರಾಯೋಜಿತ ಅತಿ ದೊಡ್ಡ ಕಾರ್ಯಕ್ರಮವಾಗಿರುವ ಉದ್ಯೋಗ ಖಾತರಿ ಯೋಜನೆಯಲ್ಲಿ ಅತಿಹೆಚ್ಚು ಭ್ರಷ್ಟಾಚಾರ ನಡೆಯುತ್ತಿದೆ. ಇದರಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮೊದಲುಗೊಂಡು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳೂ ಶಾಮೀಲಾಗಿರುತ್ತಾರೆ. ಹೀಗಾಗಿಯೇ ಗ್ರಾಮ ಪಂಚಾಯಿತಿಗಳಲ್ಲಿ ನಡೆಯುತ್ತಿರುವ ಬ್ರಹ್ಮಾಂಡ ಭ್ರಷ್ಟಾಚಾರದ ಕುರಿತು ದೂರು ನೀಡಿದರೂ ಅವರು ಜಾಣ ಕುರುಡುತನ ಪ್ರದರ್ಶಿಸುತ್ತಾರೆ.

ಇಂತಹ ಬೆಳವಣಿಗೆಗಳಿಂದ ಜನರು ಪಂಚಾಯತ್ ರಾಜ್ ವ್ಯವಸ್ಥೆಯ ಮೇಲೆ ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ. ತಮ್ಮಿಂದ ಸಂಗ್ರಹಿಸಲಾಗುವ ಕರವನ್ನು ತಮ್ಮ ಹಾಗೂ ತಮ್ಮ ಊರಿನ ಅಭಿವೃದ್ಧಿಗೆ ಬಳಸಲಾಗುತ್ತದೆ ಎಂಬ ನಂಬಿಕೆಯೂ ಇಲ್ಲದೆ ತೆರಿಗೆ ಕಟ್ಟಲು ಅವರು ಹಿಂದೇಟು ಹಾಕುತ್ತಾರೆ. ಹಾಗಾಗಿ, ಸರ್ಕಾರವು ತೆರಿಗೆ ಸಂಗ್ರಹಿಸುವ ಗುರಿ ನಿಗದಿಪಡಿಸಿದರಷ್ಟೇ ಸಾಲದು. ಸಂಗ್ರಹಿಸಿದ ತೆರಿಗೆ ಹಾಗೂ ತಾನು ನೀಡಿದ ಅನುದಾನವು ಸಮರ್ಪಕವಾಗಿ ಬಳಕೆಯಾಗುವುದನ್ನು ಖಾತರಿಪಡಿಸಿಕೊಳ್ಳಬೇಕಾಗಿದೆ.

ಸುರೇಶ ಎಮ್. ತಾಕತರಾವ, ಹಲ್ಯಾಳ, ಅಥಣಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶಾಂತಿಪ್ರಿಯರ ಕಿರ್ಗಿಸ್ತಾನದಲ್ಲಿ ವಿದೇಶಿ ವಿದ್ಯಾರ್ಥಿಗಳ ಮೇಲೇಕೆ ಹಲ್ಲೆ?

ಮಧ್ಯ ಏಷ್ಯಾದ ಪುಟ್ಟ ದೇಶ ಕಿರ್ಗಿಸ್ತಾನ ಈಗ ಜಾಗತಿಕ ಮಟ್ಟದಲ್ಲಿ ಸುದ್ದಿಯಾಗಿದೆ. ಈಚೆಗೆ ಕಿರ್ಗಿಸ್ತಾನದ ಸ್ಥಳೀಯರು ವಿದೇಶಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ್ದರು. ಕೆಲವು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ ಎಂಬ ಸುದ್ದಿಗಳು ಇವೆಯಾದರೂ ಅಲ್ಲಿನ ಸರ್ಕಾರ ಅದನ್ನು ದೃಢಪಡಿಸಿಲ್ಲ. ಹೀಗೆ ಹಲ್ಲೆಗೆ ಗುರಿಯಾದ ವಿದ್ಯಾರ್ಥಿಗಳಲ್ಲಿ ಪಾಕಿಸ್ತಾನದವರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೂ, ಭಾರತದ ವಿದ್ಯಾರ್ಥಿಗಳ ಮೇಲೂ ಹಲ್ಲೆ ನಡೆದಿದೆ. ಈಗ ಪರಿಸ್ಥಿತಿ ತಿಳಿಯಾಗಿದೆ ಎಂದು ಅಲ್ಲಿನ ಸರ್ಕಾರ ಹೇಳುತ್ತಿದೆ. ಈವರೆಗೂ ಸುದ್ದಿಯಲ್ಲಿ ಇರದಿದ್ದ ಈ ದೇಶದಲ್ಲಿ ಇದ್ದಕ್ಕಿದ್ದಂತೆ ಇಂತಹ ಕಲಹ ನಡೆಯಲು ಕಾರಣಗಳೇನು ಎಂಬುದರ ಬಗ್ಗೆ ಚರ್ಚೆ ಆರಂಭವಾಗಿದೆ

ಪ್ರಜಾವಾಣಿ ವಾರ್ತೆ

ಕಿರ್ಗಿಝ್ ಭಾಷೆಯನ್ನಾಡುವ ಜನರ ಪುಟ್ಟ ನಾಡು ಕಿರ್ಗಿಸ್ತಾನ. ಒಂದೆಡೆ ಚೀನಾ, ದಕ್ಷಿಣದಲ್ಲಿ ತಜಕಿಸ್ತಾನ, ಉತ್ತರದಲ್ಲಿ ಕಜಕಸ್ತಾನದಿಂದ ಸುತ್ತುವರಿದಿರುವ ಈ ದೇಶ ಮತ್ತು ಅಲ್ಲಿನ ಜನರು ಶಾಂತಿಪ್ರಿಯರೆಂದು ಹೆಸರಾದವರು. ಆಂತರಿಕ ಕಲಹಗಳಾಗಲೀ, ನೆರೆಯ ದೇಶಗಳೊಂದಿಗೆ ಸಂಘರ್ಷವಾಗಲೀ ಇಲ್ಲದ ಈ ನಾಡು ವಿದೇಶಿಯರಿಗೂ ಹೆಚ್ಚು ಸುರಕ್ಷಿತ ಎಂದು ಹೆಸರಾಗಿತ್ತು. ಅಂತಹ ದೇಶದಲ್ಲಿ ಈಚೆಗೆ ವಿದೇಶಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆದಿದೆ. ಕೆಲವು ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡಿದ್ದಾರೆ. ಸಾವಿರಾರು ವಿದೇಶಿ ವಿದ್ಯಾರ್ಥಿಗಳು ತಮ್ಮ ತಾಯ್ನಾಡಿಗೆ ಮರಳಿದ್ದಾರೆ.

ಮಗನನ್ನು ತಬ್ಬಿರುವ ತಾಯಿ. ಕಿರ್ಗಿಸ್ತಾನದ ಮಾರುಕಟ್ಟೆಯಲ್ಲಿ ಕಂಡ ದೃಶ್ಯ

1991ಕ್ಕೂ ಮುನ್ನ ಯುಎಸ್‌ಎಸ್‌ಆರ್‌ನ ಸದಸ್ಯ ರಾಷ್ಟ್ರವಾಗಿದ್ದ ಕಿರ್ಗೀಝಿಯಾ, 1991ರ ಆಗಸ್ಟ್ 31ರಂದು ಸ್ವತಂತ್ರವಾಯಿತು. ದೇಶದ ಹೆಸರನ್ನು ಆಗ ಕಿರ್ಗಿಸ್ತಾನ ಎಂದು ಬದಲಿಸಲಾಗಿತ್ತು. ಕಿರ್ಗಿಝ್ ಇಲ್ಲಿನ ಮನೆಮಾತಾಗಿದ್ದರೂ ಯುಎಸ್‌ಎಸ್‌ಆರ್‌ನಡಿಯಲ್ಲಿ ಇದ್ದುದ್ದರಿಂದ ಈಗಲೂ ರಷ್ಯನ್ ಭಾಷೆಯೇ ಆಡಳಿತ ಭಾಷೆಯಾಗಿದೆ. ಯುಎಸ್‌ಎಸ್‌ಆರ್‌ನಿಂದ ಹೊರಬಂದ ನಂತರ ಕಿರ್ಗಿಸ್ತಾನ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿತು. ಕಿರ್ಗಿಸ್ತಾನದ ವೈದ್ಯಕೀಯ ಕಾಲೇಜುಗಳಿಗೆ ಅಂತರರಾಷ್ಟ್ರೀಯ ಮನ್ನಣೆ ಪಡೆದುಕೊಳ್ಳುವ ಮೂಲಕ ವಿದೇಶಿ ವಿದ್ಯಾರ್ಥಿಗಳಿಗೂ ಕೋರ್ಸ್‌ಗಳನ್ನು ಒದಗಿಸಲು ಆರಂಭಿಸಿತು. ಕಡಿಮೆ ವೆಚ್ಚ ಮತ್ತು ಉತ್ತಮ ಶೈಕ್ಷಣಿಕ ವಾತಾವರಣದ ಕಾರಣದಿಂದಲೇ ಕಿರ್ಗಿಸ್ತಾನದಲ್ಲಿ ವಿದೇಶಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು. ಹೀಗೆ ವಿದೇಶಿಯರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೂ, ಸ್ಥಳೀಯರು ಮತ್ತು ವಿದೇಶಿಯರ ಮಧ್ಯೆ ಈವರೆಗೆ ಕಲಹ ನಡೆದಿರಲಿಲ್ಲ. ಆದರೆ ಈಗ ಅಂಥ ಕಲಹ ನಡೆದಿದೆ.

ವಿದೇಶಿಯರಿಗೆ ವೈದ್ಯಕೀಯ ಕೋರ್ಸ್ ನೀಡುವ ಪ್ರಮುಖ ವೈದ್ಯಕೀಯ ಕಾಲೇಜುಗಳು ದೇಶದ ರಾಜಧಾನಿ ಬಿಶ್ಕೇಖ್‌ನಲ್ಲಿಯೇ ಇವೆ. ಇದೇ ಮೇ 12ರಂದು ಬಿಶ್ಕೇಖ್‌ನ ಕಾಲೇಜೊಂದರ ಬಳಿ ವಿದ್ಯಾರ್ಥಿಗಳ ಎರಡು ಗುಂಪುಗಳ ಮಧ್ಯೆ ಘರ್ಷಣೆ ನಡೆದಿತ್ತು. ಆ ಘರ್ಷಣೆ ನಡೆದದ್ದು ಏಕೆ ಎಂಬುದರ ಬಗ್ಗೆ ಕಿರ್ಗಿಸ್ತಾನ ಸರ್ಕಾರ ಈವರೆಗೆ ಮಾಹಿತಿ ಬಹಿರಂಗಪಡಿಸಿಲ್ಲ. ಆದರೆ ಘರ್ಷಣೆ ನಡೆದಾಗ ಈಜಿಪ್ಟ್‌ನ ವಿದ್ಯಾರ್ಥಿಗಳ ಗುಂಪು, ಸ್ಥಳೀಯ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿತ್ತು ಎನ್ನಲಾಗಿದೆ. ಆ ಹಲ್ಲೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಹಂಚಿಕೆಯಾಗಿತ್ತು. ಕಲಹ ತೀವ್ರಗೊಳ್ಳಲು ಈ ವಿಡಿಯೊಗಳೇ ಕಾರಣ ಎನ್ನಲಾಗಿದೆ. ವಿಡಿಯೊ ಹಂಚಿಕೆಯಾದ ಕೆಲವೇ ದಿನಗಳಲ್ಲಿ ಸ್ಥಳೀಯ ಯುವಕರ ಗುಂಪೊಂದು ವಿದೇಶಿ ವಿದ್ಯಾರ್ಥಿಗಳು ತಂಗಿರುವ ವಿದ್ಯಾರ್ಥಿ ನಿಲಯಗಳ ಮೇಲೆ ದಾಳಿ ನಡೆಸಿತ್ತು. ವಿದ್ಯಾರ್ಥಿಗಳನ್ನು ಹೊರಗೆ ಎಳೆದು ಹಲ್ಲೆ ನಡೆಸಿತ್ತು.

ಆ ಹಲ್ಲೆಯ ವಿಡಿಯೊಗಳೂ ಹಂಚಿಕೆಯಾದವು. ಆನಂತರ ಮತ್ತಷ್ಟು ಹಲ್ಲೆಗಳು ನಡೆದವು.

ಹೀಗೆ ಹಲ್ಲೆಗೆ ಗುರಿಯಾದವರಲ್ಲಿ ಪಾಕಿಸ್ತಾನದ ವಿದ್ಯಾರ್ಥಿಗಳ ಸಂಖ್ಯೆಯೇ ದೊಡ್ಡದು. ಜತೆಗೆ ಭಾರತ ಮತ್ತು ಬಾಂಗ್ಲಾದೇಶದ ವಿದ್ಯಾರ್ಥಿಗಳ ಮೇಲೂ ಹಲ್ಲೆ ನಡೆದ ಆರೋಪಗಳು ಕೇಳಿಬಂದವು. ಭಾರತದ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ನಿಲಯಗಳಿಂದ ಹೊರಬರಬಾರದು ಎಂದು ವಿದೇಶಾಂಗ ಸಚಿವಾಲಯ ಸಲಹೆ ನೀಡಿತು. ಕಿರ್ಗಿಸ್ತಾನದ ವಿದೇಶಾಂಗ ಸಚಿವಾಲಯದ ಜತೆಗೆ ಮಾತುಕತೆಯನ್ನೂ ನಡೆಸಿತು. ಪಾಕಿಸ್ತಾನವು ಇಸ್ಲಾಮಾಬಾದ್‌ನಲ್ಲಿನ ಕಿರ್ಗಿಸ್ತಾನ ರಾಯಭಾರಿಯನ್ನು ಕರೆಸಿ, ಪ್ರತಿಭಟನೆ ದಾಖಲಿಸಿತು. ಈ ಎಲ್ಲಾ ಬೆಳವಣಿಗೆಗಳ ನಂತರ ಕಿರ್ಗಿಸ್ತಾನ ಸರ್ಕಾರವು ಕ್ಷಿಪ್ರ ಕಾರ್ಯಾಚರಣೆ ನಡೆಸಿತು. ಸ್ಥಳೀಯರ ಮೇಲೆ ಹಲ್ಲೆ ನಡೆಸಿದ್ದ ಈಜಿಪ್ಟ್‌ನ ಮೂವರು ವಿದ್ಯಾರ್ಥಿಗಳನ್ನು ಬಂಧಿಸಿತು. ವಿದೇಶಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ್ದ 30ಕ್ಕೂ ಹೆಚ್ಚು ಸ್ಥಳೀಯರನ್ನು ಬಂಧಿಸಿತು. ಸ್ಥಳೀಯರು ಮತ್ತು ವಿದೇಶಿ ವಿದ್ಯಾರ್ಥಿಗಳ ಜತೆಗೆ ಮಾತುಕತೆ ನಡೆಸಿ, ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿತು.

ಆದರೆ ವಾತಾವರಣ ಇನ್ನೂ ಪೂರ್ಣ ಪ್ರಮಾಣದಲ್ಲಿ ತಿಳಿಯಾಗಿಲ್ಲ. ಭಾರತೀಯರೂ ಸೇರಿ ವಿದೇಶಿ ವಿದ್ಯಾರ್ಥಿಗಳು ನೆಲೆಸಿರುವ ವಿದ್ಯಾರ್ಥಿ ನಿಲಯಗಳು, ಪಿ.ಜಿ.ಗಳ ಭದ್ರತೆಗೆ ಅರೆಸೇನಾ ಪಡೆಯ ತುಕಡಿಗಳನ್ನು ನಿಯೋಜಿಸಲಾಗಿದೆ. ಸ್ಥಳೀಯ ಮತ್ತು ವಿದೇಶಿ ವಿದ್ಯಾರ್ಥಿಗಳಿಗೆ ಪ್ರತ್ಯೇಕ ತರಗತಿಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಪರಿಸ್ಥಿತಿ ತಿಳಿಯಾಗುವವರೆಗೆ ಇದೇ ವ್ಯವಸ್ಥೆಯನ್ನು ಮುಂದುವರಿಸುವುದಾಗಿ ಕಿರ್ಗಿಸ್ತಾನ ಸರ್ಕಾರ ಭರವಸೆ ನೀಡಿದೆ. ಕಿರ್ಗಿಸ್ತಾನದಲ್ಲಿನ ಭಾರತೀಯ ರಾಯಭಾರ ಕಚೇರಿಯೊಂದಿಗೆ ನಿರಂತರ ಸಂಪರ್ಕದಲ್ಲಿ ಇದ್ದೇವೆ. ಭಾರತೀಯ ವಿದ್ಯಾರ್ಥಿಗಳ ಸುರಕ್ಷತೆಗೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಹೇಳಿದೆ.

ಪಾಕ್‌ಗೆ ಮರಳಿದ 670 ವಿದ್ಯಾರ್ಥಿಗಳು

ಕಿರ್ಗಿಸ್ತಾನದಲ್ಲಿ ಪಾಕಿಸ್ತಾನದ 11,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದ್ದಾರೆ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವಾಲಯ ಹೇಳಿದೆ. ಈಗ ಕಿರ್ಗಿಸ್ತಾನದಲ್ಲಿ ದಾಳಿಗೆ ಗುರಿಯಾದವರಲ್ಲಿ ಪಾಕಿಸ್ತಾನದ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಕಾರಣ ಪಾಕ್ ಸರ್ಕಾರವು ತೆರವು ಕಾರ್ಯಾಚರಣೆಯನ್ನೂ ನಡೆಸಿದೆ.

ಈವರೆಗೆ ಎರಡು ವಿಶೇಷ ವಿಮಾನಗಳ ಮೂಲಕ ಒಟ್ಟು 670 ವಿದ್ಯಾರ್ಥಿಗಳನ್ನು ವಾಪಸ್ ಕರೆತರಲಾಗಿದೆ. ಮೊದಲ ವಿಮಾನದಲ್ಲಿ ಶನಿವಾರ 130 ಮತ್ತು ಭಾನುವಾರ 540 ವಿದ್ಯಾರ್ಥಿಗಳನ್ನು ಇಸ್ಲಾಮಾಬಾದ್‌ಗೆ ವಾಪಸ್ ಕರೆತರಲಾಗಿದೆ. ಅಗತ್ಯವಾದರೆ, ಅಲ್ಲಿರುವ ಎಲ್ಲಾ ವಿದ್ಯಾರ್ಥಿಗಳನ್ನು ವಾಪಸ್ ಕರೆತರಲಾಗುತ್ತದೆ ಎಂದು ಸಚಿವಾಲಯವು ಮಾಹಿತಿ ನೀಡಿದೆ. ವಿದ್ಯಾರ್ಥಿಗಳ ಮೇಲೆ ಅತ್ಯಾಚಾರ ನಡೆಸಲಾಗಿದೆ ಎಂದು ಪಾಕಿಸ್ತಾನದ ಕೆಲವು ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದಾರೆ. ಆದರೆ ಅಂತಹ ಯಾವುದೇ ಘಟನೆ ವರದಿಯಾಗಿಲ್ಲ ಎಂದು ಕಿರ್ಗಿಸ್ತಾನ ಸರ್ಕಾರ ಹೇಳಿದೆ.

15,000 ಭಾರತೀಯ ವಿದ್ಯಾರ್ಥಿಗಳು

ಕಿರ್ಗಿಸ್ತಾನದಲ್ಲಿ ವೈದ್ಯಕೀಯ ಕೋರ್ಸ್ ಮಾಡುತ್ತಿರುವ ವಿದೇಶಿ ವಿದ್ಯಾರ್ಥಿಗಳಲ್ಲಿ ಭಾರತೀಯರ ಸಂಖ್ಯೆಯೂ ಗಣನೀಯ. ಈಗ ಕಿರ್ಗಿಸ್ತಾನದಲ್ಲಿ 15,000ಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳು ಇದ್ದಾರೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ ಎಂದು ಪಿಟಿಐ ವರದಿ ಮಾಡಿದೆ. ನಿಖರ ಮಾಹಿತಿ ಲಭ್ಯವಿಲ್ಲ. ಆದರೆ ಕೈಗೆಟುಕವ ವೆಚ್ಚದಲ್ಲಿ ಇಲ್ಲಿ ವೈದ್ಯಕೀಯ ಪದವಿ ಪಡೆಯಲು ಅವಕಾಶವಿರುವ ಕಾರಣ ಭಾರತೀಯ ವಿದ್ಯಾರ್ಥಿಗಳು ಅಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹೋಗುತ್ತಾರೆ ಎನ್ನಲಾಗಿದೆ.

ಬೇರೆ ದೇಶಗಳಲ್ಲಿ ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಪರೀಕ್ಷೆ ಇರುವಂತೆ ಕಿರ್ಗಿಸ್ತಾನದಲ್ಲಿ ಪ್ರವೇಶ ಪರೀಕ್ಷೆ ಇಲ್ಲ. ಇಲ್ಲಿ ವಿದೇಶಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಮೂಲಕ ವೈದ್ಯಕೀಯ ಕೋರ್ಸ್‌ಗೆ ನೇರವಾಗಿ ಪ್ರವೇಶ ಪಡೆಯಬಹುದು. ಕಿರ್ಗಿಸ್ತಾನದಲ್ಲಿನ ವೈದ್ಯಕೀಯ ಕೋರ್ಸ್‌ಗಳಿಗೆ, ವೈದ್ಯಕೀಯ ಪದವಿಗಳಿಗೆ ವಿಶ್ವ ಆರೋಗ್ಯ ಸಂಸ್ಥೆಯ ಮಾನ್ಯತೆ ಇದೆ. ಜತೆಗೆ ಅಮೆರಿಕ, ರಷ್ಯಾ, ಭಾರತ ಮತ್ತು ಐರೋಪ್ಯ ದೇಶಗಳಲ್ಲೂ ಈ ಪದವಿಗೆ ಮಾನ್ಯತೆ ಇದೆ. ವೈದ್ಯಕೀಯ ಶಿಕ್ಷಣವು ಕಿರ್ಗಿಸ್ತಾನದ ಪ್ರಮುಖ ಆದಾಯದ ಮೂಲಗಳಲ್ಲಿ ಒಂದು. ಹೀಗಾಗಿ ಅಲ್ಲಿನ ಸರ್ಕಾರವು ವಿದೇಶಿ ವಿದ್ಯಾರ್ಥಿಗಳಿಗೆ ಪೂರಕವಾದ ಶೈಕ್ಷಣಿಕ ಮತ್ತು ಸಾಮಾಜಿಕ ವಾತಾವರಣವನ್ನು ರೂಪಿಸಿದೆ. ಹೀಗಾಗಿಯೇ ಭಾರತ, ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ವಿದ್ಯಾರ್ಥಿಗಳು ಕಿರ್ಗಿಸ್ತಾನವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ಭಾರತದಲ್ಲಿ ವೈದ್ಯಕೀಯ ಪದವಿ ಕೋರ್ಸ್ ಪೂರೈಸಲು ₹1 ಕೋಟಿಯಿಂದ ₹1.5 ಕೋಟಿ ವೆಚ್ಚ ಮಾಡಬೇಕಾಗುತ್ತದೆ. ಆದರೆ ಕಿರ್ಗಿಸ್ತಾನದಲ್ಲಿ ₹15 ಲಕ್ಷದಿಂದ ₹30 ಲಕ್ಷದೊಳಗೆ ಆರು ವರ್ಷಗಳ ಕೋರ್ಸ್ ಮುಗಿಸಬಹುದು. ಇಲ್ಲಿ ನೀಟ್ ಪರೀಕ್ಷೆಯಲ್ಲಿ ಸೀಟು ಪಡೆಯಲಾಗದ ವಿದ್ಯಾರ್ಥಿಗಳು ರಷ್ಯಾ, ಉಕ್ರೇನ್ ಮತ್ತು ಕಿರ್ಗಿಸ್ತಾನಕ್ಕೆ ಹೋಗುತ್ತಾರೆ. ಪ್ರವೇಶ ಪರೀಕ್ಷೆ ಇಲ್ಲದಿರುವ ಕಾರಣಕ್ಕೂ ವಿದೇಶಿ ವಿದ್ಯಾರ್ಥಿಗಳನ್ನು ಕಿರ್ಗಿಸ್ತಾನವು ಸೆಳೆಯುತ್ತದೆ ಎಂದು ಭಾರತದ ಕೆಲವು ಕೋಚಿಂಗ್ ಕೇಂದ್ರಗಳು ಸುದ್ದಿಸಂಸ್ಥೆಗಳಿಗೆ ಮಾಹಿತಿ ನೀಡಿವೆ.

ಕಿರ್ಗಿಸ್ತಾನದಲ್ಲಿ ಕಾಲೇಜುಗಳೇ ವಿದೇಶಿ ವಿದ್ಯಾರ್ಥಿಗಳಿಗೆ ವಸತಿ ವ್ಯವಸ್ಥೆ ಕಲ್ಪಿಸಿಕೊಡುತ್ತವೆ. ಭಾರತೀಯ ವಿದ್ಯಾರ್ಥಿಗಳಿಗೆ ಭಾರತೀಯ ಊಟವನ್ನೂ ಒದಗಿಸಿಕೊಡಲಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಖರ್ಚುವೆಚ್ಚಗಳನ್ನು ಹೊಂದಿಸಿಕೊಳ್ಳಲು ಕಾಲೇಜುಗಳೇ ಅರೆಕಾಲಿಕ ಉದ್ಯೋಗವನ್ನೂ ಒದಗಿಸಿಕೊಡುತ್ತವೆ. ಇದಲ್ಲದೇ ಐದು ವರ್ಷಗಳ ಕೋರ್ಸ್ ಮತ್ತು ಒಂದು ವರ್ಷದ ಇಂಟರ್ನ್‌ಶಿಪ್ ನೀಡುತ್ತವೆ. ಇದರಿಂದ ಬೋಧನಾ ಚಟುವಟಿಕೆಗಳ ಜತೆಗೆ ಪ್ರಾಯೋಗಿಕ ಶಿಕ್ಷಣವೂ ಸುಲಭವಾಗಿ ದೊರೆಯುತ್ತದೆ. ಕಿರ್ಗಿಸ್ತಾನದ ಆಡಳಿತ ಭಾಷೆ ರಷ್ಯನ್ ಆಗಿದ್ದರೂ, ಪ್ರಮುಖ ಬೋಧನಾ ಮಾಧ್ಯಮ ಇಂಗ್ಲಿಷ್ ಆಗಿದೆ. ಈ ಕಾರಣದಿಂದ ವಿದೇಶಿ ವಿದ್ಯಾರ್ಥಿಗಳಿಗೂ ಕಲಿಕೆ ಇಲ್ಲಿ ಸುಲಭವಾಗಲಿದೆ. ಈ ಎಲ್ಲಾ ಕಾರಣದಿಂದ ಭಾರತೀಯ ವಿದ್ಯಾರ್ಥಿಗಳು ಕಿರ್ಗಿಸ್ತಾನವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಎಂದು ಈ ಕೋಚಿಂಗ್ ಕೇಂದ್ರಗಳು ಮಾಹಿತಿ ನೀಡಿವೆ.

ಭಾರತೀಯರು ಸುರಕ್ಷಿತ

ಭಾರತೀಯ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆದಿದ್ದರೂ, ಆ ಸಂಖ್ಯೆ ತೀರಾ ಕಡಿಮೆ ಇದೆ. ಅವರಿಗೆ ಎಲ್ಲಾ ಸ್ವರೂಪದ ಭದ್ರತೆಯನ್ನು ಒದಗಿಸಲಾಗಿದೆ ಎಂದು ಕಿರ್ಗಿಸ್ತಾನ ಸರ್ಕಾರ ಹೇಳಿದೆ. ಹೀಗಾಗಿ ಭಾರತದ ವಿದ್ಯಾರ್ಥಿಗಳು ಸುರಕ್ಷಿತವಾಗಿದ್ದಾರೆ ಎಂದು ಭಾವಿಸಲಾಗಿದೆ. ಈ ಕಾರಣದಿಂದಲೇ ಅಲ್ಲಿಂದ ಭಾರತೀಯ ವಿದ್ಯಾರ್ಥಿಗಳನ್ನು ವಾಪಸ್ ಕರೆಸಿಕೊಳ್ಳುವ ಯಾವುದೇ ಕಾರ್ಯಾಚರಣೆಯನ್ನು ಆರಂಭಿಸಿಲ್ಲ ಎನ್ನಲಾಗಿದೆ. ಅಂತಹ ಪರಿಸ್ಥಿತಿ ಎದುರಾದರೆ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರಲಾಗುತ್ತದೆ. ಆದರೆ ಅಂತಹ ಪರಿಸ್ಥಿತಿ ತಲೆದೋರುವ ಯಾವುದೇ ಸೂಚನೆ ಇಲ್ಲ ಎನ್ನಲಾಗಿದೆ.

ಆಧಾರ: ಎಎಫ್‌ಪಿ, ಪಿಟಿಐ, ಎಪಿ ಮತ್ತು ರಾಯಿಟರ್ಸ್

ಸಿನಿ ಬಿಟ್ಸ್

‘...ಭಾಗ್ಯಲಕ್ಷ್ಮಿ’ಗೆ ಜೊತೆಯಾದ ಸಿಂಪಲ್ ಸುನಿ



ದೀಕ್ಷಿತ್ ಶೆಟ್ಟಿ

ದೀಕ್ಷಿತ್ ಶೆಟ್ಟಿ, ಬೃಂದಾ ಆಚಾರ್ಯ ಜೋಡಿಯಾಗಿ ನಟಿಸುತ್ತಿರುವ ‘ಬ್ಯಾಂಕ್ of ಭಾಗ್ಯಲಕ್ಷ್ಮಿ’ ಚಿತ್ರದ ಚಿತ್ರೀಕರಣ ಮುಕ್ತಾಯದ ಹಂತ ತಲುಪಿದೆ. ನಿರ್ದೇಶಕ ಸಿಂಪಲ್ ಸುನಿ ಚಿತ್ರದ ಪೋಸ್ಟರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

‘ಅವನೇ ಶ್ರೀಮನ್ನಾರಾಯಣ’ ಸೇರಿದಂತೆ ಸಾಕಷ್ಟು ಚಿತ್ರಗಳಿಗೆ ವಿಎಫ್‌ಎಕ್ಸ್ ನೀಡಿರುವ ಅಭಿಷೇಕ ಎಂ. ಈ ಚಿತ್ರದ ಮೂಲಕ ನಿರ್ದೇಶಕರಾಗಿದ್ದಾರೆ. ಈ ಹಿಂದೆ ‘ರಂಗಿ ತರಂಗ’ ಸೇರಿದಂತೆ ಕೆಲವು ಚಿತ್ರಗಳನ್ನು ನಿರ್ಮಿಸಿದ್ದ ಹೆಚ್.ಕೆ ಪ್ರಕಾಶ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

‘ಶೇ.80ರಷ್ಟು ಚಿತ್ರೀಕರಣ ಮುಗಿದಿದೆ. ಮುಂದಿನ ತಿಂಗಳು ಚಿತ್ರೀಕರಣ ಮುಗಿಸಿ, ಈ ವರ್ಷವೇ ತೆರೆಗೆ ಬರುವ ಆಲೋಚನೆಯಿದೆ. ಬೆಂಗಳೂರು, ತುಮಕೂರು ಹಾಗೂ ಚಿತ್ರದುರ್ಗದ ಸುತ್ತ ಚಿತ್ರೀಕರಣ ಮಾಡಲಾಗಿದೆ. ಬ್ಯಾಂಕ್‌ವೊಂದನ್ನು ದರೋಡೆ ಮಾಡಲು ಹೊರಟವರ ಸುತ್ತ ಹೆಣೆಯಲಾದ ಹಾಸ್ಯ ಪ್ರಧಾನ ಕಥಾಹಂದರವಿದೆ’ ಎನ್ನುತ್ತಾರೆ ನಿರ್ದೇಶಕ ಅಭಿಷೇಕ.

ಸಾಧುಕೋಕಿಲ, ಗೋಪಾಲ ಕೃಷ್ಣ ದೇಶಪಾಂಡೆ, ಉಷಾ ಭಂಡಾರಿ, ಅಶ್ವಿನ್ ರಾವ್ ಪಲ್ಲಕ್ಕಿ ಮುಂತಾದವರ ತಾರಾಗಣ ಚಿತ್ರದಲ್ಲಿದೆ. ಕನ್ನಡ ಹಾಗೂ ತೆಲುಗಿನಲ್ಲಿ ಚಿತ್ರ ತೆರೆಗೆ ಬರಲಿದೆ ಎಂದು ತಂಡ ಹೇಳಿದೆ. ಜ್ಯೂಡಾ ಸ್ಯಾಂಡಿ ಸಂಗೀತ ನಿರ್ದೇಶನ, ಅಭಿಷೇಕ್ ಜಿ ಕಾಸರಗೋಡು ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

‘ಅನರ್ಥ’ ಟ್ರೇಲರ್ ಬಿಡುಗಡೆ

‘ಗುಪ್ತಗಾಮಿನಿ’, ‘ಪ್ರೀತಿ ಇಲ್ಲದ ಮೇಲೆ’ ಮುಂತಾದ ಧಾರಾವಾಹಿಗಳ ಸಂಚಿಕೆ ನಿರ್ದೇಶಕರಾಗಿದ್ದ ರಮೇಶ್ ಕೃಷ್ಣ ಆ್ಯಕ್ಷನ್–ಕಟ್ ಹೇಳಿರುವ ‘ಅನರ್ಥ’ ಚಿತ್ರದ ಟ್ರೇಲರ್ ಮತ್ತು ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ.

‘ಬಲಹೀನತೆಯಿಂದ ಕ್ರೂರತನ ಹುಟ್ಟುತ್ತದೆ’ ಎಂಬ ಅಡಿಬರಹ ಹೊಂದಿರುವ ಚಿತ್ರ ಸೆನ್ಸಾರ್ ಮುಗಿಸಿ ಶೀಘ್ರದಲ್ಲಿ ತೆರೆಗೆ ಬರಲು ಸಿದ್ಧವಿದೆ. ‘ಅವಕಾಶ್-ಆಕೃತಿ ಎರಡು ಪಾತ್ರಗಳ ಸುತ್ತ ಚಿತ್ರವು ಸಾಗುತ್ತದೆ. ಇಬ್ಬರು ಪ್ರೀತಿಸಿರುತ್ತಾರೆ. ಅಮಾವ್ಯಾಸೆಯ ದಿನ ಯಮಗಂಡ ಕಾಲದಲ್ಲಿ ಮದುವೆಯಾಗಲು ನಿರ್ಧರಿಸಿ, ಒಬ್ಬರನ್ನೊಬ್ಬರು ಅರಿತುಕೊಳ್ಳಲು ಒಂದು ಸ್ಥಳಕ್ಕೆ ಹೋಗುತ್ತಾರೆ. ಅಲ್ಲಿಗೆ ಹೋದಾಗ ಏನಾಗುತ್ತದೆ? ಎಂಬುದನ್ನು ಚಿತ್ರದಲ್ಲಿ ನೋಡಬೇಕು. ಊಹಿಸಲಾಗದ ತಿರುವುಗಳಿವೆ. ಕಮರ್ಷಿಯಲ್ ಚಿತ್ರಗಳಿಂದ ಹೊರತಾದ ಕೆಲವು ಸಂಗತಿಗಳಿವೆ’ ಎಂದರು ನಿರ್ದೇಶಕರು.

ತೇಜಸ್ ಸಿನಿ ಕ್ರಿಯೇಶನ್ಸ್ ಮೂಲಕ ಶ್ರೀಧರ್.ಎನ್.ಸಿ.ಹೊಸಮನೆ ಬಂಡವಾಳ ಹೂಡಿದ್ದಾರೆ. ನಾಯಕ ವಿಶಾಲ್ ಮಣ್ಣೂರು ಅವರಿಗೆ ವಿಹಾನಿ ಜೋಡಿಯಾಗಿದ್ದಾರೆ. ವಿ.ನಾಗೇಂದ್ರಪ್ರಸಾದ್ ಸಾಹಿತ್ಯ–ಸಂಗೀತ, ಕುಮಾರ್‌ಗೌಡನಾಗವಾರ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ವಿಹಾನಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮುಂಬೈ–ನಾಗ್ಪುರ ಮಧ್ಯೆ ಎಕ್ಸ್‌ಪ್ರೆಸ್‌ವೇ ನಿರ್ಮಿಸಲಾಗಿದೆ. ಇದು 700 ಕಿ.ಮೀ ಉದ್ದವಿರುವ ಎಕ್ಸ್‌ಪ್ರೆಸ್‌ವೇ. ಈ ಎಕ್ಸ್‌ಪ್ರೆಸ್‌ವೇ ನಿರ್ಮಿಸಲು ₹900 ಕೋಟಿ ಖರ್ಚು ಮಾಡಲಾಗಿದೆ ಎಂಬ ವಿವರ ಇರುವ ಪೋಸ್ಟ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ ಈ ಪೋಸ್ಟ್‌ಗಳಲ್ಲಿ ಮುಂಬೈ–ನಾಗ್ಪುರ ಎಕ್ಸ್‌ಪ್ರೆಸ್‌ವೇಗೆ ಸಂಬಂಧಿಸಿದಂತೆ ಹಂಚಿಕೊಳ್ಳಲಾಗಿರುವ ಮಾಹಿತಿಗಳು ತಪ್ಪು.

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256



ಮುಂಬೈ–ನಾಗ್ಪುರ ಎಕ್ಸ್‌ಪ್ರೆಸ್‌ವೇನ ಒಟ್ಟು ಉದ್ದ 701 ಕಿ.ಮೀ. ಈ ಹೆದ್ದಾರಿಯ ಕೆಲವು ಭಾಗಗಳ ಕಾಮಗಾರಿಯಷ್ಟೇ ಪೂರ್ಣಗೊಂಡಿದೆ. ಇನ್ನೂ ಕಾಮಗಾರಿ ನಡೆಯುತ್ತಿದೆ. ಈ ಹೆದ್ದಾರಿಯ ಕಾಮಗಾರಿಯ ಗುತ್ತಿಗೆ ಮೊತ್ತ ಒಟ್ಟು ₹55,000 ಕೋಟಿಯಷ್ಟು. ಹೀಗಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿರುವಂತೆ, ಈ ಹೆದ್ದಾರಿ ನಿರ್ಮಾಣಕ್ಕೆ ₹900 ಕೋಟಿಯಷ್ಟೇ ವೆಚ್ಚವಾಗಿದೆ ಎಂಬುದು ತಪ್ಪು ಮಾಹಿತಿ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ಮೇ 20, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ದ್ವಾದಶಿ ಗಂ. 15-59 ನಕ್ಷತ್ರ: ಚಿತ್ತಾ ಅಹೋರಾತ್ರ ಯೋಗ: ಸಿದ್ಧಿ (ಆಸ್ರಿಕ್) ಗಂ. 12-10 ಕರಣ: ಬಾಲವ ಗಂ. 15-59, ವೃಷಭ ಮಾಸದ ನೇ 07 ದಿನ, ಮಳೆನಕ್ಷತ್ರ: ಕೃತ್ತಿಕಾ 3.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-07 ಸೂರ್ಯಾಸ್ತ : 06-47
ಮುಸ್ಲಿಂ ದಿನಾಂಕ : 11 ಜುಲ್ಕಾಯದ್
ಅದೃಷ್ಟ ಸಂಖ್ಯೆ : 6, 11

ಮೇಷ: ಕ್ರೀಡಾಪಟುಗಳು ಛಲ ಬಿಡದೆ ಪರಿಶ್ರಮ ವಹಿಸಿದ್ದಕ್ಕಾಗಿ ಉತ್ತಮ ಅವಕಾಶಗಳೊಂದಿಗೆ ಉತ್ತಮ ಮಾರ್ಗದರ್ಶಕರು ದೊರೆತು ಜಯದ ಪಥದಲ್ಲಿ ನಡೆಯುವಿರಿ. ನ್ಯಾಯಾಲಯದ ವಿಚಾರಣೆಗಳಲ್ಲಿ ಜಯ ನಿಮ್ಮದಾಗಿರುತ್ತದೆ.

ವೃಷಭ: ಹಗಲು ರಾತ್ರಿ ಎಂದೆನ್ನದೆ ಪಟ್ಟ ಶ್ರಮವು ಉತ್ತಮ ಫಲವನ್ನು ಶೀಘ್ರ ನೀಡಲಿದೆ. ಆಪ್ತರು ಸಕಾಲಿಕ ನೆರವಿಗಾಗಿ ಧನ್ಯವಾದ ತಿಳಿಸುವರು. ಬಾಕಿ ಇರುವ ಕೆಲಸಗಳನ್ನು ಪೂರ್ಣಗೊಳಿಸುವಿರಿ.

ಮಿಥುನ: ಹಿರಿಯ ವ್ಯಕ್ತಿಗಳ ಜೊತೆಗಿನ ಮಾತುಕತೆಯಿಂದಾಗಿ ಪಡೆದ ಮಾರ್ಗದರ್ಶನವು ಭೂಗೋಳ ಶಾಸ್ತ್ರಜ್ಞರಿಗೆ ಬಹಳ ಪ್ರಯೋಜನಕ್ಕೆ ಬರಲಿದೆ. ನವ ದಂಪತಿ ಪ್ರಯಾಣ ಮಾಡುವುದಿದ್ದರೆ ಬಹಳ ಮುಂಜಾಗ್ರತೆ ವಹಿಸಬೇಕು.

ಕರ್ಕಾಟಕ: ಹೂವಿನ ಗಿಡಗಳನ್ನು ಮಾರಾಟ ಮಾಡುವವರಿಗೆ ಹಣ ಸಂಪಾದನೆಯಾಗುತ್ತದೆ. ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರುವುದು ಲೇಸು. ಕೃತಕ ಜಾಹೀರಾತುಗಳಿಗೆ ಮಾರುಹೋಗದಿರಿ.

ಸಿಂಹ: ಕಾರ್ಯಕ್ಷೇತ್ರದಲ್ಲಿ ಶಕ್ತಿಯುತವಾದ ಅಧಿಕಾರ ಸ್ಥಾಪಿಸಲು ಅನುಕೂಲಕರವಾದ ಸಮಯ ನಿರ್ಮಾಣವಾಗಲಿದೆ. ಕೆಲಸದಲ್ಲಿನ ಅಡೆತಡೆಗಳ ನಿವಾರಣೆಯಾಗಿ ಸಮಯ ಉಳಿತಾಯವಾಗಲಿದೆ.

ಕನ್ಯಾ: ಮನೆಯಲ್ಲಿ ನಡೆಯುವ ಶುಭಸಮಾರಂಭಕ್ಕೆ ಬಂಧುಗಳ ಸಹಕಾರ ದೊರೆಯಲಿದೆ. ಆಗು-ಹೋಗು ಅರಿತು ವ್ಯವಹಾರ ದಲ್ಲಿ ಮುಂದುವರಿಯಿರಿ. ಅನವಶ್ಯಕ ಖರ್ಚುಗಳು ಸಂಭವಿಸಬಹುದು.

ತುಲಾ: ಯಾರ ಪರವನ್ನು ವಹಿಸುವುದಿದ್ದರೂ ಸರಿಯಾದ ವಿಚಾರವನ್ನು ತಿಳಿಯದೆ ಮುಂದುವರಿಯಬೇಡಿ. ಜನತಾ ನಿರ್ಧಾರವನ್ನು ಅರಿಯದೆ ರಾಜಕೀಯ ನಾಯಕರು ಇಟ್ಟ ತಪ್ಪು ಹೆಜ್ಜೆಯು ನಿಂದನೆಗೊಳಗಾಗುವ ಸಾಧ್ಯತೆಗಳಿವೆ.

ವೃಶ್ಚಿಕ: ದೊಡ್ಡ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಯೋಚಿಸಿ ಅಥವಾ ಮಾರ್ಗದರ್ಶಕರ ಸಲಹೆ ಪಡೆದು ಪರಿಹರಿಸಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಿರಿ. ಶಸ್ತ್ರವೈದ್ಯರಿಗೆ ಸಂಬಂಧಿಸಿದಂತೆ ಸೌಲಭ್ಯಗಳು ಹೆಚ್ಚಲಿವೆ.

ಧನು: ಪಿತ್ತದೋಷದಿಂದ ನಾನಾರೀತಿಯ ಕಾಯಿಲೆಗೆ ಒಳಗಾದವರು ಆಯುರ್ವೇದದ ಮೊರೆಹೋಗುವುದು ಸೂಕ್ತಕರ. ರಾಜಕೀಯ ವರ್ಗದವರು ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು ಕಾಣಲಿದ್ದೀರಿ.

ಮಕರ: ಹಿಂದಿನ ಸೂತ್ರಧಾರನು ನಡೆಸುತ್ತಿರುವ ಕೈವಾಡವು ಕಷ್ಟವಾಗುತ್ತಿದ್ದರೂ ಏನೂ ಮಾಡದ ಪರಿಸ್ಥಿತಿ ಎದುರಾಗುತ್ತದೆ. ಹಿಂದಿನ ಕುಟುಂಬದಲ್ಲಿನ ಕಲಹಗಳು ರಾಜಿಯಲ್ಲಿ ತೀರ್ಮಾನಗೊಳ್ಳಲಿದೆ.

ಕುಂಭ: ಪಿತ್ರಾರ್ಜಿತ ಆಸ್ತಿಗಾಗಿ ನಡೆಯುತ್ತಿದ್ದ ವಾದವಿವಾದಗಳು ಎಲ್ಲರಿಗೂ ಸರಿಯಾಗುವ ರೀತಿಯಲ್ಲಿ ಕೊನೆಗೊಂಡು ಬಯಸಿದ್ದನ್ನು ಪಡೆಯುತ್ತೀರಿ. ತಂದೆ-ತಾಯಿಯ ಆರೋಗ್ಯದ ಕಡೆಗೆ ಗಮನ ಕೊಡುವುದು ಅನಿವಾರ್ಯ.

ಮೀನ: ಸ್ನೇಹಿತರೊಂದಿಗಿನ ಮಾತುಕತೆ ಉಪಯುಕ್ತವೆನಿಸಲಿದೆ. ಮಗನಿಗೆ ಓದಿನಲ್ಲಿ ಸಹಾಯ ಮಾಡುವಿರಿ. ಕೆಲಸಗಾರರಲ್ಲಿ ಒಮ್ಮತಾಭಿಪ್ರಾಯ ಮೂಡಿಸುವಲ್ಲಿ ಯಶಸ್ವಿಯಾಗುವಿರಿ.

ನುಡಿ ಬೆಳಗು

ಭಯ ಬಿಸಾಕಿ

ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಒಂದೂರಲ್ಲಿ ದೆವ್ವ ಭೂತ ಪ್ರೇತ ಪಿಶಾಚಿ ಇತ್ಯಾದಿಗಳನ್ನು ನಂಬದ ಒಬ್ಬ ಧೈರ್ಯಶಾಲಿ ಇದ್ದ. ಅವನು ಈ ರೀತಿಯ ಮೂಢನಂಬಿಕೆಗಳಿಂದ ಭಯಪಡುತ್ತಿದ್ದ ಜನರ ಎದುರಿಗೆ ಒಂದು ಸವಾಲೆಸೆದ. ‘ನಾನು ನಮ್ಮೂರಿನ ಸ್ಮಶಾನಕ್ಕೆ ಅಮಾವಾಸ್ಯೆಯ ದಿನ ಮಧ್ಯರಾತ್ರಿಯಲ್ಲಿ ಹೋಗಿ ಅಲ್ಲಿರುವ ಆಲದ ಮರಕ್ಕೆ ಒಂದು ಮೊಳೆ ಹೊಡೆಯುತ್ತೇನೆ’ ಎಂಬುದೇ ಅವನೆಸೆದ ಸವಾಲು. ಆ ದಿನ ಬಂತು. ನಮ್ಮ ಧೈರ್ಯಶಾಲಿ ವ್ಯಕ್ತಿ ಅಮಾವಾಸ್ಯೆಯ ಮಧ್ಯರಾತ್ರಿ ಸ್ಮಶಾನಕ್ಕೆ ಹೊರಟೇಬಿಟ್ಟ. ಧೈರ್ಯದಿಂದಲೇ ಆಲದ ಮರಕ್ಕೆ ಮೊಳೆಯನ್ನೂ ಹೊಡೆದ. ಆಮೇಲೆ ಆತ ಇನ್ನೇನು ವಾಪಸ್ ಹೊರಡಬೇಕು ಆಗ ಅವನು ಉಟ್ಟಿದ ಪಂಚೆಯನ್ನು ಯಾರೋ ಬಲವಾಗಿ ಹಿಡಿದು ಎಳೆದಂತಾಯಿತು. ಈಗ ನಮ್ಮ ಧೈರ್ಯಶಾಲಿಯ ಎದೆ ಗುಂಡಿಗೆ ಧಸಕ್ಕೆಂದಿತು... ಆತ ಯಾವುದೋ ಭೂತ ತನ್ನನ್ನು ಹಿಡಿದೆಳೆಯುತ್ತಿದೆ ಎಂಬ ಭಯದಿಂದ ಹೃದಯಾಘಾತಕ್ಕೊಳಗಾಗಿ ಅಲ್ಲಿಯೇ ಸತ್ತು ಹೋದ.

ಮರುದಿನ ಹೋಗಿ ನೋಡಿದರೆ ಈ ವ್ಯಕ್ತಿ ಮರಕ್ಕೆ ಮೊಳೆಯನ್ನು ಹೊಡೆಯುವ ಗಡಿಬಿಡಿಯಲ್ಲಿ ತಾನು ಉಟ್ಟಿದ್ದ ಪಂಚೆಯ ತುದಿಯನ್ನೂ ಸೇರಿಸಿ ಮೊಳೆ ಹೊಡೆದು ಬಿಟ್ಟಿದ್ದಾನೆ. ಹೀಗಾಗಿ ಅವನು ಹೊರಟಾಗ ಯಾರೋ ಅವನ ಪಂಚೆಯನ್ನು ಹಿಡಿದು ಎಳೆದಂತಾಗಿದೆ. ಪಂಚೆ ಹಿಡಿದೆಳೆದಂತೆ ಆ ವ್ಯಕ್ತಿಗಾದ ಅನುಭವವೇನೋ ನಿಜ ಆದರೆ ಅದು ಯಾವುದೇ ದೆವ್ವ ಭೂತದ ಕೆಲಸವಲ್ಲ ಬದಲಿಗೆ ಅವನೇ ಹೊಡೆದ ಮೊಳೆಯಿಂದಾದದ್ದು.

ಎಂದರೆ ಹೀಗೆಯೆ... ಇಂಗ್ಲಿಷ್‌ನಲ್ಲಿ ಭಯಕ್ಕೆ ಬಳಸುವ FEAR ಎನ್ನುವ ಪದವನ್ನು False Evidence Appearing as Real ಎಂಬುದಾಗಿ ವಿಸ್ತರಿಸಬಹುದು. ಎಷ್ಟೋ ಬಾರಿ ನಮ್ಮ ಧೈರ್ಯಸ್ಥ ವ್ಯಕ್ತಿಗೆ ಆದಂತೆ, ಅನುಭವಕ್ಕೆ ಬಂದಿದ್ದು ಸಹ ಸುಳ್ಳಾಗಿರಬಹುದು. ಅದನ್ನು ತಣ್ಣನೆಯ ಮನಃಸ್ಥಿತಿಯಿಂದ ವಿಮರ್ಶಿಸಿದಾಗ ಮಾತ್ರ ಅದು ಭಯವಾಗಿ ಪರಿವರ್ತನೆಗೊಳ್ಳುವುದಿಲ್ಲ. ಕೆಲವೊಮ್ಮೆ ಕತ್ತಲಲ್ಲಿ ಹರಿದಾಡಿದ ಹಗ್ಗ ಹಾವೆಂದು ಭಾಸವಾಗಿ ಭಯ ಮೂಡಿಸುವುದಿಲ್ಲವೇ?

ನಮ್ಮ ವ್ಯಕ್ತಿತ್ವಕ್ಕೆ ಕಾಟ ಕೊಡುವ ವೈರಸ್‌ಗಳಲ್ಲಿ FOF ಅಂದರೆ Fear Of Failure ಕೂಡ ಒಂದು. ಯಾವುದೇ ಕೆಲಸವನ್ನು ಕೈಗೆತ್ತಿಕೊಳ್ಳುವ ಮೊದಲು ಅದರಲ್ಲಿ ನಾನು ಸೋತುಬಿಟ್ಟರೆ ಎನ್ನುವ ಭಯವೇ ನಮ್ಮನ್ನು ಆ ಕೆಲಸ ಮಾಡುವುದನ್ನು ತಡೆ ಹಿಡಿದುಬಿಡುತ್ತದೆ. ಹೀಗಾಗಿ ಈ FEAR ಎನ್ನುವ ಪದವನ್ನು ಧನಾತ್ಮಕವಾಗಿ ಹಾಗೂ ಋಣಾತ್ಮಕವಾಗಿ ಎರಡು ರೀತಿಯಲ್ಲೂ ವಿಸ್ತರಿಸಬಹುದು. ನಕಾರಾತ್ಮಕವಾಗಿ ಯೋಚಿಸಿದಾಗ FEAR ಎನ್ನುವುದು Forget Everything And Run ಎಂಬುದಾಗಿ ಗೋಚರಿಸುತ್ತದೆ ಹಾಗೂ ಧನಾತ್ಮಕವಾಗಿ ಚಿಂತಿಸಿದಾಗ Face Everything And Rise ಎಂಬುದಾಗಿ ಹೊಳೆದು, ಯಾವುದೇ ಸನ್ನಿವೇಶ ಎದುರಾಗಲಿ ಅದನ್ನು ಧೈರ್ಯವಾಗಿ ಎದುರಿಸಿ ನೋಡೋಣ ಎನ್ನುವ ಮನಸ್ಥಿತಿಯನ್ನು ನಮ್ಮಲ್ಲಿ ರೂಪಿಸುತ್ತದೆ.

ಪದಬಂಧ 5686

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮುಗುಳುನಗೆ ಇಲ್ಲಿ ಕಾಣುತ್ತಿದೆ (4)
3.ಅವನ ಅಂತ್ಯ ಹೀಗೆ ಬಂದಿದೆಯಲ್ಲಾ! (4)
5.ಹದ್ದಿನ ಜಾತಿಗೆ ಸೇರಿದ ಪಕ್ಷಿ (3)
6.ದಾರದ ನೀಳ ಮತ್ತು ಸಡಿಲವಾದ ಸುರುಳಿ (2)
7.ಕೆಲಸಕ್ಕೆ ಬಾರದ ಮಾತಿದು (5)
10.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
12.ಒನಪು ತೋರುವಾಗಿನ ಸ್ಮರಣೆ (3)
14.ಈತ ಅದೃಷ್ಟವಿಲ್ಲದವನು (4)
15.ವನದಲ್ಲಿನ ಬೆಳವಣಿಗೆ (4)

ಮೇಲಿಂದ ಕೆಳಕ್ಕೆ

1.ಮೆಲ್ಲ ಮೆಲ್ಲನೆ ಬೀಸುವ ಗಾಳಿ (4)
2.ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು (5)
3.ಅತ್ಯಂತ ಸೂಕ್ಷ್ಮವಾದ ವಸ್ತು (2)
4.ಕಾಡಿನ ಮಧ್ಯಭಾಗ (4)
5.ಇಲ್ಲಿ ಗದ್ದಲ ಕಾಣುತ್ತಿದೆ (3)
7.ಪುನಃ ಪುನಃ ತೋರಿದ ಬಿನ್ನಾಣ (3)
8.ಬೆಳ್ಳಿ ಹಬ್ಬವಿದು (5)
9.ಮನದೊಳಗಿರುವ ಕುಲ (4)
11.ಸಂಪೂರ್ಣ ಅರಿವಿದು (4)
13.ಇಷ್ಟರಲ್ಲೇ ಕಾಣಿಸಿಕೊಂಡಿರುವ ಅಪೇಕ್ಷೆ! (2)



5685ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗೊರವಂಕ 3.ಬಾಲರವಿ
5.ವಿಫಲ 6.ಕೆಸರು
8.ಗೈರತ್ತು 9.ಅರ್ಚಕ
10.ರಿವಾಜು 12.ಕಲಹ
14.ಕಕ್ಕಾಬಿಕ್ಕಿ 15.ಸೆರೆಮನೆ

ಮೇಲಿಂದ ಕೆಳಕ್ಕೆ:
1.ಗೊರಕೆ 2.ಕವಿ
3.ಬಾಲ 4.ವಿಪತ್ತು
7.ರುದ್ರನಾಟಕ 8.ಗೈರುಹಾಜರಿ
9.ಅಷ್ಟಕ 11.ಜುಲ್ಮಾನೆ
12.ಕಕ್ಕಿ 13.ಹಸೆ

ಸುಡೊಕು 6071

2		6					5	
	4	7	5		6	3		2
3	8			2			6	
	2							4
			2	4	7			6
	7					5		
7		9			8		4	
4				3			8	1
	6		4		2	7		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6070 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಐದನೇ ಹಂತದ ಮತದಾನಕ್ಕೆ ಸಕಲ ಸಿದ್ಧತೆ • 695 ಅಭ್ಯರ್ಥಿಗಳ ಭವಿಷ್ಯ ಇಂದು ನಿರ್ಧಾರ

ಕಣದಲ್ಲಿ ರಾಹುಲ್, ಸ್ಮೃತಿ, ರಾಜನಾಥ್



ಲೋಕಸಭಾ ಚುನಾವಣೆಯ ಐದನೇ ಹಂತದ ಮತದಾನ ಸೋಮವಾರ ನಡೆಯಲಿದ್ದು, ಎಂಟು ಕೋಟಿಗೂ ಅಧಿಕ ಮತದಾರರು 695 ಅಭ್ಯರ್ಥಿಗಳ ಭವಿಷ್ಯ ನಿರ್ಧಾರ ನಿರ್ಧರಿಸಲಿದ್ದಾರೆ. ಕಣದಲ್ಲಿರುವ ಪ್ರಮುಖ ಅಭ್ಯರ್ಥಿಗಳ ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ರಾಹುಲ್ ಗಾಂಧಿ (ಕಾಂಗ್ರೆಸ್)

ಕ್ಷೇತ್ರ: ರಾಯ್‌ಬರೇಲಿ, ಉತ್ತರ ಪ್ರದೇಶ



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಸ್ಪರ್ಧೆಯಿಂದಾಗಿ ರಾಯ್‌ಬರೇಲಿ ಕ್ಷೇತ್ರವು ದೇಶದ ಗಮನ ಸೆಳೆದಿದೆ. ರಾಹುಲ್, ಕೇರಳದ ವಯನಾಡ್ ಕ್ಷೇತ್ರದಲ್ಲೂ ಸ್ಪರ್ಧಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ರಾಯ್‌ಬರೇಲಿಯಿಂದ ಗೆದ್ದಿದ್ದರು. ರಾಹುಲ್ ಈ ಬಾರಿ ಅಮೇಠಿ ಕ್ಷೇತ್ರದಿಂದ ಸ್ಪರ್ಧೆಗಿಳಿಯುತ್ತಾರೆಂದು ಹೇಳಲಾಗಿತ್ತು. ಆದರೆ ಅವರನ್ನು ಪಕ್ಷವು ರಾಯ್‌ಬರೇಲಿಯಿಂದ ಅಖಾಡಕ್ಕಿಳಿಸಿದೆ. ರಾಹುಲ್ ಅವರ ಪ್ರತಿಸ್ಪರ್ಧಿಯಾಗಿ ಬಿಜೆಪಿಯಿಂದ ದಿನೇಶ್ ಪ್ರತಾಪ್ ಸಿಂಗ್ ಸ್ಪರ್ಧಿಸುತ್ತಿದ್ದಾರೆ. 2019ರ ಚುನಾವಣೆಯಲ್ಲಿ ಸೋನಿಯಾ ಅವರು, 1,67,178 ಮತಗಳಿಂದ ದಿನೇಶ್ ಪ್ರತಾಪ್ ಅವರನ್ನು ಪರಾಭವಗೊಳಿಸಿದ್ದರು.

ಸ್ಮೃತಿ ಇರಾನಿ (ಬಿಜೆಪಿ)

ಕ್ಷೇತ್ರ: ಅಮೇಠಿ, ಉತ್ತರ ಪ್ರದೇಶ

ಉತ್ತರ ಪ್ರದೇಶದ ಪ್ರತಿಷ್ಠಿತ ಲೋಕಸಭಾ ಕ್ಷೇತ್ರಗಳಲ್ಲೊಂದಾದ ಅಮೇಠಿಯಿಂದ ಬಿಜೆಪಿ ಈ ಬಾರಿಯೂ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರನ್ನು ಕಣಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ಸ್ಮೃತಿ 55,120 ಮತಗಳಿಂದ ರಾಹುಲ್ ಗಾಂಧಿ ಅವರನ್ನು ಸೋಲಿಸಿದ್ದರು. ಕಿರುತೆರೆ ನಟಿಯಾಗಿದ್ದ ಸ್ಮೃತಿ ಅವರು 2003ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದರು. 2004ರಲ್ಲಿ ದೆಹಲಿಯ ಚಾಂದಿನಿ ಚೌಕ್ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್‌ನ ಕಪಿಲ್ ಸಿಬಲ್ ವಿರುದ್ಧ ಸ್ಪರ್ಧಿಸಿ ಸೋತಿದ್ದರು. 2014ರಲ್ಲಿ ಅಮೇಠಿಯಿಂದ ಕಣಕ್ಕಿಳಿದು ರಾಹುಲ್ ಎದುರು ಪರಾಭವಗೊಂಡಿದ್ದರು. ಸ್ಮೃತಿ ವಿರುದ್ಧ ಕಾಂಗ್ರೆಸ್ ಈ ಬಾರಿ, ಗಾಂಧಿ ಕುಟುಂಬಕ್ಕೆ ಆಪ್ತರಾಗಿರುವ ಕಿಶೋರಿ ಲಾಲ್ ಶರ್ಮಾ ಅವರನ್ನು ಅಖಾಡಕ್ಕಿಳಿಸಿದೆ.

ರೋಹಿಣಿ – ರೂಡಿ ಪೈಪೋಟಿ

ಕ್ಷೇತ್ರ: ಸಾರಣ್, ಬಿಹಾರ

ಬಿಹಾರದ ಸಾರಣ್ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಯ ರಾಜೀವ್ ಪ್ರತಾಪ್ ರೂಡಿ ಮತ್ತು ಆರ್‌ಜೆಡಿಯ ರೋಹಿಣಿ ಆಚಾರ್ಯ ನಡುವೆ ಪೈಪೋಟಿ ಏರ್ಪಟ್ಟಿದೆ. ಕೇಂದ್ರದ ಮಾಜಿ ಸಚಿವರೂ ಆಗಿರುವ ರೂಡಿ 2014 ಮತ್ತು 2019ರಲ್ಲಿ ಇಲ್ಲಿಂದ ಜಯಿಸಿದ್ದು, 'ಹ್ಯಾಟ್ರಿಕ್' ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಕಳೆದ ಚುನಾವಣೆಯಲ್ಲಿ ಅವರು ಆರ್‌ಜೆಡಿಯ ಚಂದ್ರಿಕಾ ರಾಯ್ ವಿರುದ್ಧ 1,38,429 ಮತಗಳ ಅಂತರದಿಂದ ಗೆದ್ದಿದ್ದರು. ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರ ಕಿರಿಯ ಪುತ್ರಿ ರೋಹಿಣಿ ಅವರು ಸಿಂಗಪುರದಲ್ಲಿ ನೆಲೆಸಿರುವವರಾದರೂ, ಚುನಾವಣೆಯಲ್ಲಿ ಸ್ಪರ್ಧಿಸಲು ತವರಿಗೆ ಬಂದಿದ್ದಾರೆ.

ರಾಜನಾಥ್ ಸಿಂಗ್ (ಬಿಜೆಪಿ)

ಕ್ಷೇತ್ರ: ಲಖನೌ, ಉತ್ತರ ಪ್ರದೇಶ



ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಲಖನೌ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಮತ್ತೆ ಕಣಕ್ಕಿಳಿದಿದ್ದಾರೆ. 2019ರ ಚುನಾವಣೆಯಲ್ಲಿ ಅವರು 3,47,302 ಮತಗಳ ಅಂತರದಿಂದ ಎಸ್‌ಪಿಯ ಪೂನಂ ಸಿನ್ಹಾ ಅವರನ್ನು ಪರಾಭವಗೊಳಿಸಿದ್ದರು. ರಾಜನಾಥ್ ಸಿಂಗ್ ಪ್ರತಿಸ್ಪರ್ಧಿಯಾಗಿ ಸಮಾಜವಾದಿ ಪಕ್ಷವು ಶಾಸಕ ರವಿದಾಸ್ ಮೆಹರೋತ್ರಾ ಅವರನ್ನು ಅಖಾಡಕ್ಕಿಳಿಸಿದೆ.

ಚಿರಾಗ್ ಪಾಸ್ವಾನ್ (ಎಲ್‌ಜೆಪಿ)

ಕ್ಷೇತ್ರ: ಹಾಜಿಪುರ, ಬಿಹಾರ

ಲೋಕ ಜನಶಕ್ತಿ ಪಕ್ಷದ (ಎಲ್‌ಜೆಪಿ– ರಾಮ್‌ವಿಲಾಸ್) ಅಧ್ಯಕ್ಷ ಚಿರಾಗ್ ಪಾಸ್ವಾನ್ ಅವರು ಐದನೇ ಹಂತದಲ್ಲಿ ಕಣದಲ್ಲಿರುವ ಮತ್ತೊಬ್ಬ ಪ್ರಮುಖ ಅಭ್ಯರ್ಥಿ. ಅವರು ಆರ್‌ಜೆಡಿಯ ಚಂದ್ರರಾಮ್ ವಿರುದ್ಧ ಪೈಪೋಟಿಗಿಳಿದಿದ್ದಾರೆ. 2019 ರಲ್ಲಿ ಈ ಕ್ಷೇತ್ರವನ್ನು ರಾಮವಿಲಾಸ್ ಪಾಸ್ವಾನ್ ಗೆದ್ದಿದ್ದರೆ, 2014 ರಲ್ಲಿ ಪಶುಪತಿ ಕುಮಾರ್ ಪಾರಸ್ ಅವರು ಐದು ಲಕ್ಷಕ್ಕೂ ಅಧಿಕ ಮತಗಳಿಂದ ಜಯಿಸಿದ್ದರು.

ಪೀಯೂಷ್ ಗೋಯಲ್ (ಬಿಜೆಪಿ)

ಕ್ಷೇತ್ರ: ಮುಂಬೈ ಉತ್ತರ, ಮಹಾರಾಷ್ಟ್ರ

ಬಿಜೆಪಿಯು ಮುಂಬೈ ಉತ್ತರ ಲೋಕಸಭಾ ಕ್ಷೇತ್ರದಿಂದ ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರನ್ನು ಕಣಕ್ಕಿಳಿಸಿದ್ದು, ಕಾಂಗ್ರೆಸ್‌ನಿಂದ ಭೂಷಣ್ ಪಾಟೀಲ್ ಸ್ಪರ್ಧಿಸುತ್ತಿದ್ದಾರೆ. ಈ ಕ್ಷೇತ್ರವನ್ನು ಬಿಜೆಪಿಯ ಗೋಪಾಲ್ ಶೆಟ್ಟಿ ಅವರು 2014 ರಿಂದಲೂ ಪ್ರತಿನಿಧಿಸುತ್ತಿದ್ದಾರೆ. ಕಳೆದ ಬಾರಿ ಅವರು ಕಾಂಗ್ರೆಸ್ ಅಭ್ಯರ್ಥಿ ಊರ್ಮಿಳಾ ಮಾತೊಂಡ್ಕರ್ ಅವರನ್ನು ಮಣಿಸಿದ್ದರು. ಇಲ್ಲಿ 'ಹ್ಯಾಟ್ರಿಕ್' ಗೆಲುವಿನ ನಿರೀಕ್ಷೆಯಲ್ಲಿ ಬಿಜೆಪಿ, ಪ್ರಬಲ ಅಭ್ಯರ್ಥಿಯನ್ನೇ ಕಣಕ್ಕಿಳಿಸಿದೆ. ಕಾಂಗ್ರೆಸ್‌ನ ಭೂಷಣ್ ಪಾಟೀಲ್ ಅವರು ಈ ಹಿಂದೆ ಪಕ್ಷದ ಮುಂಬೈ ಘಟಕದ ಖಜಾಂಚಿಯಾಗಿ ಕಾರ್ಯನಿರ್ವಹಿಸಿದ್ದರು.

ಒಮರ್ ಅಬ್ದುಲ್ಲಾ (ನ್ಯಾಷನಲ್ ಕಾನ್ಫರೆನ್ಸ್)

ಕ್ಷೇತ್ರ: ಬಾರಾಮುಲ್ಲಾ, ಜಮ್ಮು ಮತ್ತು ಕಾಶ್ಮೀರ

ನ್ಯಾಷನಲ್ ಕಾನ್ಫರೆನ್ಸ್ ಉಪಾಧ್ಯಕ್ಷ, ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಬಾರಾಮುಲ್ಲಾ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ. ಪಿಡಿಪಿಯಿಂದ ಮಾಜಿ ರಾಜ್ಯಸಭಾ ಸದಸ್ಯ ಮೊಹಮ್ಮದ್ ಫಯಾಜ್ ಮೀರ್ ಹಾಗೂ ಜಮ್ಮು ಮತ್ತು ಕಾಶ್ಮೀರ ಪೀಪಲ್ಸ್ ಕಾನ್ಫರೆನ್ಸ್‌ನಿಂದ ಸಜ್ಜಾದ್ ಗನಿ ಲೋನ್ ಅಖಾಡಕ್ಕಿಳಿದಿದ್ದು, ತ್ರಿಕೋನ ಹೋರಾಟ ನಿರೀಕ್ಷಿಸಲಾಗಿದೆ. 2019ರಲ್ಲಿ ಈ ಕ್ಷೇತ್ರದಿಂದ ನ್ಯಾಷನಲ್ ಕಾನ್ಫರೆನ್ಸ್‌ನ ಮೊಹಮ್ಮದ್ ಅಕ್ಬರ್ ಲೋನ್ ಆಯ್ಕೆಯಾಗಿದ್ದರು.

ನೂಕುನುಗ್ಗಲು: ಭಾಷಣ ಮಾಡದೆ ಮರಳಿದ ರಾಹುಲ್, ಅಖಿಲೇಶ್

ಪ್ರಚಾರ ಸಭೆಯಲ್ಲಿ ಭಾರಿ ಜನ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಫೂಲ್‌ಪುರದಲ್ಲಿ ನಡೆಸಿದ ಪ್ರಚಾರ ಸಭೆಯಲ್ಲಿ ಭಾರಿ ಸಂಖ್ಯೆಯ ಜನ ಪಾಲ್ಗೊಂಡಿದ್ದರು –ಪಿಟಿಐ

ಪ್ರಯಾಗ್‌ರಾಜ್ (ಪಿಟಿಐ): ಉತ್ತರ ಪ್ರದೇಶದ ಫೂಲ್‌ಪುರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರ‍್ಯಾಲಿಯ ವೇಳೆ ಕಾರ್ಯಕರ್ತರು ನೂಕು ನುಗ್ಗಲು ನಡೆಸಿ, ವೇದಿಕೆಗೆ ನುಗ್ಗಲು ಯತ್ನಿಸಿದ ಕಾರಣ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಭಾಷಣ ಮಾಡದೆ ಮರಳಿದರು.

ರ‍್ಯಾಲಿಯಲ್ಲಿ ಭಾರಿ ಸಂಖ್ಯೆಯಲ್ಲಿ ಕಾಂಗ್ರೆಸ್ ಮತ್ತು ಎಸ್‌ಪಿ ಕಾರ್ಯಕರ್ತರು ಪಾಲ್ಗೊಂಡಿದ್ದರು. ಅಖಿಲೇಶ್ ಯಾದವ್ ಅವರು ಸ್ಥಳಕ್ಕೆ ಬಂದಾಗ ಕಾರ್ಯಕರ್ತರು ಎದ್ದು ನಿಂತು, ವೇದಿಕೆಯತ್ತ ನುಗ್ಗಲು ಯತ್ನಿಸಿದರು. ಈ ವೇಳೆ ಕಾಲ್ತುಳಿತ ಉಂಟಾಗುವ ಅಪಾಯ ಇತ್ತು ಎಂದು ಪೊಲೀಸರು ತಿಳಿಸಿದರು.

ಕಾರ್ಯಕರ್ತರನ್ನು ವೇದಿಕೆಯಿಂದ ಹಿಂದೆ ಸರಿಯುವಂತೆ ಮುಖಂಡರು ಮನವಿ ಮಾಡುತ್ತಿರುವ ದೃಶ್ಯವಿರುವ ವಿಡಿಯೊವನ್ನು ಎಸ್‌ಪಿ ಮತ್ತು ಕಾಂಗ್ರೆಸ್‌ನ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಹಂಚಿಕೊಳ್ಳಲಾಗಿದೆ.

ಫೂಲ್‌ಪುರ ಲೋಕಸಭಾ ಕ್ಷೇತ್ರದ ಎಸ್‌ಪಿ ಅಭ್ಯರ್ಥಿ ಅಮರನಾಥ ಮೌರ್ಯ ಅವರ ಪರವಾಗಿ ಜಂಟಿ ರ‍್ಯಾಲಿ ಹಮ್ಮಿಕೊಳ್ಳಲಾಗಿತ್ತು. ರಾಹುಲ್ ಮತ್ತು ಅಖಿಲೇಶ್ ಅವರು ಬಳಿಕ ಪ್ರಯಾಗ್‌ರಾಜ್‌ನಲ್ಲಿ ಹಮ್ಮಿಕೊಂಡಿದ್ದ ರ‍್ಯಾಲಿಯಲ್ಲಿ ಪಾಲ್ಗೊಂಡರು.

ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ಒಂದು ಸ್ಥಾನ: ರಾಹುಲ್

ಪ್ರಯಾಗ್‌ರಾಜ್ (ಪಿಟಿಐ): ಉತ್ತರ ಪ್ರದೇಶದಲ್ಲಿ ಬಿಜೆಪಿ ಕೇವಲ ಒಂದು ಸ್ಥಾನ ಗೆಲ್ಲಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಹೇಳಿದರು.

ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಜತೆ ಪ್ರಯಾಗ್‌ರಾಜ್‌ನಲ್ಲಿ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶದಲ್ಲಿ ಕೇವಲ ಒಂದು ಸ್ಥಾನವನ್ನು– ಕ್ಯೋಟೊ (ವಾರಾಣಸಿ)– ಗೆಲ್ಲಲಿದ್ದಾರೆ' ಎಂದು ತಿಳಿಸಿದರು.

ವಾರಾಣಸಿಯನ್ನು ಜಪಾನ್‌ನ ಕ್ಯೋಟೊ ನಗರದಂತೆ ಸುಂದರವಾಗಿ ರೂಪಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದರು. ಅದನ್ನು ರಾಹುಲ್ ಲೇವಡಿ ಮಾಡಿದರು.

ರಾಹುಲ್ ಅವರಿಗೂ ಮುಂಚೆ ಮಾತನಾಡಿದ ಅಖಿಲೇಶ್, 'ಕೋವಿಡ್ ಲಸಿಕೆಯೊಂದಿಗೆ ಬಿಜೆಪಿ ನಮ್ಮನ್ನು ಅಪಾಯಕ್ಕೆ ನೂಕಿತು. ಈಗ ಅದು ಸಂವಿಧಾನವನ್ನು ನಾಶಪಡಿಸಲು ಹೊರಟಿದೆ' ಎಂದು ಆರೋಪಿಸಿದರು.

'ಧರ್ಮದ ಆಧಾರದಲ್ಲಿ ಕಾಂಗ್ರೆಸ್ ಮೀಸಲಾತಿ ನೀಡಿಲ್ಲ'

ಪಟ್ನಾ (ಪಿಟಿಐ): ಅಲ್ಪಸಂಖ್ಯಾತ ಸಮುದಾಯಗಳ ಕೆಲವು ವರ್ಗಗಳಿಗೆ ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಮೀಸಲಾತಿ ಕಲ್ಪಿಸಲಾಗಿದೆ. ಆದರೆ, ಅದು ಧರ್ಮದ ಆಧಾರದಲ್ಲಿ ಅಲ್ಲ, ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಯ ಆಧಾರದಲ್ಲಿ ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಭಾನುವಾರ ಪ್ರತಿಪಾದಿಸಿದರು.

ಸದಾಕತ್ ಆಶ್ರಮದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಅವರು, 'ಕರ್ನಾಟಕದಂಥ ರಾಜ್ಯಗಳಲ್ಲಿ ಧರ್ಮದ ಆಧಾರದಲ್ಲಿ ಮೀಸಲಾತಿ ಕಲ್ಪಿಸಿಲ್ಲ' ಎಂದು ಸ್ಪಷ್ಟಪಡಿಸಿದರು. ಆದರೆ, 'ಬಿಜೆಪಿಯು ಧರ್ಮದ ಆಧಾರದಲ್ಲಿ ಪೌರತ್ವ ಕಲ್ಪಿಸುವ ಸಿಎಎ ಜಾರಿ ಮಾಡುವ ಮೂಲಕ ಸಂವಿಧಾನವನ್ನು ಉಲ್ಲಂಘಿಸಿದೆ. ಹಾಗಾಗಿ ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ' ಎಂದು ತಿಳಿಸಿದರು.

'ಬಾಬಾ ಸಾಹೇಬರು ಬರೆದ ಸಂವಿಧಾನವನ್ನು ವಿರೋಧಿಸಿ ಆರ್‌ಎಸ್‌ಎಸ್ ಮುಖವಾಣಿಯಲ್ಲಿ ಲೇಖನವೊಂದನ್ನು ಪ್ರಕಟಿಸಲಾಗಿತ್ತು. ಅದರಲ್ಲಿ 'ಮನುವಾದಿ ಸಂವಿಧಾನ'ದ ಪರವಾಗಿ ವಕಾಲತ್ತು ವಹಿಸಲಾಗಿತ್ತು' ಎಂದು ಹೇಳಿದರು.

'ಮೋದಿ ಅವರು ನಿಂತ ನೆಲವು ಕುಸಿಯುತ್ತಿದ್ದು, ತಾವು ನಿರ್ಗಮಿಸಲಿರುವ ಪ್ರಧಾನಿ ಎನ್ನುವುದು ಖಚಿತವಾಗಿ ಅವರು ಹತಾಶೆಗೊಳಗಾಗಿದ್ದಾರೆ. ನಿಜವಾದ ಸಮಸ್ಯೆಗಳಿಂದ ಜನರ ಗಮನ ಬೇರೆಡೆ ಸೆಳೆಯಲು ಸುಳ್ಳು ಆರೋಪ ಮಾಡುತ್ತಿದ್ದಾರೆ' ಎಂದರು.

'ಮಹಾಲಕ್ಷ್ಮಿ': 40 ಲಕ್ಷ ಕರಪತ್ರ ಹಂಚಲು ಸಿದ್ಧತೆ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ಆರು ಮತ್ತು ಏಳನೇ ಹಂತಗಳಲ್ಲಿ ಹೆಚ್ಚು ಮಹಿಳೆಯರನ್ನು ತಲುಪುವ ಉದ್ದೇಶದಿಂದ ಕಾಂಗ್ರೆಸ್ ಪಕ್ಷವು 'ಮಹಾಲಕ್ಷ್ಮಿ' ಯೋಜನೆಯ 40 ಲಕ್ಷ ಕರಪತ್ರಗಳನ್ನು ಹಂಚಲು ಸಿದ್ಧತೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ. 'ಮಹಾಲಕ್ಷ್ಮಿ' ಯೋಜನೆಯಡಿ ಬಡ ಕುಟುಂಬದ ಮಹಿಳೆಯರಿಗೆ ವಾರ್ಷಿಕವಾಗಿ ₹1 ಲಕ್ಷ ನೀಡಲಾಗುವುದು ಎಂದು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಘೋಷಿಸಿದೆ.

ದೇಶದ ಮಹಿಳೆಯರು ಸಂಕಷ್ಟ ಎದುರಿಸುತ್ತಿದ್ದು, ಪಕ್ಷದ 'ಮಹಾಲಕ್ಷ್ಮಿ' ಯೋಜನೆಯು ಅವರಿಗೆ ಕಷ್ಟದ ಕಾಲದಲ್ಲಿ ನೆರವಿಗೆ ಬರಲಿದೆ ಎಂದು ಇತ್ತೀಚೆಗೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ವಿಡಿಯೊ ಸಂದೇಶದಲ್ಲಿ ತಿಳಿಸಿದ್ದರು.

'ನಾವು ಕೋಟಿಗಟ್ಟಲೆ ಲಕ್ಷಾಧಿಪತಿಗಳನ್ನು ಸೃಷ್ಟಿಸಲಿದ್ದೇವೆ. ಪ್ರತಿ ಬಡಕುಟುಂಬದ ಒಬ್ಬ ಮಹಿಳೆಯ ಖಾತೆಗೆ ತಿಂಗಳಿಗೆ ₹8,500 ಜಮೆ ಮಾಡುವ ಮೂಲಕ ವಾರ್ಷಿಕವಾಗಿ ₹1 ಲಕ್ಷ ನೀಡಲಾಗುವುದು' ಎಂದು ರಾಹುಲ್ ಗಾಂಧಿ ಅವರು ಶನಿವಾರ ಚುನಾವಣಾ ರ‍್ಯಾಲಿಯೊಂದರಲ್ಲಿ ತಿಳಿಸಿದ್ದರು.

ಗೆಲುವಿನ ನಿರೀಕ್ಷೆಯಲ್ಲಿ ಮೇನಕಾ ಗಾಂಧಿ

ಸುಲ್ತಾನ್‌ಪುರ (ಪಿಟಿಐ): ಈ ಬಾರಿಯ ಚುನಾವಣೆಯಲ್ಲಿ ಭಾರಿ ಮತಗಳ ಅಂತರದಲ್ಲಿ ಗೆಲ್ಲುವುದಾಗಿ ಉತ್ತರ ಪ್ರದೇಶದ ಸುಲ್ತಾನ್‌ಪುರ ಲೋಕಸಭಾ ಕ್ಷೇತ್ರದಿಂದ ಎರಡನೇ ಬಾರಿ ಕಣಕ್ಕಿಳಿದಿರುವ ಬಿಜೆಪಿ ನಾಯಕಿ ಮೇನಕಾ ಗಾಂಧಿ ಭಾನುವಾರ ವಿಶ್ವಾಸ ವ್ಯಕ್ತಪಡಿಸಿದರು.

ಪಿಲಿಭಿತ್ ಕ್ಷೇತ್ರದಿಂದ ಸ್ಪರ್ಧಿಸಲು ಪುತ್ರ ವರುಣ್ ಗಾಂಧಿ ಅವರಿಗೆ ಬಿಜೆಪಿ ಟಿಕೆಟ್ ನಿರಾಕರಿಸಿರುವ ವಿಚಾರಕ್ಕೆ ಸಂಬಂಧಿಸಿ ಪ್ರತಿಕ್ರಿಯೆ ನೀಡಲು ಅವರು ನಿರಾಕರಿಸಿದರು.

ತಮ್ಮ ಪರವಾಗಿ ವರುಣ್, ಶೀಘ್ರ ಪ್ರಚಾರ ಕಾರ್ಯದಲ್ಲಿ ಭಾಗಿಯಾಗುವುದಾಗಿ ಅವರು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದರು.

ಕ್ಷೇತ್ರದ ಸಮಸ್ಯೆಗಳ ಬಗ್ಗೆ ಮಾತ್ರ ಕಾಳಜಿ ವಹಿಸುವುದಾಗಿ ಹೇಳಿದ ಅವರು, ರಾಯ್‌ಬರೇಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸುವಂತೆ ಬಿಜೆಪಿ ಕರೆ ನೀಡಿರುವ ವಿಚಾರಕ್ಕೆ ಸಂಬಂಧಿಸಿ ಯಾವುದೇ ಹೇಳಿಕೆ ನೀಡುವುದಿಲ್ಲ ಎಂದರು.

2019ರ ಚುನಾವಣೆಯಲ್ಲಿ ಮೇನಕಾ ಅವರು ಈ ಕ್ಷೇತ್ರದಲ್ಲಿ 14,000 ಮತಗಳ ಅಂತರದಿಂದ ಗೆದ್ದಿದ್ದರು.

ಜಾರ್ಖಂಡ್: 'ಇಂಡಿಯಾ' ಕೂಟವನ್ನು ಟೀಕಿಸಿದ ಪ್ರಧಾನಿ ನರೇಂದ್ರ ಮೋದಿ

'ಹೊಸ ರೀತಿಯಲ್ಲಿ ರಾಹುಲ್ ಹಣ ಸುಲಿಗೆ'

ಜಮ್‌ಶೆಡ್‌ಪುರ/ಪುರುಲಿಯಾ/ವಿಷ್ಣುಪುರ (ಜಾರ್ಖಂಡ್) (ಪಿಟಿಐ): ಕಾಂಗ್ರೆಸ್ 'ಶಹಜಾದ' (ರಾಹುಲ್ ಗಾಂಧಿ) ಮಾವೋವಾದಿ ಭಾಷೆ ಬಳಸುತ್ತಿದ್ದು, ಅದರಿಂದಾಗಿ ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಹೂಡಿಕೆ ಮಾಡಬೇಕು ಎಂದರೆ ಉದ್ಯಮಿಗಳು 50 ಬಾರಿ ಯೋಚಿಸುತ್ತಿದ್ದಾರೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಅಭಿಪ್ರಾಯಪಟ್ಟರು.

ಇಲ್ಲಿ ನಡೆದ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಅತ್ಯಂತ ಹಳೆಯ ಪಕ್ಷವು ಕುಟುಂಬ ರಾಜಕಾರಣವನ್ನು ಪೋಷಿಸುತ್ತಿದ್ದು, ಲೋಕಸಭಾ ಸ್ಥಾನಗಳನ್ನು ತಮ್ಮ 'ಪೂರ್ವಜರ ಸ್ವತ್ತು' ಎಂಬುದಾಗಿ ಭಾವಿಸುತ್ತಿದೆ' ಎಂದು ಟೀಕಿಸಿದರು.

'ಶಹಜಾದ' ಮಾವೋವಾದಿಗಳು ಬಳಸುವ ಭಾಷೆ ಮಾತನಾಡುತ್ತಿದ್ದು, ನವೀನ ಮಾರ್ಗಗಳ ಮೂಲಕ ಹಣ ಸುಲಿಗೆ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

'ತಮ್ಮ 'ಶಹಜಾದ'ನ ಉದ್ಯಮ ವಿರೋಧಿ, ಉದ್ದಿಮೆದಾರ ವಿರೋಧಿ ಭಾಷೆಯನ್ನು ಕಾಂಗ್ರೆಸ್ ಮತ್ತು 'ಇಂಡಿಯಾ' ಕೂಟದ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಒಪ್ಪುವರೇ' ಎಂದು ಪ್ರಶ್ನಿಸಿದರು.

ಪಶ್ಚಿಮ ಬಂಗಾಳದ ಪುರುಲಿಯಾದಲ್ಲಿ ಪ್ರಧಾನಿ ಮೋದಿ ಪ್ರಚಾರ ನಡೆಸಿದರು–ಪಿಟಿಐ ಚಿತ್ರ

ರಾಹುಲ್ ಅವರು ರಾಯ್‌ಬರೇಲಿ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವುದನ್ನು ಲೇವಡಿ ಮಾಡಿದ ಪ್ರಧಾನಿ, 'ಶಹಜಾದ' ಕ್ಷೇತ್ರಕ್ಕೆ ಧಾವಿಸಿ, ಇದು ನಮ್ಮ ಅಮ್ಮನ ಕ್ಷೇತ್ರ ಎಂದಿದ್ದಾರೆ. ಎಂಟು ವರ್ಷದ ಶಾಲಾ ಬಾಲಕ ಕೂಡ ಹಾಗೆ ಹೇಳುವುದಿಲ್ಲ' ಎಂದರು.

'ತನ್ನ ಮಗನನ್ನು ರಾಯ್‌ಬರೇಲಿಗೆ ಬಿಟ್ಟುಕೊಟ್ಟಿದ್ದೇನೆ ಎಂದು ಅವರ ತಾಯಿ (ಸೋನಿಯಾ) ಹೇಳಿದ್ದಾರೆ. ತಮ್ಮ ಬಗ್ಗೆ ನಿಷ್ಠೆಯುಳ್ಳ ಒಬ್ಬನೇ ಒಬ್ಬ ಕಾರ್ಯಕರ್ತನೂ ಅವರಿಗೆ ಸಿಕ್ಕಿಲ್ಲ. ಕೋವಿಡ್ ಸಂಕಷ್ಟದ ಸಮಯದಲ್ಲಿ ನೀವು ಎಲ್ಲಿದ್ದೀರಿ ಎಂದು ರಾಯ್‌ಬರೇಲಿಯ ಜನ ಅವರನ್ನು ಕೇಳಬೇಕಾಗಿದೆ' ಎಂದು ಹೇಳಿದರು.

ಪ್ರಧಾನಿ ಹೇಳಿದ್ದು

- ಇಸ್ಕಾನ್, ರಾಮಕೃಷ್ಣ ಮಿಷನ್, ಭಾರತ ಸೇವಾಶ್ರಮ ಸಂಸ್ಥೆಗಳು ತಮ್ಮ ಸೇವೆ ಮತ್ತು ನೈತಿಕತೆಗೆ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿವೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಅವರು ತಮ್ಮ ಮತ ಬ್ಯಾಂಕ್ ಅನ್ನು ಓಲೈಕೆ ಮಾಡಲು ಈ ಸಂಸ್ಥೆಗಳಿಗೆ ಬಹಿರಂಗವಾಗಿ ಬೆದರಿಕೆ ಒಡ್ಡಿದ್ದಾರೆ.
- ಮಮತಾ ಬ್ಯಾನರ್ಜಿ ಮುಸ್ಲಿಂ ಮೂಲಭೂತವಾದಿಗಳಿಂದ ಒತ್ತಡಕ್ಕೊಳಗಾಗಿ ದೇಶದ ಸಂತರು, ಸನ್ಯಾಸಿಗಳ ಮೇಲೆ ದಾಳಿ ಮಾಡುತ್ತಿದ್ದಾರೆ.
- ಮೋದಿ 52 ಕೋಟಿ ಜನರಿಗೆ ಜನ್‌ಧನ್ ಖಾತೆ ಮಾಡಿಸಿದರು, 4 ಕೋಟಿ ಜನರಿಗೆ ಪಕ್ಕಾ ಮನೆಗಳನ್ನು ನೀಡಿದರು, 18 ಸಾವಿರ ಹಳ್ಳಿಗಳಿಗೆ ವಿದ್ಯುತ್, ನಲ್ಲಿ ನೀರು, ಮೂಲಸೌಕರ್ಯ ಒದಗಿಸಿದರು.

ಚುಟುಕು

ಬಂಗಾಳ: ಖರ್ಗೆ ಫೋಟೊ ವಿರೂಪ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ರಾಜ್ಯ ಕಾಂಗ್ರೆಸ್ ಘಟಕದ ಕಚೇರಿ ಮುಂಭಾಗದಲ್ಲಿರುವ ಖರ್ಗೆ ಅವರ ಪೋಸ್ಟರ್ ಮತ್ತು ಜಾಹೀರಾತು ಫಲಕಗಳನ್ನು ಭಾನುವಾರ ವಿರೂಪಗೊಳಿಸಲಾಗಿದೆ.

ಅವರ ಪೋಸ್ಟರ್, ಜಾಹೀರಾತು ಫಲಕಗಳ ಕೆಳಗೆ 'ತೃಣಮೂಲ ಕಾಂಗ್ರೆಸ್ ಏಜೆಂಟ್' ಎಂದು ಬರೆಯಲಾಗಿದೆ.

'ಇಂಡಿಯಾ' ಕೂಟಕ್ಕೆ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರ ನಿಷ್ಠೆಯನ್ನು ಪಶ್ಚಿಮ ಬಂಗಾಳ ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಧೀರ್ ರಂಜನ್ ಚೌಧರಿ ಪ್ರಶ್ನಿಸಿದ್ದರು. ಅದರ ಬಗ್ಗೆ ಖರ್ಗೆ ಖಾರವಾಗಿ ಪ್ರತಿಕ್ರಿಯಿಸಿದ್ದರು. ಅದರ ಮಾರನೆಯ ದಿನವೇ ಖರ್ಗೆ ಅವರ ಫೋಟೊ ವಿರೂಪಗೊಳಿಸಲಾಗಿದೆ.

ತಮ್ಮ ತವರು ಬಹ್ರಾಂಪುರದಲ್ಲಿರುವ ಅಧೀರ್, ಘಟನೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದು, ಪೊಲೀಸ್ ಠಾಣೆಗೆ ದೂರು ನೀಡುವಂತೆ ಮತ್ತು ವಿರೂಪಗೊಂಡ ಫೋಟೊಗಳನ್ನು ಅಲ್ಲಿಂದ ತೆಗೆಯುವಂತೆ ಪಕ್ಷದ ಕಾರ್ಯಕರ್ತರಿಗೆ ಸೂಚಿಸಿದ್ದಾರೆ. ಅದರಂತೆ ದೂರು ದಾಖಲಿಸಲಾಗಿದೆ ಮತ್ತು ಫೋಟೊಗಳನ್ನು ತೆಗೆಯಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

'ಘಟನೆಯು ಶನಿವಾರ ರಾತ್ರಿ ನಡೆದಿರಬಹುದು. ಇದರ ಹಿಂದೆ, ಪಕ್ಷದ ಹಿರಿಯ ನಾಯಕರು ಮತ್ತು ಅಧೀರ್ ನಡುವೆ ಭಿನ್ನಾಭಿಪ್ರಾಯ ಮೂಡಿಸಲು ಟಿಎಂಸಿಯ ಕೈಚಳಕ ಇರಬಹುದು' ಎಂದು ಪಕ್ಷದ ಮುಖಂಡರೊಬ್ಬರು ಆರೋಪಿಸಿದ್ದಾರೆ.

ಬಿಜೆಪಿ ಸೇರಿದ ಬಿಜೆಡಿ ಶಾಸಕ

ಭುವನೇಶ್ವರ (ಪಿಟಿಐ): ಒಡಿಶಾದ ನೀಮಪಾರಾ ಕ್ಷೇತ್ರದ ಬಿಜೆಡಿ ಶಾಸಕ ಸಮೀರ್ ರಂಜನ್ ದಾಸ್ ಅವರು ಭಾನುವಾರ ಬಿಜೆಪಿಗೆ ಸೇರ್ಪಡೆಗೊಂಡರು.

ಬಿಜೆಪಿ ಒಡಿಶಾ ರಾಜ್ಯ ಘಟಕದ ಅಧ್ಯಕ್ಷ ಮನಮೋಹನ್ ಸಮಲ್, ಪಕ್ಷದ ರಾಜ್ಯ ಉಸ್ತುವಾರಿ ವಿಜಯ್ ಪಾಲ್ ಸಿಂಗ್ ತೋಮರ್ ಅವರು ಸಮೀರ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಸಮೀರ್ ಅವರಿಗೆ ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಡಿ ಟಿಕೆಟ್ ನಿರಾಕರಿಸಿತ್ತು. ಇದರಿಂದ ಅಸಮಾಧಾನಗೊಂಡಿದ್ದ ಅವರು ಪಕ್ಷಕ್ಕೆ ರಾಜೀನಾಮೆ ನೀಡಿದ್ದರು.

ಬಿಜೆಡಿ ನಾಯಕತ್ವದಲ್ಲಿ ವಿಶ್ವಾಸವಿಲ್ಲದ ಕಾರಣ ಬಿಜೆಪಿಗೆ ಸೇರಿದ್ದೇನೆ ಎಂದು ಸಮೀರ್ ಅವರು ತಿಳಿಸಿದರು.

'ಬಿಜೆಪಿ ಅವಧಿ: ಶೇ 40 ಕಮಿಷನ್'

ಮಹಾರಾಜ್‌ಗಂಜ್ (ಪಿಟಿಐ): ಬಿಜೆಪಿ ಅವಧಿಯಲ್ಲಿ ಭ್ರಷ್ಟಾಚಾರವು ಗರಿಷ್ಠ ಮಟ್ಟದಲ್ಲಿದ್ದು, ಸರ್ಕಾರಿ ಕೆಲಸಗಳಿಗೆ ಶೇ 28ರಿಂದ ಶೇ 40ರವರೆಗೆ ಕಮಿಷನ್ ಪಡೆಯಲಾಗುತ್ತಿದೆ ಎಂದು ಕಾಂಗ್ರೆಸ್ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಭಾನುವಾರ ಆರೋಪಿಸಿದ್ದಾರೆ.

ನೌತಾನ್ವದಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, 'ಮೋದಿ ಸರ್ಕಾರವು 9 ವರ್ಷಗಳಲ್ಲಿ ₹150 ಲಕ್ಷ ಕೋಟಿ ಸಾಲ ಪಡೆದಿದೆ. ಅದು 1947–2014ರ ನಡುವೆ ಮಾಡಿದ ಸಾಲಕ್ಕಿಂತ ಮೂರು ಪಟ್ಟು ಹೆಚ್ಚು' ಎಂದು ತಿಳಿಸಿದರು.

'ಬಿಜೆಪಿಯು ಮತ್ತೆ ಅಧಿಕಾರಕ್ಕೆ ಬಂದರೆ ಸಂವಿಧಾನವನ್ನು ಬದಲಿಸಲಿದ್ದು, ಅದಕ್ಕಾಗಿಯೇ ಅವರು 400 ಸ್ಥಾನ ಬಯಸುತ್ತಿದ್ದಾರೆ' ಎಂದು ಅಭಿಪ್ರಾಯಪಟ್ಟರು.

'ನಾವು ಯಾವ ಪಕ್ಷದ ಪರವೂ ಅಲ್ಲ'

ಕೋಲ್ಕತ್ತ (ಪಿಟಿಐ): ತಾವು ರಾಜಕಾರಣದಿಂದ ದೂರ ಉಳಿದಿದ್ದು, ಯಾವ ಪಕ್ಷದ ಅಭ್ಯರ್ಥಿಯ ಪರವಾಗಿಯೂ ಪ್ರಚಾರ ಮಾಡಿಲ್ಲ ಎಂದು ಪಶ್ಚಿಮ ಬಂಗಾಳದ ಎರಡು ಧಾರ್ಮಿಕ ಸಂಸ್ಥೆಗಳು ಭಾನುವಾರ ಸ್ಪಷ್ಟಪಡಿಸಿವೆ.

'ಪಶ್ಚಿಮ ಬಂಗಾಳದ ಎರಡು ಪ್ರಮುಖ ಧಾರ್ಮಿಕ ಸಂಸ್ಥೆಗಳು ಬಿಜೆಪಿಯ ಸೂಚನೆಯಂತೆ ಕೆಲಸ ಮಾಡುತ್ತಿವೆ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶನಿವಾರ ಆರೋಪಿಸಿದ್ದರು. ಅವರ ಆರೋಪವನ್ನು ರಾಮಕೃಷ್ಣ ಮಿಷನ್ ಮತ್ತು ಭಾರತ ಸೇವಾಶ್ರಮ ಸಂಘ ನಿರಾಕರಿಸಿದ್ದು, ತಾವು ಸಮಾಜಕ್ಕೆ ಸೇವೆ ಸಲ್ಲಿಸುವುದರತ್ತ ಮಾತ್ರ ಗಮನ ಕೊಡುತ್ತಿರುವುದಾಗಿ ಹೇಳಿವೆ.

'ಆರೋಪಗಳಿಂದ ನಮಗೆ ನೋವಾಗಿದೆ. ಯಾವುದೇ ವಿವಾದದಲ್ಲಿ ಸಿಲುಕಲು ನಾವು ಇಚ್ಛಿಸುವುದಿಲ್ಲ. ಪ್ರಧಾನಿ, ಮುಖ್ಯಮಂತ್ರಿ ಸೇರಿದಂತೆ ಎಲ್ಲ ವಲಯಗಳ ಸಾವಿರಾರು ಮಂದಿ ನಮ್ಮ ಆವರಣಕ್ಕೆ ಬಂದು ಧ್ಯಾನ ಮಾಡುತ್ತಾರೆ. ನಮಗೆ ಎಲ್ಲರೂ ಸಮಾನರು' ಎಂದು ಬೇಲೂರಿನ ರಾಮಕೃಷ್ಣ ಮಿಷನ್ ಕೇಂದ್ರ ಕಚೇರಿಯಲ್ಲಿ ಹಿರಿಯ ಸನ್ಯಾಸಿಯೊಬ್ಬರು ಹೇಳಿದರು.

'ಚಂಡಮಾರುತಗಳಿಂದ ಕೋವಿಡ್‌ವರೆಗೆ, ದೂರದ ಪ್ರದೇಶಗಳ ನೊಂದವರಿಗೆ ನಾವು ನೆರವು ನೀಡಿದ್ದೇವೆ. ನಮ್ಮದು 107 ವರ್ಷಗಳ ಇತಿಹಾಸ ಹೊಂದಿರುವ ಸಂಸ್ಥೆಯಾಗಿದ್ದು, ದೇಶದಾದ್ಯಂತ ನಮ್ಮ ಸನ್ಯಾಸಿಗಳು ಉಚಿತ ಆರೋಗ್ಯ ಶಿಬಿರಗಳು, ಆಸ್ಪತ್ರೆಗಳು ಮತ್ತು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಾರೆ. ನಾವು ಈ ಹಿಂದೆಯೂ ರಾಜಕಾರಣದಲ್ಲಿ ಭಾಗಿಯಾಗಿಲ್ಲ, ಮುಂದೆಯೂ ಭಾಗಿಯಾಗುವುದಿಲ್ಲ' ಎಂದು ಭಾರತ ಸೇವಾಶ್ರಮ ಸಂಘದ ವಕ್ತಾರರೊಬ್ಬರು ತಿಳಿಸಿದರು.

ಎಂಥಾ ಮಾತು!

ನಾಲ್ಕು ಹಂತಗಳ ಮತದಾನ ಪೂರ್ಣಗೊಂಡಿದ್ದು, ನಾಲ್ಕೂ ಹಂತಗಳಲ್ಲೂ 'ಇಂಡಿ' ಒಕ್ಕೂಟವು ಕೊಚ್ಚಿ ಹೋಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು 400 ಕ್ಷೇತ್ರಗಳತ್ತ ಮುನ್ನುಗ್ಗುತ್ತಿದ್ದಾರೆ. ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷಗಳು 70 ವರ್ಷಗಳಿಂದಲೂ 370ನೇ ವಿಧಿಯನ್ನು ಸಂರಕ್ಷಿಸಿತ್ತು. ಈ ಕಾರಣಕ್ಕೆ ದೇಶದಾದ್ಯಂತ ಭಯೋತ್ಪಾದನೆ ಹೆಚ್ಚಳವಾಗಿತ್ತು. ಮತ್ತೊಮ್ಮೆ ದೇಶ ವಿಭಜನೆಯಾಗಲು ಬಿಜೆಪಿ ಬಿಡದು. ನರೇಂದ್ರ ಮೋದಿ ಅವರು ಮತ್ತೆ ಪ್ರಧಾನಿಯಾದರೆ ಮೀಸಲಾತಿಯನ್ನು ರದ್ದುಗೊಳಿಸುತ್ತಾರೆ ಎಂದು ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ

ಅಮಿತ್ ಶಾ, ಕೇಂದ್ರ ಗೃಹಸಚಿವ

ಸಂವಿಧಾನದ 370ನೇ ವಿಧಿಯ ಅಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು 2019ರ ಆಗಸ್ಟ್ 5ರಂದು ರದ್ದುಪಡಿಸಿ, ದ್ರೋಹ ಎಸಗಿರುವುದಕ್ಕೆ ಜನರು ತಕ್ಕ ಉತ್ತರ ನೀಡಲಿದ್ದಾರೆ. ಚುನಾವಣಾ ರ‍್ಯಾಲಿಗಳಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುತ್ತಿರುವುದೇ ಇದಕ್ಕೆ ಸಾಕ್ಷಿ

ಒಮರ್ ಅಬ್ದುಲ್ಲಾ, ನ್ಯಾಷನಲ್ ಕಾನ್ಫರೆನ್ಸ್ ಮುಖಂಡ

ಕ್ಷೇತ್ರ ಮಹಾತ್ಮೆ

ಜಲೌನ್ (ಉತ್ತರ ಪ್ರದೇಶ)

ಉತ್ತರ ಪ್ರದೇಶದ ಜಲೌನ್ ಲೋಕಸಭಾ ಕ್ಷೇತ್ರದಲ್ಲಿ ಸಮಾಜವಾದಿ ಪಕ್ಷ ಮತ್ತು ಬಿಜೆಪಿ ಅಭ್ಯರ್ಥಿಗಳ ನಡುವಿನ ನೇರ ಹಣಾಹಣಿಗೆ ಅಖಾಡ ಸಿದ್ಧವಾಗಿದೆ. ಈ ಕ್ಷೇತ್ರದಲ್ಲಿ ಎರಡು ಬಾರಿ ಗೆದ್ದಿದ್ದ ಭಾನು ಪ್ರತಾಪ್ ಸಿಂಗ್ ವರ್ಮಾ ಅವರನ್ನೇ ಬಿಜೆಪಿಯು ಮೂರನೇ ಬಾರಿಯೂ ಕಣಕ್ಕಿಳಿಸಿದೆ. ಇವರಿಗೆ ಪ್ರತಿಸ್ಪರ್ಧಿಯಾಗಿ ಸಮಾಜವಾದಿ ಪಕ್ಷವು ನಾರಾಯಣ ದಾಸ್ ಅಹಿರ್ವಾರ್ ಅವರನ್ನು ಅಖಾಡಕ್ಕಿಳಿಸಿದೆ. ಭಾನು ಪ್ರತಾಪ್ ಅವರು ಕೇಂದ್ರದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ರಾಜ್ಯ ಸಚಿವರಾಗಿದ್ದಾರೆ. 2019ರ ಚುನಾವಣೆಯಲ್ಲಿ ಅವರು, 1,61,377 ಮತಗಳ ಅಂತರದಿಂದ ಬಿಎಸ್‌ಪಿಯ ಅಜಯ್ ಸಿಂಗ್ ಅವರನ್ನು ಪರಾಭವಗೊಳಿಸಿದ್ದರು. ನಾರಾಯಣ ದಾಸ್ ಅವರು ಮಾಜಿ ರಾಜ್ಯ ಸಚಿವರಾಗಿದ್ದಾರೆ. ದೀರ್ಘ ಕಾಲ ಬಿಎಸ್‌ಪಿಯಲ್ಲಿದ್ದ ಅವರು 2022ರಲ್ಲಿ ಸಮಾಜವಾದಿ ಪಕ್ಷಕ್ಕೆ ಸೇರ್ಪಡೆಗೊಂಡಿದ್ದರು. ಸಮಾಜವಾದಿ ಪಕ್ಷವು 'ಇಂಡಿಯಾ' ಒಕ್ಕೂಟದಲ್ಲಿರುವುದರಿಂದ ಕ್ಷೇತ್ರದ ಬಿಜೆಪಿ ವಿರುದ್ಧ ಮತಗಳು ನಾರಾಯಣ ದಾಸ್ ಅವರ ಪಾಲಾಗಲಿವೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಜನಪ್ರಿಯ ಯೋಜನೆಗಳನ್ನು ಹಾಗೂ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ನೇತೃತ್ವದ ರಾಜ್ಯ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಮುಂದಿರಿಸಿ ಬಿಜೆಪಿ ಅಭ್ಯರ್ಥಿ ಮತ ಯಾಚಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ವೈಫಲ್ಯ, ರೈತರ ಸಮಸ್ಯೆ ಮತ್ತು ಸೇನೆಯ 'ಅಗ್ನಿಪಥ' ಯೋಜನೆಯನ್ನು ಸಮಾಜವಾದಿ ಪಕ್ಷದ ಅಭ್ಯರ್ಥಿ ಪ್ರಮುಖ ಚುನಾವಣಾ ವಿಷಯವಾಗಿಸಿದ್ದಾರೆ.

ಮಳೆ: ಎಲ್ಲಿ- ಎಷ್ಟು? (ಸೆಂ.ಮೀಗಳಲ್ಲಿ)	ದಾವಣಗೆರೆ ಜಿಲ್ಲೆ	ಚಿತ್ರದುರ್ಗ ಜಿಲ್ಲೆ	ಶಿವಮೊಗ್ಗ	ಧಾರವಾಡ ಜಿಲ್ಲೆ	ತೇಗೂರ	ಕೊಡಗು ಜಿಲ್ಲೆ	ಬಾಗಲಕೋಟೆ ಜಿಲ್ಲೆ	ಕೆರೂರ	ತುಮಕೂರು ಜಿಲ್ಲೆ
	ಚನ್ನಗಿರಿ 12	ಹೊಸದುರ್ಗ 12	ಕೊಮ್ಮನಾಳ ಗ್ರಾ.ಪಂ ವ್ಯಾಪ್ತಿ 9.1	ಹುಬ್ಬಳ್ಳಿ 6.35	5.6	ಕುಟ್ಟ 5	ಬೇಲೂರ 7	5	ತುಂಬಾಡಿ 5

ಕರಾವಳಿ ಜಿಲ್ಲೆಗಳ ಸಮುದ್ರ ತೀರದಲ್ಲಿ ಪ್ರಕ್ಷುಬ್ಧ ವಾತಾವರಣ ಇರಲಿದೆ. ಅಲೆಗಳ ಅಬ್ಬರ ಇರಲಿದ್ದು, ಮೀನುಗಾರರು ಎಚ್ಚರಿಕೆ ವಹಿಸುವಂತೆಯೂ ಹವಾಮಾನ ಇಲಾಖೆ ಸೂಚನೆ ನೀಡಿದೆ

ಇಳೆಗೆ ತಂಪೆರೆದ ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು/ಹುಬ್ಬಳ್ಳಿ: ರಾಜ್ಯದ ವಿವಿಧೆಡೆ ಭಾನುವಾರ ಧಾರಾಕಾರ ಮಳೆಯಾಗಿದೆ. ಮೈಸೂರು ನಗರದಲ್ಲಿ ಮುಂಜಾನೆ ಸಾಧಾರಣ ಮಳೆಯಾಯಿತು. ಮಧ್ಯಾಹ್ನದ ನಂತರ ಗುಡುಗು ಸಹಿತ ಜೋರು ಮಳೆ ಸುರಿಯಿತು. ಕೊಡಗು ಜಿಲ್ಲೆಯ ಕೇರಳ ಗಡಿ ಭಾಗ ಕುಟ್ಟ ಗ್ರಾಮದ ವ್ಯಾಪ್ತಿಯಲ್ಲಿ ಭಾರಿ ಮಳೆಯಾಗಿದೆ.

ಹುಬ್ಬಳ್ಳಿಯಲ್ಲಿ ನಗರ ಹಾಗೂ ಧಾರವಾಡ ಜಿಲ್ಲೆಯ ಕೆಲವೆಡೆ ಶನಿವಾರ ತಡರಾತ್ರಿ ಹಾಗೂ ಭಾನುವಾರ ನಸುಕಿನಲ್ಲಿ ಗುಡುಗು ಸಹಿತ ರಭಸದ ಮಳೆಯಾಗಿದೆ. ವಿಜಯಪುರ, ಬಾಗಲಕೋಟೆ, ಬಳ್ಳಾರಿ, ಉತ್ತರ ಕನ್ನಡ ಜಿಲ್ಲೆಗಳಲ್ಲೂ ವರ್ಷಧಾರೆಯಾಗಿದೆ.

ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಶನಿವಾರ ರಾತ್ರಿಯಿಂದ ಭಾನುವಾರ ಬೆಳಗಿನ ಜಾವದವರೆಗೆ ಧಾರಾಕಾರ ಮಳೆ ಸುರಿದಿದೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನಾದ್ಯಂತ ಶನಿವಾರ ರಾತ್ರಿ ಭರ್ಜರಿ ಮಳೆಯಾಗಿದೆ. ರಾತ್ರಿ 8 ಗಂಟೆಗೆ ಆರಂಭವಾದ ಮಳೆ ಮಧ್ಯರಾತ್ರಿಯವರೆಗೂ ಒಂದೇಸಮನೆ ಸುರಿಯಿತು. ಕೆರೆ, ಕಟ್ಟೆ, ಜಮೀನುಗಳಲ್ಲಿ ನೀರು ನಿಂತಿದೆ. ಬರದಿಂದ ತತ್ತರಿಸಿದ್ದ ಜನರಲ್ಲಿ ಮುಂಗಾರುಪೂರ್ವ ಮಳೆ ಸಂತಸ ಉಂಟುಮಾಡಿದೆ.

ಹಲವು ಹಳ್ಳ, ಕೊಳ್ಳಗಳು ತುಂಬಿವೆ. ಎಂ.ಜಿ. ದಿಬ್ಬದಲ್ಲಿನ ಕೆರೆಯ ಏರಿ ಬಿರುಕು ಬಿಟ್ಟಿದೆ.

ಶಿವಮೊಗ್ಗ ವರದಿ: ಶಿವಮೊಗ್ಗ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಮಳೆಯ ಆರ್ಭಟ ಮುಂದುವರಿದಿದೆ. ಭಾನುವಾರ ಬೆಳಿಗ್ಗೆ ಭದ್ರಾ ಜಲಾಶಯದ ಒಳಹರಿವು 1,150 ಕ್ಯುಸೆಕ್‌ಗೆ ಏರಿಕೆಯಾಗಿತ್ತು. ಈ ವರ್ಷ ಇದೇ ಮೊದಲ ಬಾರಿಗೆ ಒಳಹರಿವು 1,000 ಕ್ಯುಸೆಕ್ ದಾಟಿದೆ. ಶನಿವಾರ ಬೆಳಿಗ್ಗೆ ಒಳಹರಿವಿನ ಪ್ರಮಾಣ 571 ಕ್ಯುಸೆಕ್ ಇತ್ತು. 24 ಗಂಟೆಯ ಅವಧಿಯಲ್ಲಿ ಜಲಾಶಯಕ್ಕೆ ಹರಿದುಬರುತ್ತಿರುವ ನೀರಿನ ಪ್ರಮಾಣ ದುಪ್ಪಟ್ಟಾಗಿದೆ.

ತುಮಕೂರು ವರದಿ: ಜಿಲ್ಲೆಯ ವಿವಿಧೆಡೆ ಎರಡು–ಮೂರು ದಿನಗಳಿಂದ ಉತ್ತಮ ಮಳೆಯಾಗುತ್ತಿದೆ. ಮಧುಗಿರಿ ಭಾಗದಲ್ಲಿಯೂ ಉತ್ತಮ ಮಳೆ ಸುರಿದಿದೆ. ಬಿತ್ತನೆ ಕಾರ್ಯವೂ ಚುರುಕುಗೊಂಡಿದೆ. ನಿರಂತರ ಮಳೆ ರೈತರ ಮುಖದಲ್ಲಿ ಮಂದಹಾಸ ಮೂಡಿಸಿದೆ. ತುಮಕೂರು ಬಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ನಡೆಯುತ್ತಿರುವ ಕಾಮಗಾರಿ ಸ್ಥಳದ ಸಮೀಪ 5 ಕಿ.ಮೀವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಚೋಳೇನಹಳ್ಳಿ ಕೆರೆ, ಹೊಸಕೆರೆ, ರೆಡ್ಡಿಹಳ್ಳಿ ಹಾಗೂ ಹನುಮಂತಪುರ ಕೆರೆ ಸೇರಿದಂತೆ ಹಲವು ಕೆರೆಗಳಿಗೆ ನೀರು ಹರಿದಿದೆ.



ಹಂಪಿ ಸುತ್ತಮುತ್ತ ಭಾನುವಾರ ಮಧ್ಯಾಹ್ನ ಮಳೆ ಸುರಿದ ಕಾರಣ ವಿಜಯವಿಠ್ಠಲ ದೇವಸ್ಥಾನದ ಆವರಣದಲ್ಲಿ ನೀರು ನಿಂತು ಕಲ್ಲಿನ ರಥ ಮತ್ತು ಇತರ ಸ್ಮಾರಕಗಳ ಪ್ರತಿಬಿಂಬ ಗೋಚರಿಸಿತು – ಚಿತ್ರ: ಮಂಜಪ್ಪ ರಂಗಪ್ಪನವರ್

ಹೊಸದುರ್ಗದ ಕೆಲ್ಲೋಡು ಬ್ಯಾರೇಜ್ ಮೈದುಂಬಿ ಹರಿಯುತ್ತಿದೆ

ಕೇರಳದ ಹಲವೆಡೆ ವರ್ಷಧಾರೆ

ತಿರುವನಂತಪುರ (ಪಿಟಿಐ): ಕೇರಳದ ಹಲವು ಭಾಗಗಳಲ್ಲಿ ಶನಿವಾರ ರಾತ್ರಿಯಿಂದಲೇ ಭಾರಿ ಮಳೆಯಾಗುತ್ತಿದ್ದು, ಗುಡ್ಡಗಾಡು ಮತ್ತು ಕರಾವಳಿ ಪ್ರದೇಶಗಳ ಜನರಿಗೆ ಹೆಚ್ಚು ಜಾಗರೂಕವಾಗಿರುವಂತೆ ಅಧಿಕಾರಿಗಳು ಭಾನುವಾರ ಸೂಚನೆ ನೀಡಿದ್ದಾರೆ.

ಹವಾಮಾನ ಇಲಾಖೆಯು, ಪತ್ತನಂತಿಟ್ಟ, ಕೊಟ್ಟಾಯಂ ಮತ್ತು ಇಡುಕ್ಕಿ ಜಿಲ್ಲೆಗಳಿಗೆ ಸೋಮವಾರವು 'ರೆಡ್ ಅಲರ್ಟ್' ಘೋಷಿಸಿದ್ದು, ತಿರುವನಂತಪುರ, ಕೊಲ್ಲಂ, ಆಲಪ್ಪುಳ ಮತ್ತು ಎರ್ನಾಕುಳ ಸೇರಿ ಇತರ ನಾಲ್ಕು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದೆ.

ತಿರುವನಂತಪುರದಲ್ಲಿ ಶನಿವಾರ ರಾತ್ರಿ ಭಾರಿ ಮಳೆಯಾಗಿದೆ. ನಗರ ಮತ್ತು ಅದರ ಉಪನಗರಗಳ ತಗ್ಗು ಪ್ರದೇಶಗಳು ಜಲಾವೃತವಾಗಿದ್ದು, ಜನಜೀವನವನ್ನು ಅಸ್ತವ್ಯಸ್ತಗೊಳಿಸಿದೆ. ಕೆಲವೆಡೆ ಮನೆ, ಅಂಗಡಿಗಳು ಜಲಾವೃತಗೊಂಡಿವೆ.

ನಿಕೋಬಾರ್: ನೈರುತ್ಯ ಮುಂಗಾರು ಆರಂಭ

ನವದೆಹಲಿ (ಪಿಟಿಐ): ನೈರುತ್ಯ ಮುಂಗಾರು ದೇಶದ ದಕ್ಷಿಣ ಭಾಗದ ನಿಕೋಬಾರ್ ದ್ವೀಪಗಳಿಂದ ಭಾನುವಾರ ಆರಂಭವಾಗಿದ್ದು, ಮೇ 31ರೊಳಗೆ ಕೇರಳ ರಾಜ್ಯವನ್ನು ಪ್ರವೇಶಿಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

'ನೈರುತ್ಯ ಮಾನ್ಸೂನ್, ಮಾಲ್ದೀವ್ಸ್‌ನ ಕೆಲವು ಭಾಗಗಳು ಮತ್ತು ಕೊಮೊರಿನ್ ಪ್ರದೇಶ, ದಕ್ಷಿಣ ಬಂಗಾಳ ಕೊಲ್ಲಿ, ನಿಕೋಬಾರ್ ದ್ವೀಪಗಳು ಮತ್ತು ದಕ್ಷಿಣ ಅಂಡಮಾನ್ ಸಮುದ್ರದ ಕೆಲವು ಭಾಗಗಳನ್ನು ಭಾನುವಾರ ಆವರಿಸಿತು' ಎಂದು ಐಎಂಡಿ ಕಚೇರಿ ತಿಳಿಸಿದೆ.

ಮುಂಗಾರು ಮಳೆಯು ಕೇರಳವನ್ನು ಪ್ರವೇಶಿಸುವ ದಿನಾಂಕವು ಕಳೆದ 150 ವರ್ಷಗಳಲ್ಲಿ ವ್ಯಾಪಕ ಬದಲಾವಣೆ ಕಂಡಿದೆ. 1918ರಲ್ಲಿ ಮೇ 11 ರಂದು ನೈರುತ್ಯ ಮುಂಗಾರು ಕೇರಳವನ್ನು ಮುಂಚಿತವಾಗಿ ಪ್ರವೇಶಿಸಿತ್ತು. 1972ರಲ್ಲಿ ಜೂನ್ 18 ರಂದು ಅತ್ಯಂತ ವಿಳಂಬವಾಗಿ ಪ್ರವೇಶಿಸಿತ್ತು. ಕಳೆದ ವರ್ಷ ಜೂನ್ 8ರಂದು, 2022ರಲ್ಲಿ ಮೇ 29, 2021ರಲ್ಲಿ ಜೂನ್ 3 ಮತ್ತು 2020ರಲ್ಲಿ ಜೂನ್ 1ರಂದು ದಕ್ಷಿಣ ರಾಜ್ಯವನ್ನು ಪ್ರವೇಶಿಸಿತ್ತು ಎಂದು ಐಎಂಡಿ ಹೇಳಿದೆ.

ಹೊಸಪೇಟೆಯಲ್ಲಿ ಭಾನುವಾರ ಮಧ್ಯಾಹ್ನ ಮಳೆಯನ್ನು ಸಂಭ್ರಮಿಸಿದ ಯುವತಿ –ಪ್ರಜಾವಾಣಿ ಚಿತ್ರ/ಲವ ಕೆ.

ರಾಜ್ಯದಲ್ಲಿ '5 ದಿನ ಮಳೆ'

ಒಂದನೇ ಪುಟದಿಂದ

ಇದೇ 22ರಂದು ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಿಗೆ 'ಆರೆಂಜ್' ಹಾಗೂ ಕೊಡಗು, ದಾವಣಗೆರೆ, ಮೈಸೂರು, ಚಾಮರಾಜನಗರ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಸೂಚನೆ ಕೊಡಲಾಗಿದೆ.

ಮಲೆನಾಡು ಹಾಗೂ ದಕ್ಷಿಣ ಒಳನಾಡು ಭಾಗಗಳಲ್ಲಿ ಬಿರುಗಾಳಿಯು ಪ್ರತಿಗಂಟೆಗೆ 40ರಿಂದ 50 ಕಿ.ಮೀ ವೇಗದಲ್ಲಿ ಬೀಸಲಿದೆ. ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಕೋರಲಾಗಿದೆ.

ಯಾದಗಿರಿ ತಾಲ್ಲೂಕಿನ ಬಂದಳ್ಳಿಯಲ್ಲಿ ಭೂಮಿ ಹದಗೊಳಿಸುತ್ತಿರುವ ರೈತ

ಕೊಪ್ಪಳ: ಸಿಡಿಲು ಬಡಿದು ರೈತ ಸಾವು

ಕೊಪ್ಪಳ: ಜಿಲ್ಲೆಯಲ್ಲಿ ಹಲವು ದಿನಗಳಿಂದ ಮಳೆಯಾಗುತ್ತಿದ್ದು, ರೈತರು ಕೃಷಿ ಚಟುವಟಿಕೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಭಾನುವಾರವೂ ಕೊಪ್ಪಳ, ಹನುಮಸಾಗರ, ಕುಷ್ಟಗಿ ಸೇರಿದಂತೆ ಹಲವು ಕಡೆ ಮಳೆಯಾಗಿದೆ. ಕುಷ್ಟಗಿ ತಾಲ್ಲೂಕಿನ ಬಚನಾಳ ಗ್ರಾಮದಲ್ಲಿ ಹೊಲದಲ್ಲಿ ಕೆಲಸದಲ್ಲಿ ನಿರತನಾಗಿದ್ದ ರೈತ ಈಶಪ್ಪ ಕಳಮಳ್ಳಿ (33) ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ರಾಯಚೂರು ಜಿಲ್ಲೆಯ ಸಿಂಧನೂರು ಹಾಗೂ ಕವಿತಾಳದಲ್ಲಿ ಸಾಧಾರಣ ಮಳೆಯಾಗಿದೆ. ಬಿಸಿಲಿನ ಧಗೆ ಕಡಿಮೆಯಾಗಿದೆ.

ಕೊನೆಗೂ 'ತಬರ'ನ ಜಮೀನಿಗೆ ಕೊಳವೆಬಾವಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ತಾಲ್ಲೂಕಿನ ಪಿಂಡಿಪಾಪನಹಳ್ಳಿಯ 'ಪದ್ಮಶ್ರೀ' ಪುರಸ್ಕೃತ ತಮಟೆ ಕಲಾವಿದ ಮುನಿವೆಂಕಟಪ್ಪ ಅವರ ಜಮೀನಿನಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿ ಕೊಳವೆಬಾವಿ ಕೊರೆಯಲು ಭೂಗರ್ಭ ವಿಜ್ಞಾನಿಗಳು ಭಾನುವಾರ ಸೂಕ್ತ ಜಾಗ (ಪಾಯಿಂಟ್) ಗುರುತಿಸಿದರು.

ಆದಿ ಜಾಂಬವ ನಿಗಮ ಕಳೆದ ವರ್ಷ ಮುನಿವೆಂಕಟಪ್ಪ ಅವರಿಗೆ ಕೊಳವೆಬಾವಿ ಮಂಜೂರು ಮಾಡಿತ್ತು. ಆದರೆ ಒಂದೂವರೆ ವರ್ಷವಾದರೂ ಅವರಿಗೆ ಈ ಸೌಲಭ್ಯ ದೊರೆತಿರಲಿಲ್ಲ. ಈ ಹಿರಿಯ ಕಲಾವಿದ ನಿಗಮದ ಕಚೇರಿಗೆ ಅಲೆಯುತ್ತಲೇ ಇದ್ದರು. ಈ ಬಗ್ಗೆ ಗಂಗಾ ಕಲ್ಯಾಣಕ್ಕೆ 'ತಬರ'ನಾದ ಕಲಾವಿದ ಎಂದು ಭಾನುವಾರ 'ಪ್ರಜಾವಾಣಿ'ಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ವರದಿ ಪರಿಣಾಮ

ವರದಿಯಿಂದ ಎಚ್ಚೆತ್ತುಕೊಂಡ ಆದಿ ಜಾಂಬವ ನಿಗಮದ ಅಧಿಕಾರಿಗಳು ಭಾನುವಾರ ಬೆಳಗ್ಗೆಯೇ ಮುನಿವೆಂಕಟಪ್ಪ ಅವರ ಮನೆಗೆ ಧಾವಿಸಿ ಮಾಹಿತಿ ಪಡೆದರು. ಮಧ್ಯಾಹ್ನದ ವೇಳೆಗೆ ಭೂಗರ್ಭ ವಿಜ್ಞಾನಿಗಳನ್ನು ಕರೆಯಿಸಿ ಜಮೀನಿನಲ್ಲಿ ಕೊಳವೆಬಾವಿ ಕೊರೆಯಿಸಲು ಸೂಕ್ತ ಜಾಗ (ಪಾಯಿಂಟ್) ಗುರುತಿಸಿದರು.

'ಭಾನುವಾರ ರಾತ್ರಿ ಅಥವಾ ಸೋಮವಾರ ಕೊಳವೆಬಾವಿ ಕೊರೆಸಲು ಲಾರಿ ಕಳುಹಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ' ಎಂದು ಮುನಿವೆಂಕಟಪ್ಪ ಅವರ ಪುತ್ರ ಪ್ರಸನ್ನ 'ಪ್ರಜಾವಾಣಿ'ಗೆ ತಿಳಿಸಿದರು.

ದೇವೇಗೌಡರ ಕುಟುಂಬ ಮುಗಿಸಲು ಸಂಚು: ಜೆಡಿಎಸ್ ಆರೋಪ

ಬೆಂಗಳೂರು: ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರ ಕುಟುಂಬವನ್ನು ಮುಗಿಸಲು ರಾಜ್ಯ ಸರ್ಕಾರ ಸಂಚು ರೂಪಿಸಿದೆ ಎಂದು ಜೆಡಿಎಸ್ ಆರೋಪಿಸಿದೆ. ಈ ಕುರಿತು 'ಎಕ್ಸ್' ಮೂಲಕ ಆಕ್ರೋಶ ವ್ಯಕ್ತಪಡಿಸಿರುವ ಪಕ್ಷ, ದೇವೇಗೌಡರ ಕುಟುಂಬದ ವಿರುದ್ಧ ಕಾಂಗ್ರೆಸ್ ವ್ಯವಸ್ಥಿತ ಹುನ್ನಾರ ನಡೆಸಿದೆ.

ವಕೀಲ ದೇವರಾಜೇಗೌಡ ಅವರ ಜತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ನಡೆಸಿರುವ ಮೊಬೈಲ್ ಸಂಭಾಷಣೆಯ ತುಣುಕುಗಳು ಮಾಧ್ಯಮಗಳಲ್ಲಿ ಬಹಿರಂಗವಾಗಿವೆ. ಇಂತಹ ಸಂಚಿಗಾಗಿ ₹100 ಕೋಟಿ ಬಂಡವಾಳ ಹೂಡಲು ಸಿದ್ಧರಿದ್ದರು ಎನ್ನುವ ವಿಷಯ ಆತಂಕಕಾರಿಯಾಗಿದೆ ಎಂದಿದೆ.

ವಿಮಾನದಲ್ಲಿ ಬೆಂಕಿ: ತುರ್ತು ಭೂಸ್ಪರ್ಶ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಶನಿವಾರ ರಾತ್ರಿ ಕೇರಳದ ಕೊಚ್ಚಿಗೆ ಹೊರಟಿದ್ದ ಏರ್ ಇಂಡಿಯಾ ವಿಮಾನವು ಎಂಜಿನ್‌ನಲ್ಲಿ ತಾಂತ್ರಿಕ ದೋಷದಿಂದ ಬೆಂಕಿ ಕಾಣಿಸಿಕೊಂಡ ಕಾರಣ ತುರ್ತು ಭೂಸ್ಪರ್ಶ ಮಾಡಿದೆ.

ಶನಿವಾರ ರಾತ್ರಿ 11.12ಕ್ಕೆ ಬೆಂಗಳೂರಿನಿಂದ ಕೊಚ್ಚಿಗೆ ಹಾರಿದ ಸ್ವಲ್ಪ ಹೊತ್ತಿನಲ್ಲಿಯೇ ಏರ್ ಇಂಡಿಯಾದ ಐಎಕ್ಸ್ 1132 ವಿಮಾನದ ಮುಂಭಾಗದ ಎಂಜಿನ್‌ನಲ್ಲಿ ಏಕಾಏಕಿ ದಟ್ಟವಾದ ಹೊಗೆ ಮತ್ತು ಬೆಂಕಿ ಕಾಣಿಸಿಕೊಂಡಿದೆ. ಕೂಡಲೇ ಪೈಲಟ್ ಮತ್ತು ವಿಮಾನ ಸಿಬ್ಬಂದಿ ಏರ್ ಟ್ರಾಫಿಕ್ ಕಂಟ್ರೋಲ್ ರೂಮ್‌ಗೆ ಮಾಹಿತಿ ರವಾನಿಸಿ, ವಿಮಾನವನ್ನು ಎಮರ್ಜೆನ್ಸಿ ಲ್ಯಾಂಡ್ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ವಿಮಾನದಲ್ಲಿ ಸಿಬ್ಬಂದಿ ಮತ್ತು ಪ್ರಯಾಣಿಕರು ಸೇರಿದಂತೆ 179 ಮಂದಿ ಸುರಕ್ಷಿತವಾಗಿದ್ದಾರೆ ಎಂದು ಏರ್ ಇಂಡಿಯಾ ಮಾಹಿತಿ ನೀಡಿದೆ.

ದೀರ್ಘ ರಜೆ ಪಡೆಯಲು ಹಿಂಜರಿಕೆ

ಒಂದನೇ ಪುಟದಿಂದ

'ದೀರ್ಘಾವಧಿ ರಜೆ ಪಡೆಯಲು ಮಹಿಳೆಯರು ಹಿಂದೇಟು ಹಾಕುತ್ತಿದ್ದಾರೆ. ಸಹೋದ್ಯೋಗಿ ಮಹಿಳೆ ವೈಯಕ್ತಿಕ ಕಾರಣಕ್ಕೆ ಒಂದು ವಾರ ರಜೆಗೆ ಹೋಗಿದ್ದರು. ಹಿರಿಯ ಅಧಿಕಾರಿಯೊಬ್ಬರೂ ಇದೇ ಅವಧಿಯಲ್ಲಿ ರಜೆಯ ಮೇಲೆ ತೆರಳಿದ್ದರು. ಮರು ದಿನದಿಂದಲೇ ಕಚೇರಿಯಲ್ಲಿ, ಇವರಿಬ್ಬರೂ ಪೆನ್‌ ಡ್ರೈವ್ ಸಂತ್ರಸ್ತೆಯರಿರಬಹುದು ಎಂಬ ಗುಸುಗುಸು ಪುರುಷ ಸಹೋದ್ಯೋಗಿಗಳ ನಡುವೆ ಹರಿದಾಡಿತು' ಎಂದು ಮಹಿಳಾ ಉದ್ಯೋಗಿಯೊಬ್ಬರು ನೊಂದುಕೊಂಡರು.

'ಹಾಸನ ಸಮೀಪ ಯುವತಿಯೊಬ್ಬಳು ವಾರದ ಹಿಂದೆ ಯಾವುದೋ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಳು. ಪೆನ್‌ಡ್ರೈವ್ ಹೊರಬಂದ ಮೇಲೆಯೇ ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದು ಎಂಬ ಗಾಳಿಸುದ್ದಿ ಹರಡಿತು. ಸ್ತ್ರೀ ಸುತ್ತ ನಡೆಯುವ ಎಲ್ಲ ಘಟನೆಗಳ ಹಿಂದೆ ಪೆನ್ ಡ್ರೈವ್ ಕರಿನೆರಳು ಬೀಳುತ್ತಿರುವುದು ಆಘಾತಕಾರಿಯಾಗಿದೆ' ಎನ್ನುತ್ತಾರೆ ಸಾಮಾಜಿಕ ಕಾರ್ಯಕರ್ತೆ ಕೆ.ಟಿ. ಜಯಶ್ರೀ.

'ತಪ್ಪೆಸಗಿದವರು ಕಾಣೆಯಾಗಿದ್ದಾರೆ. ಅವರ ಕುಟುಂಬಸ್ಥರು ಮಹಾನಗರದಲ್ಲಿ ಕುಳಿತಿದ್ದಾರೆ. ಒತ್ತಡವೋ, ಒಪ್ಪಿತವೋ, ಅಸಹಾಯಕತೆಯಿಂದಲೂ ಸಂತ್ರಸ್ತರಾದವರು ಬೇಗುದಿಯಲ್ಲಿ ದಿನ ಕಳೆಯುತ್ತಿದ್ದಾರೆ. ಇವ್ಯಾವುದರ ಪರಿವೆಯೇ ಇಲ್ಲದ, ಘನತೆಯಿಂದ ಬದುಕುತ್ತಿದ್ದ ಸಾಮಾನ್ಯ ಜನರು ನಿತ್ಯ ಸಂಘರ್ಷ ಎದುರಿಸುವಂತಾಗಿದೆ' ಎಂದು ಆತಂಕಗೊಂಡರು.

ಸ್ವಿಚ್ಡ್ ಆಫ್, ನಾಟ್ ರೀಚಬಲ್: ಪೆನ್ ಡ್ರೈವ್ ಬಹಿರಂಗದೊಂದಿಗೆ ವರ್ಷಗಳಿಂದ ಮಡುಗಟ್ಟಿದ ಸಂತ್ರಸ್ತೆಯರ ನೋವು ಕಣ್ಣೀರ ಧಾರೆಯಾಗಿದೆ. ಅಜ್ಞಾತದ ಕತ್ತಲು ಅವರನ್ನು ಇನ್ನಷ್ಟು ಭಯಭೀತರನ್ನಾಗಿ ಮಾಡಿದೆ. ಕುಟುಂಬದವರಿಂದಲೂ ತಾತ್ಸಾರಕ್ಕೊಳಗಾಗಿರುವ ಹಲವಾರು ಸಂತ್ರಸ್ತೆಯರ ಪಾಲಿಗೆ ಮೊಬೈಲ್ ಫೋನ್ ಸಾಂತ್ವನದ ಸಂಗಾತಿಯಾಗಿತ್ತು. ಆದರೆ, ಕರೆ ಮಾಡುವವರ ಕಾಟ, ಉತ್ತರಿಸಲಾಗದ ಸಂಕಟ, ಎಸ್‌ಐಟಿಯಿಂದ ಕರೆ ಬರುವ ಭೀತಿ, ಅನಿವಾರ್ಯವಾಗಿ ಅವರು ಮೊಬೈಲ್ ಫೋನ್‌ಗಳನ್ನು ಸ್ವಿಚ್ಡ್ ಆಫ್ ಮಾಡಿ, ಯಾರ ಸಂಪರ್ಕದ ಗೋಜಿಲ್ಲದ ಸ್ಥಳಕ್ಕೆ ತಲುಪಿದ್ದಾರೆ ಎನ್ನುತ್ತಾರೆ ಕೌನ್ಸಿಲಿಂಗ್ ನಡೆಸುವ ವೈದ್ಯೆಯೊಬ್ಬರು.

ಊರು ತೊರೆದರು...

ಒಂದನೇ ಪುಟದಿಂದ

ಇನ್ನೊಂದು ಪ್ರಕರಣದಲ್ಲಿ, ಪೆನ್ ಡ್ರೈವ್ ನೋಡಿದ ಪತಿಯೊಬ್ಬರು ಪತ್ನಿ ಮೇಲೆ ಹಲ್ಲೆ ನಡೆಸಿದ್ದು, ಆ ಮಹಿಳೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಹೊಳೆನರಸೀಪುರದ ವಕೀಲರೊಬ್ಬರು ಮಾಹಿತಿ ನೀಡಿದರು.

'ಅಣ್ಣ' ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದಿದ್ದಾರೆ. ಧ್ವನಿ ಎತ್ತಿದವರೂ ಇನ್ನು ಮೌನಕ್ಕೆ ಶರಣಾಗುವ ಸಾಧ್ಯತೆಯೇ ಹೆಚ್ಚು. ಸಂತ್ರಸ್ತೆಯರ ಕುಟುಂಬವನ್ನು 'ಸಮಾಧಾನಿಸುವ ಯತ್ನ'ಗಳು ಮರೆಯಲ್ಲಿ ಸಾಗಿವೆ ಎನ್ನುತ್ತಾರೆ ಅವರು.

ಯತೀಂದ್ರ ಸಿದ್ದರಾಮಯ್ಯಗೆ ಅವಕಾಶ ಕಲ್ಪಿಸಲು 'ಕೈ' ನಾಯಕರ ಒಲವು

ಮೇಲ್ಮನೆ ಪ್ರವೇಶಕ್ಕೆ ಭಾರಿ ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ 12 ಸದಸ್ಯರ ಆಯ್ಕೆಗೆ ಜೂನ್‌ನಲ್ಲಿ ಚುನಾವಣೆ ನಡೆಯಲಿದ್ದು, ಮೂರೂ ಪಕ್ಷಗಳಲ್ಲಿ ಭಾರಿ ಪೈಪೋಟಿ ಇದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗ ಡಾ. ಯತೀಂದ್ರ ಸಿದ್ದರಾಮಯ್ಯ ಅವರನ್ನು ಮೇಲ್ಮನೆಗೆ ತರಲು ಕಾಂಗ್ರೆಸ್ ನಾಯಕರು ಒಲವು ತೋರುತ್ತಿದ್ದಾರೆ.

ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿರುವ 11 ಸದಸ್ಯರ ಅವಧಿ ಜೂನ್ 17ಕ್ಕೆ ಕೊನೆಗೊಳ್ಳಲಿದೆ. ಜಗದೀಶ್ ಶೆಟ್ಟರ್ ಅವರ ರಾಜೀನಾಮೆಯಿಂದ ತೆರವಾಗಿರುವ ಸ್ಥಾನದ ಅವಧಿ 2028ರ ಜೂನ್ 14ರವರೆಗೂ ಇದ್ದು, ಆ ಸ್ಥಾನದ ಭರ್ತಿಗೂ ಉಪ ಚುನಾವಣೆ ನಡೆಯಲಿದೆ.

ವಿಧಾನಸಭೆಯ ಬಲಾಬಲದ ಪ್ರಕಾರ, ಮೊದಲ 11 ಸ್ಥಾನಗಳಲ್ಲಿ ಏಳು ಕಾಂಗ್ರೆಸ್ ಪಾಲಾಗಲಿವೆ. ಬಿಜೆಪಿಗೆ ಮೂರು, ಜೆಡಿಎಸ್‌ಗೆ ಒಂದು ಸ್ಥಾನ ದೊರಕಲಿವೆ. ಶೆಟ್ಟರ್ ಪ್ರತಿನಿಧಿಸುತ್ತಿದ್ದ ಸ್ಥಾನ ಮತ್ತೆ ಕಾಂಗ್ರೆಸ್ ತೆಕ್ಕೆಗೆ ಹೋಗಲಿದೆ.

ಆಕಾಂಕ್ಷಿಗಳ ಭಾರ: ಕಾಂಗ್ರೆಸ್ ಸದಸ್ಯರಾದ ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜ್, ಅರವಿಂದ ಕುಮಾರ್ ಅರಳಿ ಮತ್ತು ಕೆ. ಹರೀಶ್ ಕುಮಾರ್ ಜೂನ್ 17ಕ್ಕೆ ನಿವೃತ್ತರಾಗುತ್ತಿದ್ದಾರೆ.

'ಪಕ್ಷಕ್ಕೆ ಸಿಗುವ ಏಳು ಸ್ಥಾನಗಳಲ್ಲಿ ಮೊದಲನೇ ಆಯ್ಕೆಯಾಗಿ ಯತೀಂದ್ರ ಸಿದ್ದರಾಮಯ್ಯ ಅವರನ್ನು ಪರಿಗಣಿಸುವ ಸಾಧ್ಯತೆ ಇದೆ. ಗೋವಿಂದರಾಜ್ ಮತ್ತು ಬೋಸರಾಜ್ ವರಿಷ್ಠರ ಮನವೊಲಿಸಿ ಮತ್ತೊಂದು ಅವಧಿಗೆ ಪ್ರಯತ್ನಿಸುತ್ತಿದ್ದಾರೆ' ಎನ್ನುತ್ತವೆ ಮೂಲಗಳು.

ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷ ರಮೇಶ್ ಬಾಬು, ಎರಡನೇ ಬಾರಿ ಕೆಪಿಸಿಸಿ ಖಜಾಂಚಿಯಾಗಿರುವ ವಿನಯ್ ಕಾರ್ತಿಕ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಪ್ತ, ಕೆಪಿಸಿಸಿ ಆಡಳಿತ ವಿಭಾಗದ ಪ್ರಧಾನ ಕಾರ್ಯದರ್ಶಿ ವಿಜಯ್ ಕೆ. ಮುಳುಗುಂದ್, ಎಐಸಿಸಿ ಕಾರ್ಯದರ್ಶಿ ಪಿ.ವಿ. ಮೋಹನ್, ರಾಷ್ಟ್ರೀಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, ಡಿ. ದೇವರಾಜ ಅರಸು ಅವರ ಮೊಮ್ಮಗ ಸೂರಜ್ ಹೆಗ್ಡೆ, ಕೆಪಿಸಿಸಿ ಸಾಮಾಜಿಕ ನ್ಯಾಯ ಘಟಕದ ಅಧ್ಯಕ್ಷರಾದ ವಕೀಲ ಸಿ.ಎಸ್. ದ್ವಾರಕಾನಾಥ್ ಅವರು ವಿಧಾನಸಭೆಯಿಂದ ವಿಧಾನ ಪರಿಷತ್ ಪ್ರವೇಶಿಸಲು ಪ್ರಯತ್ನಿಸುತ್ತಿದ್ದಾರೆ.

ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಪುಷ್ಪಾ ಅಮರನಾಥ್, ಕವಿತಾ ರೆಡ್ಡಿ, ಆರತಿ ಕೃಷ್ಣ, ಮಹದೇವಪುರದ ಕಮಲಾಕ್ಷಿ ರಾಜಣ್ಣ ಮಹಿಳಾ ಕೋಟಾದಡಿ ಅವಕಾಶ ಕೇಳುತ್ತಿದ್ದಾರೆ. 20 ಮಂದಿ ಕೆಪಿಸಿಸಿ ಅಧ್ಯಕ್ಷರ ಅವಧಿಯಲ್ಲಿ ಕಚೇರಿ ಕಾರ್ಯದರ್ಶಿಯಾಗಿ ಕೆಲಸ ಮಾಡಿರುವ ನಾರಾಯಣ ಕೂಡ ಆಕಾಂಕ್ಷಿ ಎಂದು ಮೂಲಗಳು ತಿಳಿಸಿವೆ.

ಅವಧಿ ಮುಗಿಯುವ (ಜೂನ್ 17) ಮುನ್ನವೇ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿಯಿಂದ ಕಾಂಗ್ರೆಸ್‌ಗೆ ಜಿಗಿದಿರುವ ಕೆ.ಪಿ.ನಂಜುಂಡಿ ವಿಶ್ವಕರ್ಮ, ತೇಜಸ್ವಿನಿ ಗೌಡ ಕೂಡ ಅವಕಾಶದ ನಿರೀಕ್ಷೆಯಲ್ಲಿದ್ದಾರೆ.

ಹೊಸ ಮುಖಗಳಿಗೆ ಮಣೆ?: ಬಿಜೆಪಿಯ ಆರು ಸದಸ್ಯರ ಅವಧಿ ಮುಗಿಯುತ್ತಿದೆ. ನಾಲ್ವರು ಮಾತ್ರ ಪಕ್ಷದಲ್ಲಿದ್ದಾರೆ. ರಘುನಾಥ್ ರಾವ್ ಮಲ್ಕಾಪೂರೆ, ಎನ್. ರವಿಕುಮಾರ್, ಎಸ್. ರುದ್ರೇಗೌಡ, ಪಿ.ಎ.ಮುನಿರಾಜುಗೌಡ ನಿವೃತ್ತರಾಗುತ್ತಿದ್ದಾರೆ. ಈ ಪೈಕಿ ರವಿಕುಮಾರ್ ಅವರಿಗೆ ಮತ್ತೊಂದು ಅವಧಿಗೆ ಅವಕಾಶ ದೊರಕುವ ಸಾಧ್ಯತೆ ಇದೆ. ವಿಧಾನಸಭೆ ಚುನಾವಣೆಯಲ್ಲಿ ಸೋತಿರುವ ಸಿ.ಟಿ. ರವಿ, ಜೆ.ಸಿ.ಮಾಧುಸ್ವಾಮಿ ಅವರನ್ನು ಮೇಲ್ಮನೆಗೆ ಕರೆತರುವ ಚರ್ಚೆ ಬಿಜೆಪಿಯಲ್ಲಿ ನಡೆದಿದೆ. ಹೊಸಬರಿಗೂ ಅವಕಾಶ ನೀಡುವ ಸಾಧ್ಯತೆ ಇದೆ ಎನ್ನುತ್ತವೆ ಮೂಲಗಳು.

ಫಾರೂಕ್ ಪುನರಾಯ್ಕೆ?

ಜೆಡಿಎಸ್ ಸದಸ್ಯ ಬಿ.ಎಂ.ಫಾರೂಕ್ ಜೂನ್ 17 ಕ್ಕೆ ನಿವೃತ್ತರಾಗುತ್ತಾರೆ. ಪಕ್ಷಕ್ಕೆ ಒಂದೇ ಸ್ಥಾನ ದೊರಕಲಿದ್ದು, ದೇವೇಗೌಡ ಕುಟುಂಬಕ್ಕೆ ನಿಕಟರಾಗಿರುವ ಅವರ ಪುನರಾಯ್ಕೆಯ ಸಂಭವವಿದೆ.

ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ಎರಡು ಬಾರಿ ಸ್ಪರ್ಧಿಸಿ ಸೋತಿರುವ ಟಿ.ಎನ್. ಜವರಾಯಿಗೌಡ ಮತ್ತು ರಾಜ್ಯಸಭೆಯ ಮಾಜಿ ಸದಸ್ಯ ಡಿ.ಕುಪೇಂದ್ರ ರೆಡ್ಡಿ ಕೂಡ ಜೆಡಿಎಸ್‌ನಿಂದ ಮೇಲ್ಮನೆಗೆ ಪ್ರವೇಶ ಪಡೆಯಲು ಪ್ರಯತ್ನವನ್ನು ಆರಂಭಿಸಿದ್ದಾರೆ.

'ಕೈ' ಸರ್ಕಾರಕ್ಕೆ ವರ್ಷದ ಸಂಭ್ರಮ

ಒಂದನೇ ಪುಟದಿಂದ

2023ರ ಮೇ ತಿಂಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ 135 ಸ್ಥಾನಗಳೊಂದಿಗೆ ಸ್ಪಷ್ಟ ಬಹುಮತ ಪಡೆದಿದ್ದ ಕಾಂಗ್ರೆಸ್ ಪಕ್ಷ, ಮೇ 20ರಂದು ಸರ್ಕಾರ ರಚಿಸಿತ್ತು. ಸಿದ್ದರಾಮಯ್ಯ ಎರಡನೇ ಅವಧಿಗೆ ರಾಜ್ಯದ ಮುಖ್ಯಮಂತ್ರಿ ಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಇತರ ಎಂಟು ಸಚಿವರೂ ಅದೇ ದಿನ ಸಂಪುಟ ಸೇರಿದ್ದರು. ಮೇ 27ರಂದು ಸಂಪುಟದ ವಿಸ್ತರಣೆಯೊಂದಿಗೆ ಎಲ್ಲ ಸ್ಥಾನಗಳನ್ನೂ ಭರ್ತಿ ಮಾಡಲಾಗಿತ್ತು.

ಪ್ರತಿ ಕುಟುಂಬಕ್ಕೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಪೂರೈಸುವ 'ಗೃಹ ಜ್ಯೋತಿ', ಕುಟುಂಬದ ಯಜಮಾನಿಗೆ ತಿಂಗಳಿಗೆ ₹2,000 ನೆರವು ನೀಡುವ 'ಗೃಹ ಲಕ್ಷ್ಮಿ', ಅಂತ್ಯೋದಯ ಮತ್ತು ಆದ್ಯತಾ ವಲಯದ ಕುಟುಂಬಗಳ (ಪಿಎಚ್‌ಎಚ್) ಪಡಿತರ ಚೀಟಿ ಹೊಂದಿದ ಕುಟುಂಬಗಳ ಪ್ರತಿ ಸದಸ್ಯರಿಗೆ ತಿಂಗಳಿಗೆ 10 ಕೆ.ಜಿ. ಆಹಾರ ಧಾನ್ಯವನ್ನು ಉಚಿತವಾಗಿ ವಿತರಿಸುವ 'ಅನ್ನ ಭಾಗ್ಯ', ರಾಜ್ಯ ಸರ್ಕಾರಿ ಸ್ವಾಮ್ಯದ ಸಾರಿಗೆ ಸಂಸ್ಥೆಗಳ ಬಸ್‌ಗಳಲ್ಲಿ ಮಹಿಳೆಯರ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸುವ 'ಶಕ್ತಿ' ಮತ್ತು ನಿರುದ್ಯೋಗಿ ಪದವೀಧರರು ಹಾಗೂ ಡಿಪ್ಲೊಮಾ ಪದವೀಧರರಿಗೆ ಮಾಸಾಶನ ನೀಡುವ 'ಯುವನಿಧಿ' ಗ್ಯಾರಂಟಿಗಳನ್ನು ಕಾಂಗ್ರೆಸ್ ಪಕ್ಷವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿತ್ತು.

ಪ್ರಮಾಣವಚನದ ಬಳಿಕ ನಡೆಸಿದ ಮೊದಲ ಸಂಪುಟ ಸಭೆಯಲ್ಲೇ 5 ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಒಪ್ಪಿಗೆ ನೀಡಲಾಗಿತ್ತು. ಹಂತ ಹಂತವಾಗಿ ಈ ಯೋಜನೆಗಳು ಅನುಷ್ಠಾನಕ್ಕೆ ಬಂದವು. ಯುವನಿಧಿ ಇನ್ನೂ ಅನುಷ್ಠಾನದ ಹಂತದಲ್ಲಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ₹52,000 ಕೋಟಿ ಸಂಪನ್ಮೂಲ ಸಂಗ್ರಹಿಸಬೇಕಾದ ಒತ್ತಡವೂ ಸರ್ಕಾರದ ಮೇಲಿತ್ತು. ಲೋಕಸಭಾ ಚುನಾವಣೆ ಮೇಲೆ ಕಣ್ಣಿಟ್ಟ ಸರ್ಕಾರ, ಅಭಿವೃದ್ಧಿ ವೆಚ್ಚಗಳಿಗೆ ಕತ್ತರಿ ಹಾಕಿ ಗ್ಯಾರಂಟಿಗಳತ್ತ ಅನುದಾನದ ಹರಿವು ತಿರುಗಿಸಿತ್ತು. ಲೋಕಸಭಾ ಚುನಾವಣೆಯ ಬಳಿಕ ಮುಂದೇನು ಎಂಬ ಕುತೂಹಲ ರಾಜ್ಯದಲ್ಲಿದೆ.

ಸಂಘರ್ಷದ ಕಾಲ: ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಒಂದು ವರ್ಷದಲ್ಲಿ ಕೇಂದ್ರ ಸರ್ಕಾರದ ಜತೆ ಹಲವು ವಿಚಾರಗಳಲ್ಲಿ ಸಂಘರ್ಷ ನಡೆಸಿದೆ. ತೆರಿಗೆ ಪಾಲು ಮತ್ತು ಅನುದಾನದಲ್ಲಿ ನ್ಯಾಯಯುತ ಹಂಚಿಕೆಗೆ ಆಗ್ರಹಿಸಿ ರಾಜ್ಯ ಸರ್ಕಾರ ನಡೆಸುತ್ತಿರುವ ಆಂದೋಲನ ರಾಷ್ಟ್ರವ್ಯಾಪಿ ಚರ್ಚೆಗೆ ಎಡೆಮಾಡಿತು. ದಕ್ಷಿಣದ ಇತರ ರಾಜ್ಯಗಳೂ ಕರ್ನಾಟಕದ ಕೂಗಿಗೆ ದನಿಗೂಡಿಸಿದವು.

ಅನುದಾನ ಹಂಚಿಕೆ, ತೆರಿಗೆ ಪಾಲು, ನೆರವು ಹೀಗೆ ಹಲವು ವಿಚಾರಗಳಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಂಘರ್ಷದ ಹಾದಿಯಲ್ಲೇ ಸಾಗುತ್ತಿವೆ. ಬರ ಪರಿಹಾರ ಮಂಜೂರು ಮಾಡದೆ ಸತಾಯಿಸುತ್ತಿದ್ದ ಕೇಂದ್ರ ಸರ್ಕಾರದ ನಿಲುವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ರಾಜ್ಯ ಸರ್ಕಾರ, ಅಲ್ಪ ಪ್ರಮಾಣದ ಪರಿಹಾರ ಪಡೆಯುವಲ್ಲೂ ಯಶಸ್ವಿಯಾಯಿತು.

ಅಧಿಕಾರ ಹಂಚಿಕೆಯ ಸದ್ದು

ಮುಖ್ಯಮಂತ್ರಿ ಹುದ್ದೆಯ ಅವಧಿಯನ್ನು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಮಧ್ಯೆ ಹಂಚಿಕೆ ಮಾಡಲಾಗುತ್ತದೆ ಎಂಬ ಸುದ್ದಿ ಆಗಾಗ ರಾಜ್ಯ ರಾಜಕಾರಣದಲ್ಲಿ ಸದ್ದು ಮಾಡುತ್ತಲೇ ಇದೆ. ಲೋಕಸಭಾ ಚುನಾವಣಾ ಪ್ರಚಾರದಲ್ಲಿ ಹಲವು ಬಾರಿ ಈ ವಿಚಾರ ಮಾರ್ದನಿಸಿತು.

ಜಾತಿವಾರು ಪ್ರಾತಿನಿಧ್ಯ ಆಧಾರದಲ್ಲಿ ಹೆಚ್ಚು ಮಂದಿಗೆ ಉಪಮುಖ್ಯಮಂತ್ರಿ ಹುದ್ದೆ ನೀಡಬೇಕೆಂಬ ಬೇಡಿಕೆ ಕೆಲವು ಸಚಿವರಿಂದ ಆಗಾಗ ಕೇಳಿಬರುತ್ತಿದೆ. 'ಆಪರೇಷನ್ ಕಮಲ'ದ ಮೂಲಕ ಬಿಜೆಪಿ ನಾಯಕರು 'ಕೈ' ಸರ್ಕಾರದ ಬುಡ ಅಲ್ಲಾಡಿಸುವ ಪ್ರಯತ್ನಕ್ಕೆ ಕೈ ಹಾಕಬಹುದು ಎಂಬ ಮಾತೂ ಚಾಲ್ತಿಯಲ್ಲಿದೆ.

ಬೆಂಬಿಡದ 'ಕಮಿಷನ್' ಭೂತ!

ಒಂದನೇ ಪುಟದಿಂದ

ತಿಂಗಳಿನಿಂದ ಈಚೆಗೆ ರಾಜ್ಯದಲ್ಲಿ ಹೆಚ್ಚುತ್ತಿರುವ ಕೊಲೆ ಪ್ರಕರಣಗಳ ಸಂಖ್ಯೆ ಕಾಂಗ್ರೆಸ್ ಸರ್ಕಾರವನ್ನು ಮುಜುಗರಕ್ಕೆ ಸಿಲುಕಿಸಿದೆ. ಹುಬ್ಬಳ್ಳಿಯ ನೇಹಾ ಪಾಟೀಲ ಕೊಲೆ, ಧಾರವಾಡದ ಅಂಜಲಿ, ಕೊಡಗಿನ ಮೀನಾ ಕೊಲೆ ಪ್ರಕರಣಗಳು ಭಾರಿ ಸದ್ದು ಮಾಡುತ್ತಿವೆ. ಈ ಪ್ರಕರಣಗಳನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಕಾನೂನು ಸುವ್ಯವಸ್ಥೆ ನಿರ್ವಹಣೆ ವಿಚಾರದಲ್ಲಿ ವಾಗ್ದಾಳಿಗೆ ಇಳಿದಿವೆ.

ಪ್ರಜಾವಾಣಿ

ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ

(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)

: 9008366666

: support@deccanherald.co.in

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ

ಆಯುಕ್ತರ ಕಛೇರಿ, ಕೌಶಲ್ಯ ಭವನ, ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560029 ದೂರವಾಣಿ: 080–25189105 ಸಹಾಯವಾಣಿ: 155267

ಇ–ಮೇಲ್: citeadmission@gmail.com ವೆಬ್‌ಸೈಟ್: www.cite.karnataka.gov.in

ಸಂಖ್ಯೆ: ಕೈತಉಇ/ತರಬೇತಿ/ತ–1/ವಿವ–01/2023–24 ದಿನಾಂಕ: 16–05–2024

ರಾಜ್ಯದ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಗಳಿಗೆ ಆನ್‌ಲೈನ್ ಮುಖಾಂತರ ಆಗಸ್ಟ್–2024ನೇ ಸಾಲಿನ ಪ್ರವೇಶ ಪ್ರಕಟಣೆ

- **ರಾಜ್ಯದಲ್ಲಿರುವ ಎಲ್ಲಾ 270 ಸರ್ಕಾರಿ ಹಾಗೂ 192 ಖಾಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿರುವ** ರಾಷ್ಟ್ರೀಯ ವೃತ್ತಿ ಶಿಕ್ಷಣ ಪರಿಷತ್ (NCVT) ಸಂಯೋಜನೆ ಹೊಂದಿರುವ ವೃತ್ತಿಗಳಿಗೆ ಆನ್‌ಲೈನ್ ಮುಖಾಂತರ ಇಲಾಖಾ ವೆಬ್‌ಸೈಟ್: **www.cite.karnataka.gov.in** ರಲ್ಲಿ ಪ್ರಕಟಿಸಿರುವಂತೆ ಅರ್ಹತೆಯೊಂದಿಗೆ ಮೀಸಲಾತಿ ಆಧಾರದ ಮೇಲೆ ಆಗಸ್ಟ್ – 2024ನೇ ಸಾಲಿಗೆ ಪ್ರವೇಶ ಪಡೆಯಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- ಅಭ್ಯರ್ಥಿಗಳು ಇಲಾಖಾ ವೆಬ್‌ಸೈಟ್: **www.cite.karnataka.gov.in** ರಲ್ಲಿ ನೇರವಾಗಿ ಅಥವಾ ಹತ್ತಿರದ ಸರ್ಕಾರಿ / ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ/ಸಾರ್ವಜನಿಕ ಸೈಬರ್ ಕೆಫೆಗಳ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದಾಗಿದೆ.
- ರಾಷ್ಟ್ರೀಯ ವೃತ್ತಿ ಶಿಕ್ಷಣ ಪರಿಷತ್ (NCVT) ನಿಂದ ಸಂಯೋಜನೆ ಹೊಂದಿ ಅನುಷ್ಠಾನಗೊಳಿಸಿರುವ 52 ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡಲಾಗುವುದು.
- ಅಭ್ಯರ್ಥಿಗಳು ಪ್ರವೇಶ ಸಮಯದಲ್ಲಿ ನೀಡುವ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ಐಡಿಗಳನ್ನು ತರಗತಿಗಳು ಮತ್ತು ಎಟಿಟಿಟಿ ಪರೀಕ್ಷೆಗಳು ಮುಗಿಯುವರೆಗೆ ಬದಲಾವಣೆ ಮಾಡುವಂತಿಲ್ಲ. ಪರೀಕ್ಷೆಗೆ ಸಂಬಂಧಿಸಿದಂತೆ ಎಲ್ಲಾ ಉಪಯುಕ್ತ ಮಾಹಿತಿಗಳನ್ನು ನೋಂದಣಿ ಮಾಡಿಕೊಂಡಿರುವ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ಐಡಿ ಗೆ ಮಾತ್ರ ರವಾನಿಸಲಾಗುವುದು.
- S.S.L.C Board ಅಥವಾ CBSE (Council of Boards of School Education, New Delhi) ರವರಿಂದ ಮಾನ್ಯತೆ ಪಡೆದ ಪರೀಕ್ಷಾ ಮಂಡಳಿಗಳಿಂದ 10ನೇ ತರಗತಿಯ ಪ್ರಮಾಣಪತ್ರ ಹೊಂದಿರುವಂತಹ ಅಭ್ಯರ್ಥಿಗಳು ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಮರಗೆಲಸ (Wood Work Technician), ವೆಲ್ಡರ್, ಶೀಟ್ ಮೆಟಲ್ ವರ್ಕರ್,
- ಹೊಲಿಗೆ ತಂತ್ರಜ್ಞಾನ (Sewing Technology) ಪ್ಲಂಬರ್, ವೈರ್‌ಮ್ಯಾನ್, ಡ್ರೆಸ್ ಮೇಕಿಂಗ್ ಇತ್ಯಾದಿ ವೃತ್ತಿಗಳಿಗೆ 8ನೇ ಪಾಸ್ / 10ನೇ ಫೇಲ್ಡ್ ಅಭ್ಯರ್ಥಿಗಳು ಸಹ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
- **ದಿನಾಂಕ: 20–05–2024 ರಿಂದ 03–06–2024 ರವರೆಗೆ** ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.
- **270 ಸರ್ಕಾರಿ ಮತ್ತು 192 ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆಯಲು ಮಾತ್ರ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ.**

ವಿಶೇಷ ಸೂಚನೆ: ಅರ್ಜಿದಾರರು ಭಾರತ ಸರ್ಕಾರದ DGT, New Delhi ಯಿಂದ ಸಂಯೋಜನೆಗೊಂಡಿರುವ ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು ವೃತ್ತಿಗಳ ಬಗ್ಗೆ ಖಚಿತಪಡಿಸಿಕೊಂಡು ಪ್ರವೇಶ ಪಡೆಯಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು / ಇಲಾಖಾ ವೆಬ್‌ಸೈಟ್‌ನ್ನು ಸಂಪರ್ಕಿಸಲು ತಿಳಿಸಲಾಗಿದೆ.

ಸಹಿ/– ಆಯುಕ್ತರು
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ.

ವಾಸಾಸಂಇ/ವಾ.ಪ್ರ/77/ಅಡ್ವಟೈರ್/2024–25

‘ಜಿಡಿಪಿ ಬೆಳವಣಿಗೆ ಶೇ 7ರಷ್ಟು ನಿರೀಕ್ಷೆ’

ನವದೆಹಲಿ (ಪಿಟಿಐ): ದೇಶದ ಜಿಡಿಪಿ ಬೆಳವಣಿಗೆ ದರ ಮಾರ್ಚ್ ತ್ರೈಮಾಸಿಕದಲ್ಲಿ ಶೇ 6.7 ಮತ್ತು 2023–24ರ ಹಣಕಾಸು ವರ್ಷದಲ್ಲಿ ಅಂದಾಜು ಶೇ6.9–7ರಷ್ಟು ಇರಲಿದೆ ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಸಂಸ್ಥೆ ಅಂದಾಜಿಸಿದೆ.

ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 8.2, ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 8.1 ಮತ್ತು ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 8.4ರಷ್ಟು ಆರ್ಥಿಕತೆ ಬೆಳವಣಿಗೆ ಆಗಿದೆ. ನಾಲ್ಕನೇ ತ್ರೈಮಾಸಿಕದಲ್ಲಿ ಶೇ 6.7ರಷ್ಟು ಬೆಳವಣಿಗೆ ಮತ್ತು 2023–24ರ ಪೂರ್ಣ ಹಣಕಾಸು ವರ್ಷದಲ್ಲಿ ಒಟ್ಟಾರೆ ಜಿಡಿಪಿ ಬೆಳವಣಿಗೆ ದರ ಶೇ 6.9–7ರಷ್ಟು ಇರಲಿದೆ ಎಂದು ನಿರೀಕ್ಷಿಸಿದ್ದೇವೆ ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಸಂಸ್ಥೆಯ ಪ್ರಧಾನ ಆರ್ಥಿಕ ತಜ್ಞ ಸುನಿಲ್ ಕುಮಾರ್ ಸಿನ್ಹಾ ಹೇಳಿದ್ದಾರೆ.

ಮೊದಲ ಎರಡು ತ್ರೈಮಾಸಿಕದಲ್ಲಿ ಕಡಿಮೆಯಿದ್ದ ಬೆಳವಣಿಗೆ ದರ ಮೂರನೇ ತ್ರೈಮಾಸಿಕದಲ್ಲಿ (ಅಕ್ಟೋಬರ್–ಡಿಸೆಂಬರ್) ಶೇ 8.4ರಷ್ಟಕ್ಕೆ ಏರಿಕೆ ಆಗಿದೆ.

ಇದೇ ತ್ರೈಮಾಸಿಕದಲ್ಲಿ ಒಟ್ಟು ಮೌಲ್ಯ ವರ್ಧನೆಯು (ಜಿವಿಎ) ಶೇ 6.5ರಷ್ಟಿದ್ದರೆ, ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆ ದರ ಶೇ 8.4ರಷ್ಟು ಇದೆ. ಈ ತ್ರೈಮಾಸಿಕದಲ್ಲಿ ಹೆಚ್ಚಿನ ತೆರಿಗೆಗಳನ್ನು ಸಂಗ್ರಹಿಸಲಾಗಿದೆ. ಮೊದಲ ತ್ರೈಮಾಸಿಕದಲ್ಲಿ ಜಿವಿಎ ಮತ್ತು ಜಿಡಿಪಿ ಶೇ 8.2ರಷ್ಟಿದ್ದರೆ, ಎರಡನೇ ತ್ರೈಮಾಸಿಕದಲ್ಲಿ ಜಿವಿಎ ಶೇ 7.7 ಮತ್ತು ಜಿಡಿಪಿ ಶೇ 8.1ರಷ್ಟಿತ್ತು.

ಜಿಡಿಪಿ ಎನ್ನುವುದು ಒಂದು ನಿರ್ದಿಷ್ಟ ಅವಧಿಯಲ್ಲಿ ಉತ್ಪತ್ತಿಯಾಗುವ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯವಾಗಿದೆ. ಜಿವಿಎ ಎಂದರೆ ಜಿಡಿಪಿ ಮೈನಸ್ ನಿವ್ವಳ ತೆರಿಗೆಗಳು (ಒಟ್ಟು ತೆರಿಗೆ ಸಂಗ್ರಹದಿಂದ ಸಬ್ಸಿಡಿ ಕಳೆದ ಮೊತ್ತ) ಆಗಿದೆ.

ಏಪ್ರಿಲ್‌ನಲ್ಲಿ ನಡೆದ ಆರ್‌ಬಿಐನ ಹಣಕಾಸು ನೀತಿ ಸಭೆಯಲ್ಲಿ (ಎಂಪಿಸಿ) 2023–24ರ ಹಣಕಾಸು ವರ್ಷದಲ್ಲಿ ಶೇ 7ರಷ್ಟು ಜಿಡಿಪಿ ಬೆಳವಣಿಗೆ ದರ ಇರಲಿದೆ ಎಂದು ಅಂದಾಜಿಸಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಡಿಪಿ ದರ ಶೇ 7.1ಕ್ಕೆ ವಿಸ್ತರಿಸುವ ನಿರೀಕ್ಷೆ ಇದೆ ಎಂದು ಸಿನ್ಹಾ ಹೇಳಿದ್ದಾರೆ.

ನಿರ್ಮಾಣ ಮತ್ತು ವಿದ್ಯುತ್ ಕ್ಷೇತ್ರವು (ಸೇವಾವಲಯ) ಪ್ರಗತಿ ಕಾಣಲಿದೆ. ಆದರೆ, ಗಣಿಗಾರಿಕೆ ಮತ್ತು ಕೈಗಾರಿಕಾ ಉತ್ಪಾದನೆಯು ಇಳಿಕೆ ಆಗಲಿದೆ. ಭಾರತೀಯ ಹವಾಮಾನ ಇಲಾಖೆ ಅಂದಾಜಿನಂತೆ ಈ ಬಾರಿ ಸಾಮಾನ್ಯಕ್ಕಿಂತ ಹೆಚ್ಚಿನ ಮುಂಗಾರು ಆದರೆ, ಗ್ರಾಮೀಣ ಬೇಡಿಕೆ ಹೆಚ್ಚಲಿದೆ. ಇದು ಬಳಕೆಯನ್ನು ಹೆಚ್ಚಿಸಲಿದೆ ಎಂದು ಹೇಳಿದ್ದಾರೆ.

ನಾಲ್ಕನೇ ತ್ರೈಮಾಸಿಕದ (ಜನವರಿ–ಮಾರ್ಚ್ 2024) ಜಿಡಿಪಿ ಸಂಖ್ಯೆಗಳು ಮತ್ತು 2023-24 ಹಣಕಾಸು ವರ್ಷದ ತಾತ್ಕಾಲಿಕ ಅಂದಾಜುಗಳನ್ನು ಸರ್ಕಾರವು ಮೇ 31ರಂದು ಬಿಡುಗಡೆ ಮಾಡಲು ನಿರ್ಧರಿಸಿದೆ.

‘ಚಾರ್ ಧಾಮ್ ಯಾತ್ರೆ’ ಅಂಗವಾಗಿ ಉತ್ತರಾಖಂಡದ ಚಮೋಲಿ ಜಿಲ್ಲೆಯ ಬದರೀನಾಥ ದೇವಾಲಯಕ್ಕೆ ಭಾನುವಾರ ಭೇಟಿ ನೀಡಿದ್ದ ಭಕ್ತರು–ಪಿಟಿಐ ಚಿತ್ರ

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹336-500

ದ್ವಿತಳಿ (ಬಿ.ವಿ) ₹392-585

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹625
12 ಕ್ಕೆ	₹82
ಮೈಸೂರು	
100ಕ್ಕೆ	₹625

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಎಂ.ಎಫ್ ಹೂಡಿಕೆ: ಭಯ ಬೇಡ

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

‘ಮ್ಯೂಚುಯಲ್ ಫಂಡ್ ಸಹಿ ಹೈ’ ಅನ್ನೋ ಅಭಿಯಾನ ದೊಡ್ಡ ಪ್ರಮಾಣದಲ್ಲಿ ಮ್ಯೂಚುಯಲ್ ಫಂಡ್ (ಎಂ.ಎಫ್) ಹೂಡಿಕೆ ಬಗ್ಗೆ ಜಾಗೃತಿ ಮೂಡಿಸುವಲ್ಲಿ ನೆರವಾಗಿದೆ. ಆದರೆ ಈಗಲೂ ಜನಸಾಮಾನ್ಯರು ಮ್ಯೂಚುಯಲ್ ಫಂಡ್ ಹೂಡಿಕೆ ಸುರಕ್ಷಿತವೇ? ಷೇರು ಮಾರುಕಟ್ಟೆಗಿಂತ ಇಲ್ಲಿ ರಿಸ್ಕ್ ಕಡಿಮೆ ಇರುವುದೇ? ಎಸ್‌ಐಪಿ ಹೂಡಿಕೆ ಶುರು ಮಾಡಬಹುದೇ? ನಿಶ್ಚಿತ ಠೇವಣಿಗಿಂತ (ಎಫ್‌ಡಿ) ಹೆಚ್ಚಿನ ಲಾಭ ಸಿಗುವುದೇ? ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳುತ್ತಾರೆ. ಅಂತಹ ಗೊಂದಲವನ್ನು ನಿವಾರಿಸುವ ಪ್ರಯತ್ನ ಈ ಲೇಖನದಲ್ಲಿದೆ.

ಮ್ಯೂಚುಯಲ್ ಫಂಡ್‌ನಲ್ಲಿ ವೃತ್ತಿಪರ ಫಂಡ್ ಮ್ಯಾನೇಜರ್ ನೆರವು: ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವಾಗ ನೀವೇ ಅರಿತು ಹೂಡಿಕೆ ಮಾಡಬೇಕಾಗುತ್ತದೆ. ಯಾವ ಷೇರು ಚೆನ್ನಾಗಿದೆ ಅಥವಾ ಚೆನ್ನಾಗಿಲ್ಲ ಎನ್ನುವ ನಿರ್ಧಾರ ಮಾಡಬೇಕಾಗುತ್ತದೆ. ಆದರೆ ಮ್ಯೂಚುಯಲ್ ಫಂಡ್ ಹೂಡಿಕೆ ಮಾಡುವವರಿಗೆ ವೃತ್ತಿಪರ ಫಂಡ್ ಮ್ಯಾನೇಜರ್‌ನ ನೆರವು ಸಿಗುತ್ತದೆ. ನಿರ್ದಿಷ್ಟ ಮ್ಯೂಚುಯಲ್ ಫಂಡ್ ಆಯ್ಕೆ ಮಾಡಿ ನಿಯಮಿತವಾಗಿ ನಿರ್ದಿಷ್ಟ ಮೊತ್ತವನ್ನು ಎಸ್‌ಐಪಿಯಲ್ಲಿ ಹೂಡಿಕೆ ಮಾಡುತ್ತಾ ಹೋದರೆ ಸಾಕು, ಆ ಹಣವನ್ನು ಯಾವ ಷೇರುಗಳ ಮೇಲೆ ಹೂಡಿಕೆ ಮಾಡಬೇಕು ಎನ್ನುವ ತೀರ್ಮಾನವನ್ನು ಫಂಡ್ ಮ್ಯಾನೇಜರ್ ತೆಗೆದುಕೊಳ್ಳುತ್ತಾರೆ. ಫಂಡ್ ಮ್ಯಾನೇಜರ್‌ಗಳು ಷೇರು ಹೂಡಿಕೆಗೆ ಬೇಕಾದ ಪರಿಣತಿ ಹೊಂದಿದ್ದು ಅದಕ್ಕೆ ಪೂರಕವಾದ ಅಧ್ಯಯನ ಮಾಡಿರುತ್ತಾರೆ. ಹಾಗಾಗಿ ಷೇರು ಮಾರುಕಟ್ಟೆಗೆ ಹೋಲಿಕೆ ಮಾಡಿ ನೋಡಿದರೆ ಇಲ್ಲಿ ರಿಸ್ಕ್ ಕಡಿಮೆ ಇರುತ್ತದೆ.

ಹತ್ತಾರು ಕಂಪನಿಗಳ ಮೇಲೆ ನಿಮ್ಮ ಮೊತ್ತ ಹೂಡಿಕೆ: ಷೇರುಗಳನ್ನು ನೇರವಾಗಿ ಖರೀದಿಸುವಾಗ ಕೆಲ ಕಂಪನಿಗಳ ಷೇರುಗಳನ್ನು ಮಾತ್ರ ಕೊಳ್ಳಲು ಸಾಧ್ಯ. ಆದರೆ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದಾಗ ನಿಮ್ಮ ಹಣ ಹತ್ತಾರು ಕಂಪನಿಗಳ ಮೇಲೆ ಹೂಡಿಕೆಯಾಗುತ್ತದೆ. ಉದಾಹರಣೆಗೆ ಐಸಿಐಸಿಐ ಪ್ರೂಡೆನ್ಶಿಯಲ್ ಬ್ಲೂಚಿಪ್ ಫಂಡ್‌ನಲ್ಲಿ ಒಟ್ಟು ₹54,904 ಕೋಟಿ ಹೂಡಿಕೆಯಾಗಿದೆ. ಈ ಮೊತ್ತವನ್ನು ಫಂಡ್ ಮ್ಯಾನೇಜರ್ ಒಟ್ಟು 69 ಕಂಪನಿಗಳ ಮೇಲೆ ಹೂಡಿಕೆ ಮಾಡಿದ್ದಾರೆ. ಅಂದರೆ ನೀವು ₹5 ಸಾವಿರ, ₹10 ಸಾವಿರ ಹೂಡಿಕೆ ಮಾಡಿದರೆ ಆ ಮೊತ್ತ ಫಂಡ್ ಮ್ಯಾನೇಜರ್ ನಿಗದಿ ಮಾಡಿರುವ 69 ಕಂಪನಿಗಳ ಮೇಲೆ ಹೂಡಿಕೆಯಾಗುತ್ತದೆ. ಹೀಗೆ ಹತ್ತಾರು ಕಂಪನಿಗಳ ಮೇಲೆ ಹೂಡಿಕೆಯಾದಾಗ ರಿಸ್ಕ್ ಕಡಿಮೆ ಇರುತ್ತದೆ. ಇದೇ ಮಾದರಿಯಲ್ಲಿ ಮ್ಯೂಚುಯಲ್ ಫಂಡ್‌ಗಳು ಹೂಡಿಕೆದಾರರ ಹಣವನ್ನು ಬೇರೆ ಬೇರೆ ಕಂಪನಿಗಳಲ್ಲಿ ತೊಡಗಿಸಿ ಹೂಡಿಕೆ ವೈವಿಧ್ಯ ಕಾಯ್ದುಕೊಳ್ಳುತ್ತವೆ.

ಎಫ್‌ಡಿಗಿಂತ ಜಾಸ್ತಿ ಲಾಭ ಸಿಗುವುದೇ?: ಮ್ಯೂಚುಯಲ್ ಫಂಡ್ ಹೂಡಿಕೆಗಳು ಹಣದುಬ್ಬರ (ಬೆಲೆ ಏರಿಕೆ) ಮೀರಿ ಲಾಭ ತಂದುಕೊಡುತ್ತವೆ. ವಾರ್ಷಿಕ ಸರಾಸರಿ ಶೇ 12ರಿಂದ ಶೇ 13ರಷ್ಟು ಲಾಭಾಂಶವನ್ನು ಮ್ಯೂಚುಯಲ್ ಫಂಡ್‌ಗಳಿಂದ ನಿರೀಕ್ಷೆ ಮಾಡಬಹುದು. ಎಫ್‌ಡಿ ಹೂಡಿಕೆಯಲ್ಲಿ ಹೆಚ್ಚೆಂದರೆ ಶೇ8ರಷ್ಟು ಬಡ್ಡಿ ಲಾಭ ಸಿಗಬಹುದು. ಬೆಲೆ ಏರಿಕೆ ಪ್ರಮಾಣವೇ ಶೇ 7ರ ಆಸುಪಾಸಿನಲ್ಲಿರುವಾಗ ಎಫ್‌ಡಿ ಹೂಡಿಕೆಯಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಹಾಗಾಗಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಮ್ಯೂಚುಯಲ್ ಫಂಡ್‌ಗಳ ಬಗ್ಗೆ ಅರಿತು ಎಸ್‌ಐಪಿ ಮೂಲಕ ಹೂಡಿಕೆ ಮಾಡಲು ಮುಂದಾಗುವುದು ಒಳ್ಳೆಯ ನಿರ್ಧಾರವಾಗುತ್ತದೆ.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಅನಿಶ್ಚಿತತೆ ನಡುವೆಯೂ ಜಿಗಿದ ಷೇರುಪೇಟೆ

ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಮತ್ತೆ ಗಳಿಕೆಯ ಲಯಕ್ಕೆ ಬಂದಿವೆ. ಮೇ 17ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಪುಟಿದೆದ್ದಿವೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಉತ್ಸಾಹ, ಅಮೆರಿಕ ಫೆಡರಲ್ ಬ್ಯಾಂಕ್ ಈ ವರ್ಷದ ದ್ವಿತೀಯಾರ್ಧದಲ್ಲಿ ಬಡ್ಡಿ ದರ ತಗ್ಗಿಸಬಹುದು ಎಂಬ ನಿರೀಕ್ಷೆ, ಕೇಂದ್ರದಲ್ಲಿ ಮತ್ತೆ ಬಿಜೆಪಿ ನೇತೃತ್ವದ ಸರ್ಕಾರ ರಚನೆ ಆಗಬಹುದೆಂಬ ವಿಶ್ವಾಸ, ತ್ರೈಮಾಸಿಕ ಫಲಿತಾಂಶಗಳಲ್ಲಿ ಮಿಶ್ರಫಲ, ಸಕಾರಾತ್ಮಕ ಮುಂಗಾರು ಸಾಧ್ಯತೆ ಸೇರಿ ಹಲವು ಅಂಶ ಸೂಚ್ಯಂಕಗಳ ಜಿಗಿತಕ್ಕೆ ಅನುವು ಮಾಡಿಕೊಟ್ಟಿವೆ. 73,917 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.7ರಷ್ಟು ಹೆಚ್ಚಳ ದಾಖಲಿಸಿದ್ದರೆ, 22,466 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.9ರಷ್ಟು ಹೆಚ್ಚಳ ಕಂಡಿದೆ.

ವಲಯವಾರು ಸೂಚ್ಯಂಕಗಳನ್ನು ನೋಡಿದಾಗ ಎಫ್‌ಎಂಸಿಜಿ ಹೊರತುಪಡಿಸಿ ಎಲ್ಲವೂ ಹೆಚ್ಚಳ ದಾಖಲಿಸಿವೆ. ನಿಫ್ಟಿ ಎಫ್‌ಎಂಸಿಜಿ ಸೂಚ್ಯಂಕ ಮಾತ್ರ ಶೇ 0.44 ರಷ್ಟು ಕುಸಿದಿದೆ. ನಿಫ್ಟಿ ರಿಯಲ್ ಎಸ್ಟೇಟ್ ಶೇ 6.33, ಮೆಟಲ್ ಶೇ 6.28, ಎನರ್ಜಿ ಶೇ 3.09, ಅನಿಲ ಮತ್ತು ತೈಲ ಶೇ 2.65, ಮಾಧ್ಯಮ ಶೇ 2.28, ಫಾರ್ಮಾ ಶೇ 2.01, ಆಟೊ ಶೇ 1.81, ಫೈನಾನ್ಸ್ ಶೇ 1.81, ಬ್ಯಾಂಕ್ ಶೇ 1.47, ಐಟಿ ಶೇ 1.37 ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 0.57 ರಷ್ಟು ಗಳಿಸಿಕೊಂಡಿವೆ.

ಹೆಚ್ಚಳ - ಇಳಿಕೆ: ನಿಫ್ಟಿ ಸೂಚ್ಯಂಕದಲ್ಲಿ ಮಹೀಂದ್ರ ಅಂಡ್ ಮಹೀಂದ್ರ ಭಾರಿ ಜಿಗಿತ ಕಂಡು ಶೇ 14.67ರಷ್ಟು ಗಳಿಸಿಕೊಂಡಿದೆ. ಅದಾನಿ ಎಂಟರ್‌ ಪ್ರೈಸಸ್ ಶೇ 9.25, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 6.27, ಎಲ್ ಆ್ಯಂಡ್ ಟಿ ಶೇ 5.53, ಅದಾನಿ ಪೋರ್ಟ್ಸ್ ಶೇ 5.5, ಹಿಂಡಾಲ್ಕೋ ಇಂಡಸ್ಟ್ರೀಸ್ ಶೇ 4.74, ಕೋಲ್ ಇಂಡಿಯಾ ಶೇ 4.66, ಸಿಪ್ಲಾ ಶೇ 4.47 ಮತ್ತು ಹೀರೋ ಮೋಟೋ ಕಾರ್ಪ್ ಶೇ 4.38ರಷ್ಟು ಜಿಗಿದಿವೆ. ಮತ್ತೊಂದೆಡೆ ಟಾಟಾ ಮೋಟರ್ಸ್ ಶೇ 9.66 ರಷ್ಟು ಕುಸಿದಿದೆ. ನೆಸ್ಲೆ ಇಂಡಿಯಾ ಶೇ 3.41, ಬಜಾಜ್ ಆಟೊ ಶೇ 2.27, ಡಾ ರೆಡ್ಡೀಸ್ ಲ್ಯಾಬ್ಸ್ ಶೇ 1.94, ಹಿಂದೂಸ್ತಾನ್ ಯೂನಿಲಿವರ್ ಶೇ 1.6, ಟಿಸಿಎಸ್ ಶೇ 1.59, ಮಾರುತಿ ಸುಜುಕಿ ಶೇ 0.44 ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶೇ 0.06 ರಷ್ಟು ಇಳಿಕೆಯಾಗಿವೆ.

ಮುನ್ನೋಟ: ಷೇರುಪೇಟೆಯಲ್ಲಿ ಚುನಾವಣೆ ಫಲಿತಾಂಶದವರೆಗೂ ಅನಿಶ್ಚಿತ ವಾತಾವರಣ ಮುಂದುವರಿಯಲಿದೆ. ಐಟಿಸಿ, ಪೇಜ್ ಇಂಡಸ್ಟ್ರೀಸ್, ಫಿನೋಲೆಕ್ಸ್ ಕೇಬಲ್ಸ್, ಭಾರತ್ ಎಲೆಕ್ಟ್ರಾನಿಕ್ಸ್, ಕರ್ನಾಟಕ ಬ್ಯಾಂಕ್, ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ, ಬಿಎಚ್‌ಇಎಲ್, ಐಆರ್‌ಎಫ್‌ಸಿ, ಒಎನ್‌ಜಿಸಿ, ಎನ್‌ಎಂಡಿಸಿ ಸೇರಿ ಕೆಲ ಕಂಪನಿಗಳು ತ್ರೈಮಾಸಿಕ ಸಾಧನೆ ವರದಿ ಪ್ರಕಟಿಸಲಿವೆ.

ಮೇ 18ರ ವಹಿವಾಟು: ಮೇ 18ರಂದು ನಡೆದ ವಿಶೇಷ ವಹಿವಾಟಿನಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಏರಿಕೆ ದಾಖಲಿಸಿವೆ. 74,005 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಶೇ 0.12ರಷ್ಟು ಏರಿಕೆ ಕಂಡಿದ್ದರೆ, 22,502 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ0.16ರಷ್ಟು ಪಡೆದುಕೊಂಡಿದೆ.

ಭಾರತೀಯ ಕೈಗಾರಿಕಾ ಒಕ್ಕೂಟದ ಅಧ್ಯಕ್ಷರಾಗಿ ಸಂಜೀವ್ ಪುರಿ ಅಧಿಕಾರ ಸ್ವೀಕಾರ

ನವದೆಹಲಿ (ಪಿಟಿಐ): ಐಟಿಸಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸಂಜೀವ್ ಪುರಿ 2024–25ನೇ ಸಾಲಿಗೆ ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ಟಿವಿಎಸ್ ಸಪ್ಲೈ ಚೈನ್ ಸಲ್ಯೂಷನ್ಸ್‌ನ ಅಧ್ಯಕ್ಷ ಆರ್. ದಿನೇಶ್ ಅವರಿಂದ ಪುರಿ ಅಧಿಕಾರ ವಹಿಸಿಕೊಂಡರು ಎಂದು ಮಂಡಳಿ ಭಾನುವಾರ ತಿಳಿಸಿದೆ.

ಪುರಿ ಅವರು ಐಟಿಸಿ ಇನ್ಫೋಟೆಕ್ ಇಂಡಿಯಾ ಲಿಮಿಟೆಡ್, ಬ್ರಿಟನ್ ಮತ್ತು ಅಮೆರಿಕದಲ್ಲಿನ ಅದರ ಅಂಗಸಂಸ್ಥೆಗಳು ಹಾಗೂ ಸೂರ್ಯ ನೇಪಾಲ್ ಪ್ರೈವೆಟ್ ಲಿಮಿಟೆಡ್‌ನ ಅಧ್ಯಕ್ಷರೂ ಆಗಿದ್ದಾರೆ.

ಟಾಟಾ ಕೆಮಿಕಲ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಆರ್. ಮುಕುಂದನ್ ಉಪಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು.

ಎಲ್‌ಐಸಿ ಎಂ–ಕ್ಯಾಪ್ ₹6.16 ಲಕ್ಷ ಕೋಟಿಗೆ ಏರಿಕೆ

ನವದೆಹಲಿ (ಪಿಟಿಐ): ಕಳೆದ ವಾರ ನಡೆದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 1,341 ಅಂಶ (ಶೇ1.84) ಹೆಚ್ಚಳವಾಗಿದೆ.

ಇದರಿಂದ ಪ್ರಮುಖ 10 ಕಂಪನಿಗಳ ಪೈಕಿ ಎಂಟು ಕಂಪನಿಗಳ ಮಾರುಕಟ್ಟೆ ಮೌಲ್ಯ (ಎಂ–ಕ್ಯಾಪ್) ₹1.47 ಲಕ್ಷ ಕೋಟಿಯಷ್ಟು ಏರಿಕೆ ಆಗಿದೆ.

ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಮಾರುಕಟ್ಟೆ ಮೌಲ್ಯಕ್ಕೆ ₹40,163 ಕೋಟಿ ಸೇರ್ಪಡೆ ಆಗಿದ್ದು, ಒಟ್ಟು ಎಂ–ಕ್ಯಾಪ್ ₹6.16 ಲಕ್ಷ ಕೋಟಿಗೆ ಏರಿಕೆ ಆಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ₹36,467 ಕೋಟಿ, ಭಾರ್ತಿ ಏರ್‌ಟೆಲ್ ₹26,492 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹21,136 ಕೋಟಿ, ಐಸಿಐಸಿಐ ಬ್ಯಾಂಕ್ ₹9,570 ಕೋಟಿ ಮತ್ತು ಇನ್ಫೊಸಿಸ್ ₹7,815 ಕೋಟಿ, ಐಟಿಸಿ ₹4,057 ಕೋಟಿ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮಾರುಕಟ್ಟೆ ಮೌಲ್ಯ ₹2,231 ಕೋಟಿ ಹೆಚ್ಚಳವಾಗಿದೆ.

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ₹16,588 ಕೋಟಿ ಮತ್ತು ಹಿಂದೂಸ್ತಾನ್ ಯೂನಿಲಿವರ್ ಲಿಮಿಟೆಡ್ ₹6,978 ಕೋಟಿ ಮಾರುಕಟ್ಟೆ ಮೌಲ್ಯ ಇಳಿಕೆ ಕಂಡಿದೆ.

ಕಾಂಗೊದಲ್ಲಿ ದಂಗೆ ವಿಫಲಗೊಳಿಸಿದ ಸೇನೆ

ಕಿನ್ಶಾಸಾ (ಕಾಂಗೊ) (ಎಪಿ): ಕಾಂಗೊ ಗಣರಾಜ್ಯದ (ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೊ) ಆಡಳಿತಾರೂಢ ಸರ್ಕಾರವನ್ನು ಉರುಳಿಸಲು ಭಾನುವಾರ ನಸುಕಿನಲ್ಲಿ ನಡೆಸಿರುವ ದಂಗೆಯನ್ನು ವಿಫಲಗೊಳಿಸಲಾಗಿದ್ದು, ಹಲವು ಮಂದಿ ದಂಗೆಕೋರರನ್ನು ಬಂಧಿಸಲಾಗಿದೆ ಎಂದು ಕಾಂಗೊ ಸೇನೆ ಹೇಳಿದೆ.

ರಾಜಧಾನಿ ಕಿನ್ಶಾಸಾದಲ್ಲಿ ಹಲವಾರು ವಿದೇಶಿಯರನ್ನು ಒಳಗೊಂಡಂತೆ, ಸೇನಾ ಸಮವಸ್ತ್ರದಲ್ಲಿದ್ದ ಶಸ್ತ್ರಧಾರಿಗಳು ಮತ್ತು ಕಾಂಗೊ ಅಧ್ಯಕ್ಷರ ಅಂಗರಕ್ಷಕರ ನಡುವಿನ ಗುಂಡಿನ ಚಕಮಕಿಯ ವೇಳೆ ಮೂರು ಜನರು ಹತರಾಗಿದ್ದಾರೆ.

‘ದಂಗೆಯ ಯತ್ನವನ್ನು ಕಾಂಗೊದ ರಕ್ಷಣಾ ಮತ್ತು ಭದ್ರತಾ ಪಡೆಗಳು ಹತ್ತಿಕ್ಕಿವೆ. ಪರಿಸ್ಥಿತಿಯು ನಿಯಂತ್ರಣದಲ್ಲಿದೆ’ ಎಂದು ಕಾಂಗೊ ಸೇನೆಯ ವಕ್ತಾರ ಬ್ರಿಗೇಡಿಯರ್ ಜನರಲ್ ಸಿಲ್ವೈನ್ ಎಕೆಂಗೆ ಅವರು ನೀಡಿರುವ ಹೇಳಿಕೆಯನ್ನು ಸರ್ಕಾರದ ಸುದ್ದಿ ವಾಹಿನಿ ಭಾನುವಾರ ಪ್ರಸಾರ ಮಾಡಿದೆ.

ರಾಜಧಾನಿಯಲ್ಲಿ ನಸುಕಿನ 4.30ರ ಸುಮಾರಿಗೆ ಕಾಂಗೊದ ರಾಷ್ಟ್ರೀಯ ಅಸೆಂಬ್ಲಿ ಸ್ಪೀಕರ್ ಅಭ್ಯರ್ಥಿ ವೈಟಲ್ ಕಮರ್‌ಹಿ ಅವರ ನಿವಾಸದ ಮೇಲೆ ಮಿಲಿಟರಿ ಸಮವಸ್ತ್ರದಲ್ಲಿದ್ದ ಬಂಡುಕೋರರು ದಾಳಿ ನಡೆಸಿದರು. ಅವರನ್ನು ಭದ್ರತಾ ಸಿಬ್ಬಂದಿ ತಡೆದಾಗ ಇಬ್ಬರು ಪೊಲೀಸರು ಸಾವಿಗೀಡಾಗಿದ್ದು, ಒಬ್ಬ ದಾಳಿಕೋರ ಹತನಾಗಿದ್ದಾನೆ. ಸದ್ಯ ಕಮರ್‌ಹಿ ಮತ್ತವರ ಕುಟುಂಬದವರು ಸುರಕ್ಷಿತವಾಗಿದ್ದು, ಅವರಿಗೆ ಸೇನೆ ಹೆಚ್ಚಿನ ಭದ್ರತೆ ಒದಗಿಸಿದೆ ಎಂದು ವೈಟಲ್ ಅವರ ವಕ್ತಾರ ಮೈಕೆಲ್ ಮೋಟೊ ಮುಹಿಮ ಹೇಳಿದ್ದಾರೆ.

70th Birthday

SRI. R. AMBIKAPATHY
Former Vice President, Karnataka State Contractors Association
Former President, BBMP Contractors Association
20.05.1954 – 27.11.2023
You may not be with us anymore but our love for you will never die
We miss you Daddy...
Fondly Remembered by:
Family Members & Friends

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಬಸ್ ಚಾಲಕರು ಬೇಕಾಗಿದ್ದಾರೆ
ಅರ್ಹತೆ:
• ಹೆವಿ ಮೋಟಾರ್ ವಾಹನ ಚಾಲಕರಾಗಿ 2 ವರ್ಷಗಳ ಅನುಭವ ಹೊಂದಿರಬೇಕು/ ಕರ್ನಾಟಕದ ಮಾನ್ಯತೆ ಪಡೆದಿರುವ ಸರಕು ವಾಹನ ಬ್ಯಾಡ್ಜ್ ಹೊಂದಿರಬೇಕು.
• 7ನೇ ತರಗತಿ ಉತ್ತೀರ್ಣರಾಗಿರಬೇಕು.
• ವೇತನ: ರೂ.23,000/– (ಇಎಸ್‌ಐ ಮತ್ತು ಇಪಿಎಫ್ ಸೌಲಭ್ಯವಿರುತ್ತದೆ).
ಸಂಪರ್ಕಿಸಬೇಕಾದ ದೂರವಾಣಿ:
ಚಿಕ್ಕಬಳ್ಳಾಪುರ: 77952 24245, ತುಮಕೂರು: 95388 66744
ಶಿವಮೊಗ್ಗ: 84949 00181
ಮಂಡ್ಯ, ರಾಮನಗರ, ಮೈಸೂರು, ಚಾಮರಾಜನಗರ: 80509 80889, 86188 76846

Cook

VACANCY FOR Dosa Master / South Indian Chef in Goa. Salary + Accommodation + Food Location - Panaji Goa Contact - 9513314398

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಯಿದೆ. 13,000-17,000. 8951315839, 7022770052

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555/ 9663563555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವಮೊಗ್ಗ 8095555517

EDUCATION CORNER ಕ್ಲಾಸಿಫೈಡ್ಸ್

B.Com
BCA
BBA
BBA Aviation Management
B.Sc. Aircraft Maintenance
Approved by AICTE & Affiliated to Bengaluru North University
Eligibility: 12th Std. or Diploma (DTE approved)
HINDUSTAN AVIATION ACADEMY
Approved by Directorate General of Civil Aviation, Govt. of India
Aircraft Maintenance Engineering
• B1.1 Aeroplane Turbine
• B2 Avionics
• B.Sc. Aircraft Maintenance
Eligibility: 12th Std. with PCM or Diploma (DTE approved)
HINDUSTAN ELECTRONICS ACADEMY
Approved by DTE & AICTE
Polytechnic Diploma Engineering
Eligibility: 10th Std.
• Aeronautical Engineering
• Mechanical Engineering
• Computer Science Engineering
97400 37853 / 63645 44814
HBS HINDUSTAN BUSINESS SCHOOL
MARATHAHALLI, BENGALURU
Ashwathnagar, Marathahalli, Bengaluru - 560037
Ph: 080-25238650, 25232217
E: admissions@hindustanacademy.edu.in
www.hindustanacademy.edu.in
ADMISSIONS ARE OPEN FOR 2024-25
SCAN QR CODE FOR MORE DETAILS

ಭವಿಷ್ಯ

Astrology

★ಜೀವನದ ಸರ್ವತೋಮುಖ ಅಭಿವೃದ್ಧಿಗಾಗಿ,ನಿಮ್ಮ ಯಾವುದೇ ಹೆಣ್ಣು ಅಥವಾ ಗಂಡು ಸಂಬಂಧಿತ ಸಂಪೂರ್ಣ ಮನಇಚ್ಛೆ ವಶೀಕರಣ, ದಾಂಪತ್ಯ,ಸಂತಾನ,ಆರೋಗ್ಯ,ಹಣ, ಆಸ್ತಿ,ಮತ್ತು ಇನ್ನಿತರ ನಿಮ್ಮ ಯಾವುದೇ ಇಷ್ಟಾರ್ಥಫಲಪ್ರಾಪ್ತಿ 3ದಿನಗಳಲ್ಲಿ ಲಭ್ಯ. 9845005009*

★||ಸ್ತ್ರೀಪುರುಷ ವಶೀಕರಣ||★ ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ, ಇಷ್ಟಪಟ್ಟವರು ನಿಮ್ಮಂತೆ ಆಗಲು, 1ದಿನದಲ್ಲಿ ಪರಿಹಾರ ಶತಸಿದ್ಧ. 9611968471

ಪ್ರವಾಸ

Travel

ದೆಹಲಿ ಯಮುನೋತ್ರಿ, ಗಂಗೋತ್ರಿ ಕೇದಾರನಾಥ್ ಬದರಿನಾಥ್ ಹರಿದ್ವಾರ್, 09.06.2024 23.06.2024 ರಿಂದ 14 ದಿನಗಳು. ಅಯೋಧ್ಯ,ಪ್ರಯಾಗ್ ಕಾಶಿ,ಗಯಾ,ಬೈದ್ಯನಾಥಧಾಮ್ 03.06.2024 ರಿಂದ 8 ದಿನಗಳು. ಸ್ವಯಂಭೂ ಅಮರನಾಥ್ ಕಾಶ್ಮೀರ್ ಅಮೃತಸರ್ ಕುರುಕ್ಷೇತ್ರ 14 ದಿನಗಳು. ಮತ್ತು ನೇಪಾಳ ಮುಕ್ತಿನಾಥ, ಜನಕಪುರ್ ಬೈದ್ಯನಾಥಧಾಮ್ 11 ದಿನಗಳು 03.07.2024 ರಿಂದ ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

ಸುಸಜ್ಜಿತ ವ್ಯವಸ್ಥೆಗಳೊಂದಿಗೆ 30.06.2024 ರಿಂದ 12 ದಿನಗಳ ಅಮರನಾಥ್ ಯಾತ್ರೆ. 11.06.2024 13.09.2024 25.09.2024 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ. 09.09.2024 14.10.2024 ರಿಂದ 8/12 ದಿನಗಳ ಕಾಶಿ,ಗಯಾ,ಅಯೋಧ್ಯಾ 05.10.2024 17.10.2024 ರಿಂದ 8/12 ದಿನಗಳ ಸಿಮ್ಲಾ,ಮನಾಲಿ. 09.09.2024 02.10.2024 ರಿಂದ 11 ದಿನಗಳ ಅಯೋಧ್ಯ ಮುಕ್ತಿನಾಥ ನೇಪಾಳ ಕಾಶಿ 17.10.2024 26.11.2024 07.12.2024 ರಿಂದ 11 ದಿನಗಳ ಮಧ್ಯಪ್ರದೇಶ. 14.10.2024 07.11.2024 26.11.2024 ರಿಂದ 8/11 ದಿನಗಳ ಗುಜರಾತ್ ರಾಜಸ್ಥಾನ. 21.07.2024 25.09.2024 ರಿಂದ 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. ಪ್ರವಾಸಗಳು.ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

08.06.2024, 14.06.2024 ಚಾರ್-ಧಾಮ್ ಸಮೇತಪ್ರವಾಸ. 26.06.2024 ಕಾಶಿ, ಅಯೋಧ್ಯಾ,ಬುದ್ಧಗಯಾ. 28.06.2024, 11.07.2024 ವೈಷ್ಣೋದೇವಿ,ವಾಘಬಾರ್ಡರ್, ಕಾಶ್ಮೀರ, ಗುಲ್ಮಾರ್ಗ್,ಅಮರನಾಥ್ ಇತ್ಯಾದಿ.ಸಂಪರ್ಕಿಸಿ. ವಿಷ್ಣು ಟ್ರಾವಲ್‌ಏಜೆನ್ಸಿ, ಕೆಳಮಹಡಿ, ಬೆಂಗಳೂರು-4. 26574131, 7204173686, 8431888138

ಸುವರ್ಣ ಯಾತ್ರ, ಚಾರ್ಧಾಮ ಯಾತ್ರ, ಕೇದಾರನಾಥ ಬದ್ರಿನಾಥ್, ಗಂಗೋತ್ರಿ ಯಮುನೋತ್ರಿ, ದೆಹಲಿ ಹರಿದ್ವಾರ ಋಷಿಕೇಶ್. 13 ದಿನಗಳು 7/6/2023. 9019462508 8660233673

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
DIPLOMA IN COMPUTER DATA ENTRY OPERATOR
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
The RCSS
Mob. 9008419955, 9901520055, 9449198555
www.thercss.com Email : info@thercss.com

Pilgrimage Tours

12.07.2024 13/17ದಿನಗಳು ರೈಲು/ವಿಮಾನದಲ್ಲಿ ಅಮರನಾಥ್, ವೈಷ್ಣೋದೇವಿ, ಕಾಶ್ಮೀರ,ಕುರುಕ್ಷೇತ್ರ ಆಗ್ರ,ದೆಹಲಿ ಇತ್ಯಾದಿ 28000/ ಮೇ,ಜುನ್ ನಲ್ಲಿ 5/8ದಿನಗಳು ಹಡಗು/ವಿಮಾನದಲ್ಲಿ ಅಂಡಮಾನ್ ಹವಳದ್ವೀಪ. Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'. 9739847429/ 9845560219

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 5/6/24 ಕಾಶಿ ಪ್ರವಾಸ ಗಯಾ, ಅಯೋಧ್ಯೆ ಪ್ರಯಾಗ್ರಾಜ್. 12/6/24 ನೇಪಾಳ ಮುಕ್ತಿನಾಥ್, ಪಶುಪತಿನಾ ಅಯೋಧ್ಯೆ. 9964527782, 9591017782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮೆರವಣಿಗೆಯನ್ನು ಮಾರ್ಗ ಮಧ್ಯದಲ್ಲಿ ತಡೆದ ಪೊಲೀಸರು • ಬಂಧಿಸಲು ಪ್ರಧಾನಿಗೆ ಭಯ– ಎಎಪಿ

‘ಎಎಪಿ ತುಳಿಯಲು ಆಪರೇಷನ್ ಝಾಡು’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದೇಶದಲ್ಲಿ ಕೇಸರಿ ಪಾಳಯಕ್ಕೆ ಸವಾಲಾಗಿ ಬೆಳೆಯುತ್ತಿರುವ ಎಎಪಿಯನ್ನು ಹತ್ತಿಕ್ಕಲು ಆಡಳಿತಾರೂಢ ಬಿಜೆಪಿಯು ‘ಆಪರೇಷನ್ ಝಾಡು’ ಹಮ್ಮಿಕೊಂಡಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾನುವಾರ ಆರೋಪಿಸಿದರು. ‘ಝಾಡು’ ಅಂದರೆ ಪೊರಕೆ. ಅದು ಎಎಪಿಯ ಚುನಾವಣಾ ಚಿಹ್ನೆ.

ಬಿಜೆಪಿ ಕೇಂದ್ರ ಕಚೇರಿಗೆ ಪ್ರತಿಭಟನಾ ಮೆರವಣಿಗೆ ಸಾಗುವ ವೇಳೆ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಪಕ್ಷದ ಕಾರ್ಯಕರ್ತರು ದೊಡ್ಡ ಸವಾಲಿಗೆ ಸಿದ್ಧರಾಗಬೇಕು. ಈ ರೀತಿಯ ಹಲವು ಅಡೆತಡೆಗಳನ್ನು ಹಿಂದೆ ಎದುರಿಸಿ ನಾವು ಮುಂದೆ ಸಾಗಿದ್ದೇವೆ ಎಂಬುದನ್ನು ನೆನಪಿಡಿ’ ಎಂದು ಅವರು ಹೇಳಿದರು.

‘ಎಎಪಿ ಕಟ್ಟಿ ಹಾಕಲು ಬಿಜೆಪಿ ತಂತ್ರ’: ‘ಎಎಪಿಯನ್ನು ಕಟ್ಟಿಹಾಕಲು ಮೂರು ಬಗೆಯ ಕಾರ್ಯತಂತ್ರವನ್ನು ಬಿಜೆಪಿ ರೂಪಿಸಿದೆ. ಮೊದಲಿಗೆ ಎಎಪಿ ನಾಯಕರನ್ನು ಬಂಧಿಸುವುದು, ನಂತರ ಪಕ್ಷದ ಖಾತೆಗಳನ್ನು ಸ್ಥಗಿತಗೊಳಿಸುವುದು, ಬಳಿಕ ಪಕ್ಷದ ಕಚೇರಿಯಿಂದ ಹೊರಹಾಕುವುದು ಇದರಲ್ಲಿ ಸೇರಿವೆ’ ಎಂದು ಕೇಜ್ರಿವಾಲ್ ವಿವರಿಸಿದರು.

‘ದೇಶದಾದ್ಯಂತ ಎಎಪಿಯ ಕ್ಷಿಪ್ರಗತಿಯ ಬೆಳವಣಿಗೆಯಿಂದ ಪ್ರಧಾನಿ ನರೇಂದ್ರ ಮೋದಿ ಚಿಂತಿತರಾಗಿದ್ದಾರೆ. ಹೀಗಾಗಿಯೇ ಅವರು ನಮ್ಮ ಪಕ್ಷವನ್ನು ತುಳಿಯಲು ಆಪರೇಷನ್ ಝಾಡು (ಪೊರಕೆ) ಆರಂಭಿಸಿದ್ದಾರೆ. ಈ ಮೂಲಕ ಮುಂದಿನ ದಿನಗಳಲ್ಲಿ ನಮ್ಮ ನಾಯಕರನ್ನು ಬಂಧಿಸುವ, ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸುವ ಮತ್ತು ಕಚೇರಿಯಿಂದ ಹೊರದಬ್ಬುವ ಯೋಜನೆ ಅವರದ್ದಾಗಿದೆ’ ಎಂದು ಅವರು ಹೇಳಿದರು.

‘ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ನಮಗೆ ಭಗವಾನ್ ಹನುಮಂತ ಮತ್ತು ದೇವರ ಆಶೀರ್ವಾದವಿದೆ. ಸಮಾಜಕ್ಕಾಗಿ ಕೆಲಸ ಮಾಡಲು ನಾವು ಬಯಸುತ್ತಿರುವುದರಿಂದ ಸತ್ಯದ ಹಾದಿಯಲ್ಲಿ ಸಾಗೋಣ’ ಎಂದು ಅವರು ಕರೆ ನೀಡಿದರು.

ಎಎಪಿ ಸಂಸದೆ ಸ್ವಾತಿ ಮಾಲಿವಾಲ್ ಅವರ ಮೇಲಿನ ಹಲ್ಲೆ ಪ್ರಕರಣದಲ್ಲಿ ಶನಿವಾರ ತಮ್ಮ ಆಪ್ತ ಸಹಾಯಕ ಬಿಭವ್ ಕುಮಾರ್ ಅವರನ್ನು ಬಂಧಿಸಿದ ಬಳಿಕ ಕೇಜ್ರಿವಾಲ್ ಅವರು, ‘ಬಿಜೆಪಿ ಕೇಂದ್ರ ಕಚೇರಿಗೆ ಪಕ್ಷದ ನಾಯಕರೊಂದಿಗೆ ಭಾನುವಾರ ಮೆರವಣಿಗೆ ಸಾಗಲಾಗುವುದು. ಪ್ರಧಾನಿ ಮೋದಿ ಅವರು ನಮ್ಮಲ್ಲಿ ಯಾರನ್ನಾದರೂ ಬಂಧಿಸುವ ಧೈರ್ಯ ತೋರಲಿ’ ಎಂದು ಸವಾಲು ಹಾಕಿದ್ದರು.

‘ಬಂಧಿಸದಿದ್ದರೆ ನೀವು ಸೋತಂತೆ’: ಭಾನುವಾರ ಮೆರವಣಿಗೆ ಆರಂಭಕ್ಕೂ ಮುನ್ನ ಅವರು, ‘ಮೆರವಣಿಗೆಯು ಶಾಂತಿಯುತವಾಗಿ ಇರುತ್ತದೆ. ಪೊಲೀಸರು ತಡೆದರೆ, ಅದೇ ಸ್ಥಳದಲ್ಲಿ 30 ನಿಮಿಷ ಕುಳಿತುಕೊಂಡು ಕಾಯುತ್ತೇವೆ. ಈ ಅವಧಿಯಲ್ಲಿ ನಮ್ಮಲ್ಲಿ ಯಾರನ್ನಾದರೂ ಬಂಧಿಸುತ್ತಾರೆಯೋ ಎಂಬುದನ್ನು ನೋಡುತ್ತೇವೆ. ಒಂದು ವೇಳೆ ಅವರು ನಮ್ಮನ್ನು ಬಂಧಿಸದಿದ್ದರೆ ಅದು ಅವರ ಸೋಲಾಗುತ್ತದೆ’ ಎಂದು ಹೇಳಿದರು.

‘ನಮ್ಮೆಲ್ಲರನ್ನೂ ಜೈಲಿಗೆ ಕಳುಹಿಸಿ ನೋಡಿ. ಇದರಿಂದ ಪಕ್ಷ ಕೊನೆಗೊಳ್ಳುತ್ತದೆಯೋ ಅಥವಾ ಇನ್ನಷ್ಟು ಬಲಿಷ್ಠವಾಗಿ ಪುಟಿದೇಳುತ್ತದೆಯೋ’ ಎಂದು ಅವರು ಪ್ರಧಾನಿಗೆ ಸವಾಲು ಹಾಕಿದರು.

‘ನೀವು ಒಬ್ಬ ನಾಯಕನನ್ನು ಬಂಧಿಸಿದರೆ ಭಾರತ ಮಾತೆ 100 ನಾಯಕರಿಗೆ ಜನ್ಮ ನೀಡುತ್ತಾಳೆ; ಒಬ್ಬ ಕೇಜ್ರಿವಾಲ್ ಅನ್ನು ಬಂಧಿಸಿದರೆ, ಆ ತಾಯಿ ನೂರಾರು ಮತ್ತು ಸಾವಿರಾರು ಕೇಜ್ರಿವಾಲ್‌ಗಳಿಗೆ ಜನ್ಮ ನೀಡುತ್ತಾಳೆ. ನೀವು ಬೇಕಿದ್ದರೆ ನಿಮ್ಮ ಅದೃಷ್ಟವನ್ನು ಪರೀಕ್ಷಿಸಿ ನೋಡಿ’ ಎಂದು ಹೇಳಿದರು.

‘ಪ್ರಧಾನಿಗೆ ಭಯ’: ಕೇಜ್ರಿವಾಲ್ ಅವರ ಭಾಷಣದ ಬಳಿಕ, ಅವರ ನೇತೃತ್ವದಲ್ಲಿ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಬಿಜೆಪಿ ಕಚೇರಿಯತ್ತ ಮೆರವಣಿಗೆ ಸಾಗಿದರು. ಮೆರವಣಿಗೆಯನ್ನು ಮಾರ್ಗ ಮಧ್ಯದಲ್ಲಿ ಪೊಲೀಸರು ತಡೆದರು. ಅರ್ಧ ಗಂಟೆಯ ಬಳಿಕ ಎಎಪಿಯ ಹಿರಿಯ ನಾಯಕ ಸಂಜಯ್ ಸಿಂಗ್ ಅವರು, ‘ಭಯಭೀತರಾಗಿರುವ ಪ್ರಧಾನಿ ಅವರು ನಮ್ಮನ್ನು ಬಂಧಿಸಲು ಆದೇಶಿಸಿಲ್ಲ’ ಎಂದು ಹೇಳಿ ಪ್ರತಿಭಟನೆಯನ್ನು ಅಂತ್ಯಗೊಳಿಸುತ್ತಿರುವುದಾಗಿ ಘೋಷಿಸಿದರು.

ನವದೆಹಲಿಯಲ್ಲಿ ಬಿಜೆಪಿ ಕೇಂದ್ರ ಕಚೇರಿಯತ್ತ ಪ್ರತಿಭಟನಾ ಮೆರವಣಿಗೆಯಲ್ಲಿ ಸಾಗುತ್ತಿದ್ದ ಎಎಪಿ ನಾಯಕರು ಮತ್ತು ಕಾರ್ಯಕರ್ತರನ್ನು ಪೊಲೀಸರು ಮಾರ್ಗ ಮಧ್ಯೆ ತಡೆದರು —ಪಿಟಿಐ ಚಿತ್ರ

ಪಕ್ಷದ ವರ್ಚಸ್ಸಿಗೆ ಮಸಿ ಬಳಿಯಲು ಯತ್ನ: ಎಎಪಿ ಆರೋಪ

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನಿವಾಸದೊಳಗಿನ ಸಿ.ಸಿ.ಟಿ.ವಿ ಕ್ಯಾಮೆರಾಗಳ ಡಿವಿಆರ್‌ಗಳನ್ನು ವಶಪಡಿಸಿಕೊಂಡಿರುವ ಪೊಲೀಸರು, ಚುನಾವಣೆಗೂ ಮುನ್ನ ಎಎಪಿಯ ವರ್ಚಸ್ಸಿಗೆ ಮಸಿ ಬಳಿಯಲು ಯತ್ನಿಸುತ್ತಿದ್ದಾರೆ ಎಂದು ಎಎಪಿ ನಾಯಕ, ದೆಹಲಿ ಸಚಿವ ಸೌರಭ್ ಭಾರದ್ವಾಜ್ ಆರೋಪಿಸಿದರು.

‘ಸಿ.ಎಂ ನಿವಾಸದ ಪ್ರವೇಶ ದ್ವಾರ, ಗಡಿ ಗೋಡೆಗಳಲ್ಲಿನ ಕ್ಯಾಮೆರಾಗಳ ಡಿವಿಆರ್‌ಗಳನ್ನು ಶನಿವಾರವೇ ವಶಕ್ಕೆ ಪಡೆದಿದ್ದ ಪೊಲೀಸರು, ಭಾನುವಾರ ಮನೆಯ ಇತರ ಭಾಗಗಳಲ್ಲಿನ ಕ್ಯಾಮೆರಾಗಳ ಡಿವಿಆರ್‌ಗಳನ್ನು ವಶಕ್ಕೆ ಪಡೆದರು’ ಎಂದ ಅವರು, ‘ಪೊಲೀಸರು ಈಗ ದೃಶ್ಯಾವಳಿಯ ತುಣುಕುಗಳನ್ನು ಅಳಿಸಲಾಗಿದೆ ಎಂದು ಕತೆ ಕಟ್ಟುತ್ತಿದ್ದಾರೆ’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು. ‘ಈ ಪ್ರಕರಣದ ಎಫ್‌ಐಆರ್ ಎಲ್ಲ ಕಡೆ ಹರಿದಾಡಿದೆ. ಆದರೆ ಆರೋಪಿ ಬಿಭವ್ ಕುಮಾರ್, ಎಎಪಿ ಬಳಿ ಈ ಎಫ್‌ಐಆರ್ ಪ್ರತಿ ಇಲ್ಲ’ ಎಂದು ಪ್ರತಿಕ್ರಿಯಿಸಿದರು.

ಸಿ.ಸಿ.ಟಿ.ವಿ ಡಿವಿಆರ್ ವಶ

ಎಎಪಿ ಸಂಸದೆ ಸ್ವಾತಿ ಮಾಲಿವಾಲ್ ಅವರ ಮೇಲಿನ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರ ತಂಡವು ಭಾನುವಾರ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಅಧಿಕೃತ ನಿವಾಸದ ಸಿ.ಸಿ.ಟಿ.ವಿ ಡಿವಿಆರ್ (ಡಿಜಿಟಲ್ ವಿಡಿಯೊ ರೆಕಾರ್ಡರ್) ಸೇರಿದಂತೆ ಎಲೆಕ್ಟ್ರಾನಿಕ್ ಸಾಧನಗಳನ್ನು ಸಂಗ್ರಹಿಸಿದೆ.

ಸಿ.ಎಂ ನಿವಾಸದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ತಿರುಚಲಾಗಿದೆ ಎಂದು ಮಾಲಿವಾಲ್ ಆರೋಪಿಸಿದ್ದಾರೆ.

ದಲಿತ ದಂಪತಿಗೆ ಥಳಿತ

ಅಶೋಕ್ ನಗರ (ಮಧ್ಯಪ್ರದೇಶ) (ಪಿಟಿಐ): ವಯಸ್ಸಾದ ದಲಿತ ದಂಪತಿಯ ಕೊರಳಿಗೆ ಪಾದರಕ್ಷೆಗಳ ಹಾರ ಹಾಕಿ ಅವರನ್ನು ಕಂಬಕ್ಕೆ ಕಟ್ಟಿ ಥಳಿಸಿರುವ ಘಟನೆ ಮಧ್ಯಪ್ರದೇಶದ ಅಶೋಕ್ ನಗರ ಜಿಲ್ಲೆಯ ಕಿಲೋರಾ ಗ್ರಾಮದಲ್ಲಿ ನಡೆದಿದೆ.

ಕೃತ್ಯದ ನಂತರ ತಲೆ ಮರೆಸಿಕೊಂಡಿರುವ ಹತ್ತು ಜನರ ವಿರುದ್ಧ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಮುಂಗೋಲಿ ಠಾಣೆ ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಥಳಿತಕ್ಕೆ ಒಳಗಾದ ದಲಿತ ದಂಪತಿಯ ಪುತ್ರನೊಬ್ಬ, ಹಲ್ಲೆ ನಡೆಸಿರುವ ಆರೋಪಿಗಳಲ್ಲಿ ಒಬ್ಬಾತನ ಪತ್ನಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪವಿದೆ. ಇದರಿಂದಾಗಿ ದಲಿತ ಕುಟುಂಬವು ಗ್ರಾಮವನ್ನು ತೊರೆದಿತ್ತು. ಶುಕ್ರವಾರ ಗ್ರಾಮಕ್ಕೆ ಈ ದಂಪತಿ ಮರಳಿದಾಗ ಹಲ್ಲೆ ನಡೆಸಿದ್ದಾರೆ. ಎಲ್ಲಾ ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರನ್ನು ಪತ್ತೆ ಮಾಡುವ ಪ್ರಯತ್ನ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಸು ಕಳ್ಳಸಾಗಣೆ ಆರೋಪ ವ್ಯಕ್ತಿ ಬೆತ್ತಲೆಗೊಳಿಸಿ ಚಿತ್ರಹಿಂಸೆ

ಗರ್ವಾ (ಪಿಟಿಐ): ಜಾರ್ಖಂಡ್‌ನ ಗರ್ವಾ ಜಿಲ್ಲೆಯಲ್ಲಿ ಹಸು ಕಳ್ಳಸಾಗಣೆ ಮಾಡಿದ ಆರೋಪದ ಮೇಲೆ 60 ವರ್ಷದ ವ್ಯಕ್ತಿಯನ್ನು ವಿವಸ್ತ್ರಗೊಳಿಸಿ ಬೈಕಿಗೆ ಕಟ್ಟಿಕೊಂಡು ಮೂವರು ಎಳೆದೊಯ್ದು ಹಿಂಸಿಸಿರುವುದಾಗಿ ದೂರು ದಾಖಲಾಗಿದೆ. ಪ್ರಕರಣ ಸಂಬಂಧ ಒಬ್ಬ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಅಮ್ರೋರಾ ಗ್ರಾಮದ ಬಳಿ ಈ ಘಟನೆ ನಡೆದಿದೆ. ಸುರ್‌ಸ್ವಾತಿ ರಾಮ್ ಎಂಬುವವರು ಶುಕ್ರವಾರ ಮಧ್ಯಾಹ್ನ ತನ್ನ ಜಾನುವಾರುಗಳೊಂದಿಗೆ ಬನ್ಸಿಧರ್ ನಗರ್ ಉಂಟಾರಿಗೆ ತೆರಳುತ್ತಿದ್ದರು. ಬೈಕ್‌ನಲ್ಲಿದ್ದ ರಾಹುಲ್ ದುಬೆ, ರಾಜೇಶ್ ದುಬೆ ಮತ್ತು ಕಾಶಿನಾಥ್ ಭುಯಾನ್ ಎಂಬುವರು ರಾಮ್ ಅವರನ್ನು ಅಡ್ಡಗಟ್ಟಿ, ಹಸು ಕಳ್ಳಸಾಗಣೆ ಆರೋಪ ಹೊರಿಸಿ, ಬಟ್ಟೆ ಬಿಚ್ಚಿಸಿದ್ದಾರೆ. ನಂತರ ಅವರನ್ನು ಬೈಕಿಗೆ ಕಟ್ಟಿಕೊಂಡು ಸ್ವಲ್ಪದೂರ ಎಳೆದೊಯ್ದು, ರಸ್ತೆಯಲ್ಲೇ ಬಿಟ್ಟು ಪರಾರಿಯಾಗಿದ್ದರು. ಗಾಯಾಳು ರಾಮ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಆರೋಪಿಗಳಲ್ಲಿ ಕಾಶಿನಾಥ್ ಭುಯಾನ್‌ನನ್ನು ಬಂಧಿಸಲಾಗಿದೆ. ಉಳಿದ ಆರೋಪಿಗಳ ಪತ್ತೆಗೆ ಶೋಧ ಮುಂದುವರಿದಿದೆ ಎಂದು ಬನ್ಸಿಧರ್ ನಗರ ಉಂಟಾರಿ ಉಪವಿಭಾಗೀಯ ಪೊಲೀಸ್ ಅಧಿಕಾರಿ ಸತ್ಯೇಂದ್ರ ನಾರಾಯಣ್ ಸಿಂಗ್ ಹೇಳಿದ್ದಾರೆ.

‘ಮೋದಿಗೆ ಮತ ಹಾಕಬಾರದು’ ಹೇಳಿಕೆ: ಶಿಕ್ಷಕ ಜೈಲುಪಾಲು

ಮುಜಾಫರ್‌ಪುರ (ಪಿಟಿಐ): ‘ಮೋದಿಗೆ ಯಾರೂ ಮತ ಹಾಕಬಾರದು’ ಎಂದು ತನ್ನ ತರಗತಿಯಲ್ಲಿ ಮಕ್ಕಳಿಗೆ ಹೇಳಿದ ಆರೋಪದ ಮೇಲೆ ಬಿಹಾರದ ಸರ್ಕಾರಿ ಶಾಲೆಯ ಶಿಕ್ಷಕರೊಬ್ಬರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಈ ಶಿಕ್ಷಕನ ವಿರುದ್ಧ ಜಿಲ್ಲಾ ಶಿಕ್ಷಣಾಧಿಕಾರಿ ದೂರು ನೀಡಿದ ನಂತರ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಮುಜಾಫರ್‌ಪುರದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ರಾಕೇಶ್ ಕುಮಾರ್ ಹೇಳಿದ್ದಾರೆ.

ಕುರ್ಹಾನಿ ಬ್ಲಾಕ್‌ನ ಅಮ್ರಾಖ್‌ನಲ್ಲಿರುವ ಸರ್ಕಾರಿ ಮಾಧ್ಯಮಿಕ ಶಾಲೆಯ ಶಿಕ್ಷಕ ಹರೇಂದ್ರ ರಜಾಕ್ ಅವರು ಈ ರೀತಿ ಹೇಳಿರುವ ಬಗ್ಗೆ ಆ ಶಾಲೆಯ ವಿದ್ಯಾರ್ಥಿಗಳ ಪೋಷಕರು ತಮ್ಮ ಗಮನಕ್ಕೆ ತಂದಿದ್ದಾರೆ ಎಂದು ಜಿಲ್ಲಾ ಶಿಕ್ಷಣ ಅಧಿಕಾರಿ (ಡಿಇಒ) ಅಜಯ್ ಕುಮಾರ್ ಸಿಂಗ್ ಹೇಳಿದ್ದಾರೆ.

‘ಉಚಿತ ಪಡಿತರ ಯೋಜನೆಯಡಿ, ಮನುಷ್ಯರು ತಿನ್ನಲು ಯೋಗ್ಯವಲ್ಲದ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ. ಇದರಿಂದ ಯಾರೂ ಮೋದಿಗೆ ಮತ ಹಾಕಬೇಡಿ’ ಎಂದು ಶಿಕ್ಷಕ ರಜಾಕ್ ಅವರು ತಮ್ಮ ತರಗತಿಯ ಮಕ್ಕಳಿಗೆ ಹೇಳಿರುವುದಾಗಿ, ಮಕ್ಕಳ ಪೋಷಕರು ಲಿಖಿತ ದೂರು ಸಲ್ಲಿಸಿದ್ದಾರೆ’ ಎಂದು ಡಿಇಒ ತಿಳಿಸಿದ್ದಾರೆ.

ಸಂಸತ್ ಭವನ: ಸಿಐಎಸ್‌ಎಫ್‌ನ 3,317 ಯೋಧರ ನಿಯೋಜನೆ



ನವದೆಹಲಿ (ಪಿಟಿಐ): ಸಂಸತ್ ಭವನದ ಸಂಪೂರ್ಣ ಭದ್ರತೆಯನ್ನು ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಸೋಮವಾರದಿಂದ ವಹಿಸಿಕೊಳ್ಳಲಿದೆ.

ಸಂಸತ್ ಭವನದ ಸಂಕೀರ್ಣದಲ್ಲಿ ಸಿಐಎಸ್‌ಎಫ್‌ನ 3,300ಕ್ಕೂ ಹೆಚ್ಚು ಸೈನಿಕರನ್ನು ನಿಯೋಜಿಸಲಾಗಿದೆ. ಇದುವರೆಗೆ ಸಂಸತ್ ಭವನದ ಭದ್ರತೆಯ ಹೊಣೆ ಹೊತ್ತಿದ್ದ ಕೇಂದ್ರ ಮೀಸಲು ರಕ್ಷಣಾ ಪಡೆ (ಸಿಆರ್‌ಪಿಎಫ್) ತನ್ನ 1,400 ಯೋಧರನ್ನು ಹಿಂಪಡೆದಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಸಿಆರ್‌ಪಿಎಫ್‌ನ ಸಂಸತ್ ಕರ್ತವ್ಯ ಗುಂಪು (ಪಿಡಿಜಿ) ತನ್ನ ವಾಹನಗಳು, ಶಸ್ತ್ರಾಸ್ತ್ರಗಳು ಮತ್ತು ಕಮಾಂಡೊಗಳನ್ನು ಸ್ಥಳದಿಂದ ತೆರವುಗೊಳಿಸಿದೆ. ಸಂಸತ್ ಭವನದ ಸಂಕೀರ್ಣದಲ್ಲಿ ತೆರೆದಿದ್ದ ಎಲ್ಲ ಭದ್ರತಾ ಕೇಂದ್ರಗಳನ್ನು ಸಿಐಎಸ್‌ಎಫ್ ತಂಡಕ್ಕೆ ಶುಕ್ರವಾರವೇ ಹಸ್ತಾಂತರಿಸಿದೆ.

ಸಿಐಎಸ್‌ಎಫ್‌ನ 3,317 ಸಿಬ್ಬಂದಿ, ಸಂಸತ್‌ನ ಹಳೆಯ ಹಾಗೂ ಹೊಸ ಭವನದ ಜೊತೆಗೆ ಅದಕ್ಕೆ ಸಂಬಂಧಿಸಿದ ಕಟ್ಟಡಗಳ ಭದ್ರತೆಯನ್ನು ನೋಡಿಕೊಳ್ಳಲಿದ್ದಾರೆ. ಕಳೆದ ವರ್ಷದ ಡಿಸೆಂಬರ್ 13ರಂದು ಸಂಸತ್‌ನಲ್ಲಿ ಭದ್ರತಾ ಲೋಪ ಉಂಟಾದ ನಂತರ ಕೇಂದ್ರ ಸರ್ಕಾರ, ಸಂಸತ್ ಭವನ ಸಂಕೀರ್ಣದ ಭದ್ರತಾ ಹೊಣೆಯನ್ನು ವಹಿಸಿಕೊಳ್ಳುವಂತೆ ಸಿಆರ್‌ಪಿಎಫ್‌ಗೆ ನಿರ್ದೇಶಿಸಿತ್ತು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜ್ಯ ವಿಭಜನೆಯಾಗಿ 10 ವರ್ಷ • ಆಸ್ತಿ ಹಂಚಿಕೆ, ವಿದ್ಯುತ್ ಬಿಲ್ ಬಾಕಿ– ಕಗ್ಗಂಟು

ತೆಲಂಗಾಣ– ಆಂಧ್ರ: ಬಗೆಹರಿಯದ ಸಮಸ್ಯೆ

ಹೈದರಾಬಾದ್ (ಪಿಟಿಐ): ಆಂಧ್ರ ಪ್ರದೇಶ ಮತ್ತು ತೆಲಂಗಾಣ ಪ್ರತ್ಯೇಕ ರಾಜ್ಯಗಳಾಗಿ ಹತ್ತು ವರ್ಷಗಳೇ ಆಗುತ್ತಿವೆ. ಆದರೆ, ಉಭಯ ರಾಜ್ಯಗಳ ನಡುವೆ ಆಸ್ತಿ ಹಂಚಿಕೆ, ವಿದ್ಯುತ್ ಬಿಲ್ ಬಾಕಿ, ನೌಕರರ ವರ್ಗಾವಣೆ ಸೇರಿದಂತೆ ಹತ್ತಾರು ಸಮಸ್ಯೆಗಳು ಬಗೆಹರಿಯದೇ ಕಗ್ಗಂಟಾಗಿಯೇ ಉಳಿದಿವೆ.

ಉಭಯ ರಾಜ್ಯಗಳಿಗೆ ಜಂಟಿ ರಾಜಧಾನಿಯಾಗಿದ್ದ ಹೈದರಾಬಾದ್ ಈ ವರ್ಷದ ಜೂನ್ 2ರಿಂದ ತೆಲಂಗಾಣಕ್ಕೆ ಮಾತ್ರ ರಾಜಧಾನಿಯಾಗಿ ಉಳಿಯಲಿದೆ. ಆಂಧ್ರ ಪ್ರದೇಶ ಪುನರ್ ರಚನೆ ಕಾಯ್ದೆ 2014ರ ಪ್ರಕಾರ ಹೈದರಾಬಾದ್ ಸಂಪೂರ್ಣವಾಗಿ ತೆಲಂಗಾಣ ರಾಜ್ಯಕ್ಕೆ ಸೇರುತ್ತದೆ.

ಕಾಯ್ದೆಯ ಶೆಡ್ಯೂಲ್ 9 ಮತ್ತು 10ರಲ್ಲಿ ಪಟ್ಟಿ ಮಾಡಲಾಗಿರುವ ವಿವಿಧ ಸಂಸ್ಥೆಗಳು ಮತ್ತು ನಿಗಮಗಳ ವಿಭಜನೆ ಸೇರಿ ಹಲವು ವಿಷಯಗಳ ಬಗ್ಗೆ ಎರಡೂ ರಾಜ್ಯಗಳು ಒಮ್ಮತಕ್ಕೆ ಬಂದಿಲ್ಲ ಎಂದು ಮೂಲಗಳು ತಿಳಿಸಿವೆ.

ಆಂಧ್ರಪ್ರದೇಶ ಪುನರ್ ರಚನೆ ಕಾಯ್ದೆ ಪ್ರಕಾರ 9ನೇ ಶೆಡ್ಯೂಲ್‌ನಲ್ಲಿ 89 ಸರ್ಕಾರಿ ಕಂಪನಿಗಳು ಮತ್ತು ನಿಗಮಗಳನ್ನು ಪಟ್ಟಿ ಮಾಡಲಾಗಿದೆ. ಇದರಲ್ಲಿ ಆಂಧ್ರ ಪ್ರದೇಶ ರಾಜ್ಯ ಬೀಜಗಳ ಅಭಿವೃದ್ಧಿ ನಿಗಮ, ಆಂಧ್ರಪ್ರದೇಶ ರಾಜ್ಯ ಕೃಷಿ ಕೈಗಾರಿಕಾ ಅಭಿವೃದ್ಧಿ ನಿಗಮ, ಆಂಧ್ರ ಪ್ರದೇಶ ರಾಜ್ಯ ಉಗ್ರಾಣ ನಿಗಮ ಸೇರಿದಂತೆ ಹಲವು ನಿಗಮಗಳಿವೆ.

ಶೆಡ್ಯೂಲ್ 10ರಲ್ಲಿ ಎಪಿ ಸ್ಟೇಟ್ ಕೋ–ಆಪರೇಟಿವ್ ಯೂನಿಯನ್, ಎನ್ವಿರಾನ್‌ಮೆಂಟ್ ಪ್ರೊಟೆಕ್ಷನ್ ಟ್ರೈನಿಂಗ್ ಅಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಎಪಿ ಫಾರೆಸ್ಟ್ ಅಕಾಡೆಮಿ, ಸೆಂಟರ್ ಫಾರ್ ಗುಡ್ ಗವರ್ನೆನ್ಸ್ ಮತ್ತು ಆಂಧ್ರ ಪ್ರದೇಶ ಪೊಲೀಸ್ ಅಕಾಡೆಮಿ ಸೇರಿ 107 ತರಬೇತಿ ಸಂಸ್ಥೆಗಳು ಬರುತ್ತವೆ.

ಶೆಡ್ಯೂಲ್ 9 ಮತ್ತು 10ರ ಸಂಸ್ಥೆಗಳ ವಿಭಜನೆಗೆ ಸಂಬಂಧಿಸಿದಂತೆ ನಿವೃತ್ತ ಅಧಿಕಾರಿ ಶೀಲಾ ಭಿಡೆ ನೇತೃತ್ವದ ತಜ್ಞರ ಸಮಿತಿಯು ಶಿಫಾರಸುಗಳನ್ನು ಮಾಡಿದ್ದರೂ, ಸಮಸ್ಯೆಗಳು ಪರಿಹಾರವಾಗಿಲ್ಲ.

ವಿಭಜನೆ ಬಳಿಕ ವಿದ್ಯುತ್ ಪೂರೈಕೆಯ ಬಾಕಿ ಪಾವತಿಸುವ ವಿಚಾರದಲ್ಲಿ ಉಭಯ ರಾಜ್ಯಗಳ ನಡುವೆ ಗೊಂದಲಗಳು ಉಳಿದಿವೆ.

ಇಂದು ಸಂಪುಟ ಸಭೆ: ಎರಡೂ ರಾಜ್ಯಗಳ ನಡುವೆ ಬಾಕಿ ಉಳಿದಿರುವ ಸಮಸ್ಯೆಗಳ ಕುರಿತು ಚರ್ಚಿಸಲು ಇದೇ 20ರಂದು (ಸೋಮವಾರ) ತೆಲಂಗಾಣ ರಾಜ್ಯದ ಸಚಿವ ಸಂಪುಟ ಸಭೆ ನಡೆಯಲಿದೆ. ಸಭೆಗೆ ಚುನಾವಣಾ ಆಯೋಗ ಅನುಮತಿ ನೀಡಿದ್ದು, ಸೋಮವಾರ ಮಧ್ಯಾಹ್ನ 3 ಗಂಟೆಗೆ ಮುಖ್ಯಮಂತ್ರಿ ರೇವಂತ ರೆಡ್ಡಿ ನೇತೃತ್ವದಲ್ಲಿ ಸಭೆ ಜರುಗಲಿದೆ.

ಈ ಕುರಿತು ಮೇ 18ರಂದೇ (ಶನಿವಾರ) ಸಂಪುಟ ಸಭೆ ನಡೆಯಲು ಸರ್ಕಾರ ಮುಂದಾಗಿತ್ತು. ಆದರೆ ಚುನಾವಣಾ ಆಯೋಗದಿಂದ ಒಪ್ಪಿಗೆ ಪತ್ರ ದೊರೆಯದ ಕಾರಣ ಸಭೆ ನಡೆದಿರಲಿಲ್ಲ.

ಹಿಂದಿನ ಯುಪಿಎ ಆಡಳಿತದ ಅವಧಿಯಲ್ಲಿ 2014ರ ಫೆಬ್ರುವರಿಯಲ್ಲಿ ಆಂಧ್ರ ಪ್ರದೇಶ ಪುನರ್ ರಚನೆ ಮಸೂದೆಗೆ ಸಂಸತ್ತಿನಲ್ಲಿ ಅಂಗೀಕಾರ ದೊರೆತಿತ್ತು. ಈ ಮೂಲಕ ತೆಲಂಗಾಣ ರಾಜ್ಯವು 2014ರ ಜೂನ್ 2ರಂದು ಅಸ್ತಿತ್ವಕ್ಕೆ ಬಂದಿತು. 10 ವರ್ಷಗಳ ಮಟ್ಟಿಗೆ ಹೈದರಾಬಾದ್ ಅನ್ನು ಎರಡೂ ರಾಜ್ಯಗಳಿಗೆ ರಾಜಧಾನಿಯನ್ನಾಗಿ ಮಾಡಲಾಗಿತ್ತು.

ಟಿಡಿಪಿ ಅಧ್ಯಕ್ಷ ಎನ್. ಚಂದ್ರಬಾಬು ನಾಯ್ಡು ಅವರು ಆಂಧ್ರ ಪ್ರದೇಶದ ಮುಖ್ಯಮಂತ್ರಿಯಾಗಿದ್ದಾಗ ಆಂಧ್ರದ ಸಚಿವಾಲಯ ಮತ್ತು ರಾಜ್ಯಾಡಳಿತದ ಬಹುತೇಕ ಕಚೇರಿಗಳನ್ನು 2016ರಲ್ಲಿ ಅಮರಾವತಿಗೆ ಸ್ಥಳಾಂತರಿಸಿದ್ದರು. ನಾಯ್ಡು ಅವರು ಅಮರಾವತಿಯನ್ನು ವಿಶ್ವದರ್ಜೆಯ ರಾಜಧಾನಿಯಾಗಿ ಅಭಿವೃದ್ಧಿಪಡಿಸುವ ಯೋಜನೆ ಹೊಂದಿದ್ದರು.

ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಅವರು ಮೇ 15ರಂದು ನಡೆಸಿದ್ದ ಸಭೆಯಲ್ಲಿ, 10 ವರ್ಷಗಳ ಅವಧಿಗೆ ಆಂಧ್ರ ಪ್ರದೇಶಕ್ಕೆ ನೀಡಲಾಗಿದ್ದ ಹೈದರಾಬಾದ್‌ನ ಲೇಕ್ ವ್ಯೂ ಸರ್ಕಾರಿ ಅತಿಥಿ ಗೃಹ ಸೇರಿದಂತೆ ಪ್ರಮುಖ ಕಟ್ಟಡಗಳನ್ನು ಸುಪರ್ದಿಗೆ ಪಡೆಯುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದ್ದರು.

ಈ ವರ್ಷದ ಮಾರ್ಚ್‌ನಲ್ಲಿ ಕೇಂದ್ರ ಸರ್ಕಾರವು, ದೆಹಲಿಯ ಆಂಧ್ರಪ್ರದೇಶ ಭವನದ ವಿವಾದವನ್ನು ಬಗೆಹರಿಸಿತ್ತು. ಈ ಕುರಿತು ಎರಡೂ ರಾಜ್ಯಗಳಿಗೆ ಭೂ ಹಂಚಿಕೆ ಮಾಡುವ ಮೂಲಕ ಸಮಸ್ಯೆ ಪರಿಹರಿಸಿತ್ತು.

ನೌಕರರ ಸಮಸ್ಯೆ: ದೊರೆಯದ ಪರಿಹಾರ

ಎರಡೂ ರಾಜ್ಯಗಳ ನಡುವಿನ ನೌಕರರ ವರ್ಗಾವಣೆ ವಿಚಾರದಲ್ಲಿನ ಸಮಸ್ಯೆಗಳಿಗೂ ಅಂತಿಮ ಪರಿಹಾರ ದೊರೆತಿಲ್ಲ. ಆಂಧ್ರಪ್ರದೇಶಕ್ಕೆ ಮಂಜೂರು ಮಾಡಿರುವ ತೆಲಂಗಾಣದ 144 ನೌಕರರನ್ನು ವಾಪಸ್ ಕರೆಸಿಕೊಳ್ಳುವಂತೆ ಮೇ 18ರಂದು ಸರ್ಕಾರಕ್ಕೆ ಮನವಿ ಮಾಡಿರುವುದಾಗಿ ತೆಲಂಗಾಣದ ನಾನ್–ಗೆಜೆಟೆಡ್ ಅಧಿಕಾರಿಗಳ ಒಕ್ಕೂಟದ ಅಧ್ಯಕ್ಷ ಎಂ. ಜಗದೀಶ್ವರ್ ಮಾಹಿತಿ ನೀಡಿದ್ದಾರೆ. ಈ ನೌಕರರು 2014ರಿಂದ ಆಂಧ್ರ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಬಾಕಿ ಉಳಿದಿರುವ ನೌಕರರ ವರ್ಗಾವಣೆ ಮತ್ತು ಆಂಧ್ರ ಪ್ರದೇಶಕ್ಕೆ ವಾಪಸಾತಿಯನ್ನು ಸೌಹಾರ್ದಯುತವಾಗಿ ಬಗೆಹರಿಸುವಂತೆ ತೆಲಂಗಾಣದ ಮುಖ್ಯಮಂತ್ರಿ ರೇವಂತ ರೆಡ್ಡಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಸಾರಿಗೆ ಸಂಸ್ಥೆಯಲ್ಲೂ ಹಂಚಿಕೆಯಾಗದ ಸ್ವತ್ತು

ಸರ್ಕಾರಿ ಸ್ವಾಮ್ಯದ ರಸ್ತೆ ಸಾರಿಗೆ ಸಂಸ್ಥೆಯ ಆಸ್ತಿಗಳ ಬಗ್ಗೆಯೂ ಎರಡೂ ರಾಜ್ಯಗಳ ನಡುವೆ ಭಿನ್ನಾಭಿಪ್ರಾಯಗಳಿವೆ. ಹೈದರಾಬಾದ್‌ನಲ್ಲಿ ಇರುವ ತೆಲಂಗಾಣ ರಾಜ್ಯ ರಸ್ತೆ ಸಾರಿಗೆ ನಿಗಮದ (ಟಿಎಸ್‌ಆರ್‌ಟಿಸಿ) ಆಸ್ತಿಯಲ್ಲಿ ಪಾಲು ನೀಡುವಂತೆ ಆಂಧ್ರ ಪ್ರದೇಶ ಕೇಳಿದೆ. ಆದರೆ, ಅದನ್ನು ಟಿಎಸ್‌ಆರ್‌ಟಿಸಿ ಒಪ್ಪಿಲ್ಲ ಮತ್ತು ನಿರಾಕರಿಸಿದೆ ಎಂದು ನಿಗಮದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶೀಲಾ ಭಿಡೆ ಸಮಿತಿಯ ಶಿಫಾರಸಿನ ಪ್ರಕಾರ, ನಿಗಮದ ಕೇಂದ್ರ ಕಚೇರಿಯ ಸ್ವತ್ತುಗಳು ತನಗೆ ಸೇರಿದ್ದು ಎಂದು ಟಿಎಸ್‌ಆರ್‌ಟಿಸಿ ಪ್ರತಿಪಾದಿಸಿದೆ.

ಬೆಂಗಳೂರಿನ ಯೋಧ ಸಾವು

ಚೆನ್ನೈ (ಪಿಟಿಐ): ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯಲ್ಲಿ (ಸಿಐಎಸ್‌ಎಫ್) ಕಾರ್ಯನಿರ್ವಹಿಸುತ್ತಿದ್ದ ಬೆಂಗಳೂರಿನ ಯೋಧರೊಬ್ಬರು ಶನಿವಾರ ತಮಿಳುನಾಡಿನಲ್ಲಿ ಗುಂಡು ತಗುಲಿ ಮೃತಪಟ್ಟಿದ್ದಾರೆ.

ರವಿಕಿರಣ್(37) ಮೃತಪಟ್ಟ ಯೋಧ. ಕಲ್ಪಕಂನಿಂದ ತಮ್ಮ ತವರೂರು ಬೆಂಗಳೂರಿಗೆ ಶನಿವಾರ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದಾಗ ಈ ಅವಘಡ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರವಿಕಿರಣ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆಯೇ ಅಥವಾ ಆಕಸ್ಮಿಕವಾಗಿ ಗುಂಡು ತಗುಲಿದೆಯೇ ಎನ್ನುವ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೆರಾಯಿನ್ ವಶ

ಗುವಾಹಟಿ(ಪಿಟಿಐ): ಅಸ್ಸಾಂನ ಕಚಾಡ್ ಜಿಲ್ಲೆಯಲ್ಲಿ ₹105 ಕೋಟಿ ಮೌಲ್ಯದ 10 ಕೆ.ಜಿ.ಗೂ ಅಧಿಕ ಹೆರಾಯಿನ್ ವಶಪಡಿಸಿಕೊಳ್ಳಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಭಾನುವಾರ ತಿಳಿಸಿದ್ದಾರೆ.

‘ಮಾದಕ ದ್ರವ್ಯ ಸಾಗಿಸುತ್ತಿದ್ದ ಡ್ರಗ್ಸ್ ಜಾಲವನ್ನು ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಭೇದಿಸಿದ್ದಾರೆ. ನೆರೆಯ ರಾಜ್ಯದಿಂದ ಇದನ್ನು ಸಾಗಿಸಲಾಗುತ್ತಿತ್ತು’ ಎಂದು ಶರ್ಮಾ ಎಕ್ಸ್‌ನಲ್ಲಿ ತಿಳಿಸಿದ್ದಾರೆ.

ವಯೋಮಿತಿ ಸಡಿಲಿಕೆ: ನೇಮಕಾತಿಗಳಲ್ಲೇ ತಾರತಮ್ಯ

ಒಂದನೇ ಪುಟದಿಂದ

ನಂತರದ ವರ್ಷ ರಾಜ್ಯ ಸರ್ಕಾರ ಮೀಸಲಾತಿ ತಿದ್ದುಪಡಿಯನ್ನು ಅನುಷ್ಠಾನಗೊಳಿಸುವ ಸಲುವಾಗಿ ನೇಮಕಾತಿ ಪ್ರಕ್ರಿಯೆ ತಡೆಹಿಡಿದಿತ್ತು.

ಹಾಗಾಗಿ, ಕಾಲಕಾಲಕ್ಕೆ ನೇಮಕಾತಿಗಳು ನಡೆಯದೇ ವಯೋಮಿತಿ ಅಂಚಿನಲ್ಲಿದ್ದ ಅಭ್ಯರ್ಥಿಗಳು ಅವಕಾಶ ವಂಚಿತರಾಗುವ ಸ್ಥಿತಿ ಎದುರಾಗಿದೆ. ಹಾಗಾಗಿ, ರಾಜ್ಯ ಸರ್ಕಾರ ಕೋವಿಡ್ ನಂತರ ನಡೆಯುವ ನೇಮಕಾತಿಗಳಿಗೆ ಒಮ್ಮೆ ಮಾತ್ರ ಅನ್ವಯವಾಗುವಂತೆ ವಯೋಮಿತಿಯಲ್ಲಿ ಗರಿಷ್ಠ ಮೂರು ವರ್ಷಗಳ ಸಡಿಲಿಕೆ ಮಾಡುವ ಭರವಸೆ ನೀಡಿತ್ತು.

ಕೆಲ ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ನೇಮಕಾತಿ ಪ್ರಕ್ರಿಯೆಗಳಿಗೆ 2024ರ ಜನವರಿ ನಂತರ ಚಾಲನೆ ದೊರೆತರೂ, ಸಾರಿಗೆ, ಕೈಗಾರಿಕೆ, ಜಲ ಸಂಪನ್ಮೂಲ, ಕಂದಾಯ, ಭೂಮಾಪನ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ವಿವಿಧ ಸರ್ಕಾರಿ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಹೊರಡಿಸಿರುವ ಅಧಿಸೂಚನೆಗಳಲ್ಲಿ ಈ ಹಿಂದೆ ಇದ್ದಂತೆಯೇ ವಯೋಮಿತಿ ನಿಗದಿ ಮಾಡಲಾಗಿದೆ.

‘ರೈಲ್ವೆ ಇಲಾಖೆಯಲ್ಲಿ ಖಾಲಿ ಇರುವ 9,144 ಹುದ್ದೆಗಳ ಭರ್ತಿಗೆ ಫೆಬ್ರುವರಿ 2024ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ಸಾಮಾನ್ಯ ವರ್ಗಕ್ಕೆ ಗರಿಷ್ಠ 40, ಹಿಂದುಳಿದ ವರ್ಗಗಳಿಗೆ 43 ಹಾಗೂ ಪರಿಶಿಷ್ಟರಿಗೆ 45 ವರ್ಷಗಳನ್ನು ನಿಗದಿ ಮಾಡಿದ್ದಾರೆ. ಆಂಧ್ರಪ್ರದೇಶ, ತೆಲಂಗಾಣ, ಮಧ್ಯ ಪ್ರದೇಶ, ಒಡಿಶಾ, ಮಹಾರಾಷ್ಟ್ರ ಸೇರಿದಂತೆ ಇತರೆ ರಾಜ್ಯಗಳಲ್ಲೂ ವಯೋಮಿತಿ ಸಡಿಲಿಕೆ ಮಾಡಲಾಗಿದೆ. ರಾಜ್ಯದಲ್ಲಿ ಮಾತ್ರ ತಾರತಮ್ಯವಿದೆ. ಎಲ್ಲ ನೇಮಕಾತಿಗಳಿಗೂ ಒಂದೇ ನಿಯಮ ರೂಪಿಸಬೇಕು’ ಎಂದು ಒತ್ತಾಯಿಸುತ್ತಾರೆ ಅಖಿಲ ಕರ್ನಾಟಕ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀಕಾಂತ್.

ವಯೋಮಿತಿ ಸಡಿಲಿಕೆ ನೀಡದೇ ನೇಮಕಾತಿ ಪ್ರಕ್ರಿಯೆ ಆರಂಭಿಸಿರುವ ವಿವಿಧ ಇಲಾಖೆ, ನಿಗಮಗಳ ಹುದ್ದೆಗಳು.

ಇಲಾಖೆ	ಹುದ್ದೆ	ಸಂಖ್ಯೆ
ಸಾರಿಗೆ	ಮೋಟಾರು ವಾಹನ ನಿರೀಕ್ಷಕ	76
ಗ್ರಾಮೀಣಾಭಿವೃದ್ಧಿ	ಪಿಡಿಒ	247
ಕೈಗಾರಿಕೆ ಮತ್ತು ವಾಣಿಜ್ಯ	ವಿಸ್ತರಣಾಧಿಕಾರಿ	63
ಜಲಸಂಪನ್ಮೂಲ	ಸಹಾಯಕ ಎಂಜಿನಿಯರ್	112
ಹಿಂದುಳಿದ ವರ್ಗಗಳ ಕಲ್ಯಾಣ	ತಾಲ್ಲೂಕು ಕಲ್ಯಾಣಾಧಿಕಾರಿ	21
ಕಂದಾಯ	ಗ್ರಾಮ ಆಡಳಿತ ಅಧಿಕಾರಿ	1,000
ಭೂ ಮಾಪನ	ಸಹಾಯಕ ನಿರ್ದೇಶಕ	24
ನಿಗಮ	ಕುಶಲ ಕರ್ಮಿಗಳು	80
ನಿಗಮ	ತಾಂತ್ರಿಕ ಸಹಾಯಕರು	500
ಬಿಬಿಎಂಪಿ	ಸಹಾಯಕ ಎಂಜಿನಿಯರ್	97
ವರ್ಗ	**ಗರಿಷ್ಠ ವಯೋಮಿತಿ (ಕೋವಿಡ್ ಪೂರ್ವ)**	
ಸಾಮಾನ್ಯ ಅಭ್ಯರ್ಥಿಗಳು		35
ಹಿಂದುಳಿದ ವರ್ಗಗಳು		38
ಪ್ರವರ್ಗ–1, ಪರಿಶಿಷ್ಟ ಜಾತಿ, ಪಂಗಡ		40

ಬಹುತೇಕ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅವಧಿ ಮುಗಿದಿದೆ. ತಕ್ಷಣ ನೇಮಕಾತಿ ಪ್ರಕ್ರಿಯೆ ತಡೆಹಿಡಿದು ವಯೋಮಿತಿ ಹೆಚ್ಚಳ ಮಾಡಿದ ನಂತರ ಮರು ಅಧಿಸೂಚನೆ ಹೊರಡಿಸಬೇಕು

ಮಂಜುನಾಥ್, ಉದ್ಯೋಗಾಕಾಂಕ್ಷಿ, ಬೆಂಗಳೂರು.

384 ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ನೇಮಕಾತಿಗೆ ವಯೋಮಿತಿ ಸಡಿಲಿಕೆ ಮಾಡಲಾಗಿದೆ. ಉಳಿದ ನೇಮಕಾತಿಗೆ ತಾರತಮ್ಯ ಮಾಡಲಾಗಿದೆ

ಶ್ರೀಕಾಂತ್, ಅಧ್ಯಕ್ಷ, ಅಖಿಲ ಕರ್ನಾಟಕ ವಿದ್ಯಾರ್ಥಿ ಸಂಘ

ಅಕ್ಷಯಾ, ಸಿದ್ಧಾಂತ್‌ಗೆ ಚಾಂಪಿಯನ್ ಪಟ್ಟ

17 ವರ್ಷದೊಳಗಿನವರ ಚೆಸ್ ಟೂರ್ನಿ: ಪ್ರತೀತಿ, ಆರುಷಿ ರನ್ನರ್ ಅಪ್

ಪ್ರಜಾವಾಣಿ ವಾರ್ತೆ

ಮಂಗಳೂರು: ಉತ್ತರ ಕನ್ನಡ ಜಿಲ್ಲೆಯ ಅಕ್ಷಯಾ ಸಾಥಿ ಮತ್ತು ಬೆಂಗಳೂರಿನ ಸಿದ್ಧಾಂತ್ ಪೂಂಜ ಇಲ್ಲಿ ಭಾನುವಾರ ಮುಕ್ತಾಯಗೊಂಡ ಫಿಡೆ ರೇಟೆಡ್ 17 ವರ್ಷದೊಳಗಿನವರ ಚೆಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕಿಯರ ಮತ್ತು ಮುಕ್ತ ವಿಭಾಗದ ಚಾಂಪಿಯನ್ ಆಗಿ ಹೊರಹೊಮ್ಮಿದರು.

ದಕ್ಷಿಣ ಕನ್ನಡ ಜಿಲ್ಲಾ ಚೆಸ್ ಸಂಸ್ಥೆ, ನಗರದ ಮಿನಿ ಟೌನ್ ಹಾಲ್‌ನಲ್ಲಿ ಆಯೋಜಿಸಿದ್ದ 9 ಸುತ್ತುಗಳ ಟೂರ್ನಿಯ ಬಾಲಕಿಯರ ವಿಭಾಗದಲ್ಲಿ ಅಕ್ಷಯಾ 7.5 ಪಾಯಿಂಟ್‌ಗಳೊಂದಿಗೆ ಅಗ್ರ ಪಟ್ಟ ಅಲಂಕರಿಸಿದರು. ಅವರು 1809 ರೇಟಿಂಗ್ ಪಾಯಿಂಟ್ ಹೊಂದಿದ್ದಾರೆ. ಎರಡು ಡ್ರಾಗಳೊಂದಿಗೆ ಅಜೇಯರಾಗಿ ಉಳಿದ ಸಿದ್ಧಾಂತ್ 8 ಪಾಯಿಂಟ್‌ಗಳನ್ನು ಕಲೆ ಹಾಕಿದರು.

ಐದು ಮತ್ತು ಆರನೇ ಸುತ್ತಿನಲ್ಲಿ ಕ್ರಮವಾಗಿ ವೃಷಾಂಕ್ ರಾಯುಡು ಮತ್ತು ಋಷಿಕೇಶ್ ಗಣಪತಿ ಸುಬ್ರಮಣ್ಯನ್ ಜೊತೆ ಡ್ರಾ ಮಾಡಿಕೊಂಡ ಸಿದ್ಧಾಂತ್ ಕೊನೆಯ ದಿನದ ಮೂರು ಸುತ್ತುಗಳಲ್ಲಿ ಜಯ ಗಳಿಸಿ ಸಂಭ್ರಮಿಸಿದರು. ಪ್ರತೀತಿ ಬಡೋಳಿ ಎರಡನೇ ಸ್ಥಾನ ಗಳಿಸಿದರು.

ಬಾಲಕಿಯರ ವಿಭಾಗದಲ್ಲಿ ಶನಿವಾರ ಅಗ್ರಸ್ಥಾನದಲ್ಲಿ ಇದ್ದ ಏಕೈಕ ಆಟಗಾರ್ತಿ ದಕ್ಷಿಣ ಕನ್ನಡ ಜಿಲ್ಲೆಯ ಆರುಷಿ ಡಿಸಿಲ್ವಾಗೆ ಭಾನುವಾರ ಕೊನೆಯ ಸುತ್ತಿನಲ್ಲಿ ಮಾಯಾ ಅಮೀನ್ ಎದುರು ಡ್ರಾ ಮಾಡಿಕೊಳ್ಳಲಷ್ಟೇ ಸಾಧ್ಯವಾಯಿತು. ಆದರೂ ಅವರ ಖಾತೆಯಲ್ಲಿ 7.5 ಪಾಯಿಂಟ್‌ಗಳು ಇದ್ದವು. ಆದರೆ ಉತ್ತಮ ಟೈಬ್ರೇಕರ್ ಆಧಾರದಲ್ಲಿ ಅಕ್ಷಯಾ ಚಾಂಪಿಯನ್ ಆದರು. ಎಂಟನೇ ಸುತ್ತಿನ ಮುಕ್ತಾಯಕ್ಕೆ 6.5 ಪಾಯಿಂಟ್ ಗಳಿಸಿದ್ದ ಅಕ್ಷಯಾ ಕೊನೆಯ ಸುತ್ತಿನಲ್ಲಿ ಕೃಪಾ ಉಕ್ಕಲಿ ವಿರುದ್ಧ ಜಯ ಗಳಿಸಿದರು. ವಿವಿಧ ವಿಭಾಗಗಳ ವಿಜೇತರು ಮತ್ತು ಸಾಧಕರಿಗೆ ಒಟ್ಟು ₹ 1 ಲಕ್ಷ ಮೊತ್ತದ ನಗದು ಬಹುಮಾನವನ್ನು ವಿತರಿಸಲಾಯಿತು.

ಕೊನೆಯ ಸುತ್ತಿನ ಪ್ರಮುಖ ಫಲಿತಾಂಶಗಳು: 17 ವರ್ಷದೊಳಗಿನ ಬಾಲಕಿಯರ ವಿಭಾಗ: ಅಕ್ಷಯಾ ಸಾಥಿಗೆ ಕೃಪಾ ಉಕ್ಕಲಿ ವಿರುದ್ಧ ಗೆಲುವು. ಶ್ರೀಯಾನಾ ಮಲ್ಯಗೆ ಸಾನ್ವಿತಾ ಶೆಟ್ಟಿ ವಿರುದ್ಧ, ಆದ್ಯಾ ಶೆಟ್ಟಿಗೆ ಆರಾಧ್ಯಾ ಶೆಟ್ಟಿ ವಿರುದ್ಧ ಜಯ; ಮಾಯಾ ಅಮೀನ್ ಮತ್ತು ಆರುಷಿ ಡಿಸಿಲ್ವಾ, ಧನುಷ್ಕಾ ಎಸ್ ಮತ್ತು ಶ್ರೇಯಾ ರಾಜೇಶ್, ಶ್ರದ್ಧಾ ರೈ ಮತ್ತು ಜಾಹ್ನವಿ ನಡುವಿನ ಪಂದ್ಯ ಡ್ರಾ.

17 ವರ್ಷದೊಳಗಿನವರ ಮುಕ್ತ ವಿಭಾಗ: ಸಿದ್ಧಾಂತ್ ಪೂಂಜಾಗೆ ಶ್ರೀಕರ ಡಿ ವಿರುದ್ಧ ಜಯ; ಪ್ರತೀತಿ ಬಡೋಳಿಗೆ ರವೀಶ್ ಕೋಟೆ ವಿರುದ್ಧ, ಸುಶಾಂತ್ ವಿ ಶೆಟ್ಟಿಗೆ ಗುಹನ್ ಹರ್ಷ ವಿರುದ್ಧ, ಹೃಷಿಕೇಶ್ ಗಣಪತಿ ಸುಬ್ರಮಣ್ಯಗೆ ಪ್ರಣವ್ ಪಿ.ಜಿ ವಿರುದ್ಧ ಜಯ; ನಾಗಸಾಯ್ ಕಣರಂ ಮತ್ತು ವಿಹಾನ್ ಸಚ್‌ದೇವ್, ಅನ್ಮೊಲ್ ಪಣಿಕ್ಕರ್ ಮತ್ತು ಅದ್ರಿಜ್ ಭಟಾಚಾರ್ಯ, ರಿತೇಶ್ ಕೆ ಮತ್ತು ಯುಗ್ ತರುಣ್ ನಡುವಿನ ಪಂದ್ಯ ಡ್ರಾ.

ಎರಡೂ ವಿಭಾಗಗಳ ಸಾಧಕರು. ಎಡದಿಂದ: ಬಾಲಕಿರ ವಿಭಾಗ ರನ್ನರ್ ಅಪ್ ಆರುಷಿ ಡಿಸಿಲ್ವಾ, ಚಾಂಪಿಯನ್ ಅಕ್ಷಯಾ ಸಾಥಿ, ಮುಕ್ತ ವಿಭಾಗದ ರನ್ನರ್ ಅಪ್ ಪ್ರತೀತಿ ಹಾಗೂ ಚಾಂಪಿಯನ್ ಸಿದ್ಧಾರ್ಥ್ ಪೂಂಜ –ಪ್ರಜಾವಾಣಿ ಚಿತ್ರ

‘ಜನಪರ ಸರ್ಕಾರದ ಸಾರ್ಥಕ ವರ್ಷ’

ಪ್ರಜಾವಾಣಿ ವಾರ್ತೆ

ರಣದೀಪ್ ಸಿಂಗ್ ಸುರ್ಜೆವಾಲಾ

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರವು ಕರ್ನಾಟಕದಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರುವ ಮೂಲಕ ಒಂದು ವರ್ಷವನ್ನು ಸಾರ್ಥಕವಾಗಿ ಪೂರೈಸಿದೆ’ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ ಹೇಳಿದ್ದಾರೆ.

ಕಾಂಗ್ರೆಸ್ ಸರ್ಕಾರವು ಸೋಮವಾರ ವರ್ಷ ಪೂರೈಸುತ್ತಿರುವ ಪ್ರಯುಕ್ತ ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಕೂಲವು 4.60 ಕೋಟಿ ಜನರನ್ನು ತಲುಪುತ್ತಿದೆ. ಬಡವರು, ರೈತರು, ಕೂಲಿ ಕಾರ್ಮಿಕರು, ಮಹಿಳೆಯರು ಸೇರಿದಂತೆ ಶ್ರಮಿಕ ವರ್ಗದ ಎಲ್ಲ ಜನರಿಗೂ ನಮ್ಮ ಸರ್ಕಾರ ಶಕ್ತಿ ತುಂಬಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೂಲಕ ಜಗತ್ತಿನಲ್ಲೇ ಇತಿಹಾಸ ನಿರ್ಮಿಸಿದೆ’ ಎಂದಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ ನೀಡಿದ್ದ ಭರವಸೆಯಂತೆ ಐದೂ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಕೇಂದ್ರ ಸರ್ಕಾರ ಅಕ್ಕಿ ಒದಗಿಸದೇ ಅಸಹಕಾರ ತೋರಿದ್ದರೂ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನಗದು ವರ್ಗಾಯಿಸುವ ಮೂಲಕ ಅನ್ನ ಭಾಗ್ಯ ಯೋಜನೆ ಜಾರಿಗೊಳಿಸಿ ನುಡಿದಂತೆ ನಡೆಯಲಾಗುತ್ತಿದೆ ಎಂದಿದ್ದಾರೆ.

‘ಕೇಂದ್ರ ಸರ್ಕಾರವು ಬರ ಪರಿಹಾರ ನೀಡುವುದು ವಿಳಂಬ ಮಾಡಿದರೂ ರಾಜ್ಯ ಸರ್ಕಾರ ತಾನೇ ಮೊದಲ ಕಂತಿನ ಪರಿಹಾರ ಪಾವತಿಸಿದೆ. ಆ ಮೂಲಕ ಈ ಸರ್ಕಾರವು ರೈತರ ಪರವಾಗಿದೆ ಎಂಬುದನ್ನು ಸಾಬೀತುಪಡಿಸಿದೆ. ಇದು ರಾಜ್ಯದ ಜನರನ್ನು ಸಶಕ್ತ ಮತ್ತು ಸ್ವಾವಲಂಬಿಗಳನ್ನಾಗಿ ಮಾಡುತ್ತಿರುವ ಸರ್ಕಾರ’ ಎಂದು ಶ್ಲಾಘಿಸಿದ್ದಾರೆ.

ಗೃಹ ಇಲಾಖೆ ‘ಹೈಜಾಕ್’: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೃಹ ಇಲಾಖೆಯು ಜಿ.ಪರಮೇಶ್ವರ ಅವರ ಕೈಯಲ್ಲಿ ಇಲ್ಲ. ಬೇರೆ ಯಾರೋ ಹೈಜಾಕ್ ಮಾಡಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ಭೇಟಿ ಬಳಿಕ ಮಾತನಾಡಿ, ‘ರಾಜ್ಯದಲ್ಲಿ ಕೊಲೆ, ಕಳ್ಳತನ, ದರೋಡೆ ಹೆಚ್ಚಾಗಿದೆ. ಮಳೆ ಸುರಿಯುವುದಕ್ಕಿಂತ ಹೆಚ್ಚು ಕೊಲೆಗಳಾಗುತ್ತಿವೆ’ ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರೌಡಿಗಳು, ಕೊಲೆಗಡುಕರಿಗೆ ಹಬ್ಬ. ರಾಜ್ಯ ಸರ್ಕಾರವೇ ಅಪರಾಧಿ ಸ್ಥಾನದಲ್ಲಿದ್ದು, ಸರ್ಕಾರವನ್ನೇ ಗಲ್ಲಿಗೇರಿಸಬೇಕು ಎಂದು ಕಿಡಿಕಾರಿದರು.

ಪ್ಯಾರಾ ಅಥ್ಲೆಟಿಕ್ಸ್: ನಿಶಾದ್‌ಗೆ ಬೆಳ್ಳಿ, ಪ್ರೀತಿಗೆ ಕಂಚು

ಕೊಬೆ (ಜಪಾನ್) (ಪಿಟಿಐ): ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಭಾರತದ ಹೈಜಂಪ್ ಸ್ಪರ್ಧಿ ನಿಶಾದ್ ಕುಮಾರ್ ಮತ್ತು 200 ಮೀಟರ್ ಓಟಗಾರ್ತಿ ಪ್ರೀತಿ ಪಾಲ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದಿದ್ದಾರೆ.

ಟೋಕಿಯೊ ಪ್ಯಾರಾ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ಕುಮಾರ್ ಪುರುಷರ ಟಿ–47 ವಿಭಾಗದ ಹೈಜಂಪ್ ಫೈನಲ್‌ನಲ್ಲಿ 1.99 ಮೀಟರ್ ಎತ್ತರ ಜಿಗಿದು ಎರಡನೇ ಸ್ಥಾನ ಪಡೆದು ಭಾರತಕ್ಕೆ ಮೊದಲ ಪದಕ ತಂದುಕೊಟ್ಟರು.

ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ 2023ರ ಆವೃತ್ತಿಯಲ್ಲಿ ಕುಮಾರ್ ಇದೇ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದಿದ್ದರು.

ನಿಶಾದ್ ಕುಮಾರ್

ಅಮೆರಿಕದ ರೊಡೆರಿಕ್ ಟೌನ್‌ಸೆಂಡ್ 2.05 ಮೀಟರ್ ಎತ್ತರ ಜಿಗಿದು ಚಿನ್ನ ಗೆದ್ದರು. ಕಣದಲ್ಲಿದ್ದ ಮತ್ತೊಬ್ಬ ಭಾರತೀಯ ರಾಮ್ ಪಾಲ್ 1.90 ಮೀಟರ್ ಕ್ರಮಿಸಿ ಆರನೇ ಸ್ಥಾನ ಪಡೆದರು.

ಮಹಿಳೆಯರ ಟಿ35 ವಿಭಾಗದ 200 ಮೀಟರ್ ಓಟದ ಫೈನಲ್‌ನಲ್ಲಿ ಪ್ರೀತಿ ಪಾಲ್ 30.49 ಸೆಕೆಂಡುಗಳಲ್ಲಿ ಗುರಿ ತಲುಪಿ ಮೂರನೇ ಸ್ಥಾನ ಪಡೆದರು.

ಮಹಿಳೆಯರ ಟಿ20 ವಿಭಾಗದ 400 ಮೀಟರ್ ಓಟದಲ್ಲಿ ದೀಪ್ತಿ ಜೀವನ್‌ಜಿ 56.18 ಸೆಕೆಂಡುಗಳಲ್ಲಿ ಗುರಿ ತಲುಪಿ ಫೈನಲ್‌ಗೆ ಅರ್ಹತೆ ಪಡೆದರು.

ಮೂರನೇ ದಿನದಾಟದ ಅಂತ್ಯಕ್ಕೆ ಚೀನಾ 10 ಚಿನ್ನ, 8 ಬೆಳ್ಳಿ, 8 ಕಂಚಿನೊಂದಿಗೆ ಒಟ್ಟು 26 ಪದಕಗಳನ್ನು ಗೆದ್ದು ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಸದ್ಯ ಭಾರತ 29ನೇ ಸ್ಥಾನದಲ್ಲಿದೆ. ಚಾಂಪಿಯನ್‌ಷಿಪ್ ಮೇ 25ರವರೆಗೆ ಮುಂದುವರಿಯುತ್ತದೆ.

ಕರಾಟೆ: ಐವರಿಗೆ ಪದಕ

ಬೆಂಗಳೂರು: ಜ್ಞಾನಭಾರತಿಯ ಅಶೋಕ ಮಾರ್ಷಲ್ ಆರ್ಟ್ಸ್ ಅಕಾಡೆಮಿಯ ಐವರು ವಿದ್ಯಾರ್ಥಿಗಳು, ಮಲೇಷ್ಯಾದ ಪೆರಕ್‌ನಲ್ಲಿ ಇತ್ತೀಚೆಗೆ ನಡೆದ 20ನೇ ಅಂತರರಾಷ್ಟ್ರೀಯ ಒಕಿನಾವಾ ಗೊಜು ರಿಯು ಓಪನ್ ಕರಾಟೆ ಚಾಂಪಿಯನ್‌ಷಿಪ್‌ನಲ್ಲಿ ಪದಕಗಳನ್ನು ಗೆದ್ದಿದ್ದಾರೆ.

ದೇವರಾಜು ಚಿನ್ನದ ಪದಕ , ಭಕ್ತಿ ಅಶೋಕ್ ರಾಜು ಬೆಳ್ಳಿ ಪದಕ, ಪೂರ್ವಿ, ಹೃಥ್ವಿ ಮತ್ತು ಕೃತಿಕ್ ಎಸ್. ಕಂಚಿನ ಪದಕಗಳನ್ನು ಪಡೆದಿದ್ದಾರೆ ಎಂದು ಕರಾಟೆ ಶಿಕ್ಷಕ ಪ್ರಥಮ್ ತಿಳಿಸಿದ್ದಾರೆ.

ಅಭಿಷೇಕ್ ಅಬ್ಬರ; ‘ಸನ್’ ಗೆಲುವು

ಲೀಗ್ ಹಂತದ ಕೊನೆಯ ಪಂದ್ಯ: ಪಂಜಾಬ್ ಕಿಂಗ್ಸ್ ತಂಡಕ್ಕೆ ಒಂಬತ್ತನೇ ಸ್ಥಾನ

ಹೈದರಾಬಾದ್ (ಪಿಟಿಐ): ಅರ್ಧಡಜನ್ ಸಿಕ್ಸರ್ ಸಿಡಿಸಿದ ಅಭಿಷೇಕ್ ಶರ್ಮಾ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಜಯಿಸಿತು.

ಉಪ್ಪಳದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಭಾನುವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಸನ್‌ರೈಸರ್ಸ್ ತಂಡವು 4 ವಿಕೆಟ್‌ಗಳಿಂದ ಪಂಜಾಬ್ ಕಿಂಗ್ಸ್ ವಿರುದ್ಧ ಜಯಿಸಿತು.

ಆರಂಭಿಕ ಬ್ಯಾಟರ್ ಅಭಿಷೇಕ್ (66; 28ಎ, 4X5, 6X6) ತಂಡದ ಗೆಲುವಿನ ರೂವಾರಿಯಾದರು. ಇದರೊಂದಿಗೆ ಸನ್‌ರೈಸರ್ಸ್ ತಂಡವು ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು. ಪಂಜಾಬ್ ತಂಡವು 9ನೇ ಸ್ಥಾನದಲ್ಲಿ ಉಳಿಯಿತು.

ಟಾಸ್ ಗೆದ್ದ ಪಂಜಾಬ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಅಥರ್ವ್ ತೈಡೆ (46; 27ಎ, 4X5, 6X2) ಹಾಗೂ ಪ್ರಭಸಿಮ್ರನ್ ಸಿಂಗ್ (71; 45ಎ, 4X7, 6X4) ಮೊದಲ ವಿಕೆಟ್ ಜೊತೆಯಾಟದಲ್ಲಿ 97 ರನ್ ಗಳಿಸಿ ಉತ್ತಮ ಆರಂಭ ನೀಡಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 214 ರನ್ ಗಳಿಸಿತು.

ಅರ್ಧಶತಕ ತಪ್ಪಿಸಿಕೊಂಡ ರಿಲಿ ರೂಸೊ (49; 24ಎ, 4X3, 6X4) ಕೂಡ ಮಹತ್ವದ ಕಾಣಿಕೆ ನೀಡಿದರು. ಹಂಗಾಮಿ ನಾಯಕ ಜಿತೇಶ್ ಶರ್ಮಾ (ಅಜೇಯ 32; 15ಎ, 4X2, 6X2) ಕೊನೆಯ ಹಂತದ ಓವರ್‌ಗಳಲ್ಲಿ ಮಿಂಚಿದರು. ಗುರಿ ಬೆನ್ನಟ್ಟಿದ ಸನ್‌ರೈಸರ್ಸ್ ತಂಡದ ಆರಂಭಿಕ ಬ್ಯಾಟರ್ ಟ್ರಾವಿಸ್ ಹೆಡ್ ಅವರನ್ನು ಮೊದಲ ಎಸೆತದಲ್ಲಿಯೇ ಅರ್ಷದೀಪ್ ಸಿಂಗ್ ಕ್ಲೀನ್‌ಬೌಲ್ಡ್ ಮಾಡಿದರು.

ಅಭಿಷೇಕ್ ಜೊತೆಗೂಡಿದ ರಾಹುಲ್ ತ್ರಿಪಾಠಿ (33; 18ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ 72 ರನ್ ಸೇರಿಸಿದರು. ನಂತರ ಬಂದ ನಿತೀಶ್ ರೆಡ್ಡಿ (37 ; 25ಎ) ಹಾಗೂ ಕ್ಲಾಸೆನ್ (42; 26ಎ) ತಂಡವನ್ನು ಜಯದತ್ತ ಮುನ್ನಡೆಸಿದರು.

ಸಂಕ್ಷಿಪ್ತ ಸ್ಕೋರು: ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 214 (ಅಥರ್ವ್ ತೈಡೆ 46, ಪ್ರಭಸಿಮ್ರನ್ ಸಿಂಗ್ 71, ರಿಲಿ ರೊಸೊ 49, ಜಿತೇಶ್ ಶರ್ಮಾ ಔಟಾಗದೆ 32, ಟಿ ನಟರಾಜನ್ 33ಕ್ಕೆ2) ಸನ್‌ರೈಸರ್ಸ್ ಹೈದರಾಬಾದ್: 19.1 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 215 (ಅಭಿಷೇಕ್ ಶರ್ಮಾ 66, ರಾಹುಲ್ ತ್ರಿಪಾಠಿ 33, ನಿತೀಶ್ ರೆಡ್ಡಿ 37, ಹೆನ್ರಿಚ್ ಕ್ಲಾಸೆನ್ 42, ಅರ್ಷದೀಪ್ ಸಿಂಗ್ 37ಕ್ಕೆ2, ಹರ್ಷಲ್ ಪಟೇಲ್ 49ಕ್ಕೆ2) ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ 4 ವಿಕೆಟ್‌ಗಳ ಜಯ. ಪಂದ್ಯಶ್ರೇಷ್ಠ : ಅಭಿಷೇಕ್ ಶರ್ಮಾ

ಸನ್‌ರೈಸರ್ಸ್ ಹೈದರಾಬಾದ್ ತಂಡದ ಅಭಿಷೇಕ್ ಶರ್ಮಾ ಬ್ಯಾಟಿಂಗ್ –ಪಿಟಿಐ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶ ಇಲ್ಲ	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	14	9	3	2	20	1.428
ಸನ್‌ರೈಸರ್ಸ್ ಹೈದರಾಬಾದ್	14	8	5	1	17	0.417
ರಾಜಸ್ಥಾನ ರಾಯಲ್ಸ್	14	8	5	1	17	0.273
ಆರ್‌ಸಿಬಿ	14	7	7	0	14	0.459
ಚೆನ್ನೈ ಸೂಪರ್ ಕಿಂಗ್ಸ್	14	7	7	0	14	0.392
ಡೆಲ್ಲಿ ಕ್ಯಾಪಿಟಲ್ಸ್	14	7	7	0	14	-0.377
ಲಖನೌ ಸೂಪರ್ ಜೈಂಟ್ಸ್	14	7	7	0	14	-0.667
ಗುಜರಾತ್ ಟೈಟನ್ಸ್	14	5	7	2	12	-1.063
ಪಂಜಾಬ್ ಕಿಂಗ್ಸ್	14	5	9	0	10	-0.353
ಮುಂಬೈ ಇಂಡಿಯನ್ಸ್	14	4	10	0	8	-0.318

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (708)

ಪರ್ಪಲ್ ಕ್ಯಾಪ್: ಹರ್ಷಲ್ ಪಟೇಲ್, ಪಂಜಾಬ್ ಕಿಂಗ್ಸ್ (22 ವಿಕೆಟ್)

ಯಶ್‌ಗೆ ಪ್ರಶಸ್ತಿ ಸಮರ್ಪಿಸಿದ ಡುಪ್ಲೆಸಿ

ಆರ್‌ಸಿಬಿ ತಂಡದ ನಾಯಕ ಶನಿವಾರದ ಪಂದ್ಯದಲ್ಲಿ ತಮಗೆ ಲಭಿಸಿದ ಪಂದ್ಯಶ್ರೇಷ್ಠ ಪ್ರಶಸ್ತಿಯನ್ನು ಬೌಲರ್ ಯಶ್ ದಯಾಳ್ ಅವರಿಗೆ ಸಮರ್ಪಿಸಿದ್ದಾರೆ.

ಎಡಗೈ ವೇಗಿ ಯಶ್ ದಯಾಳ್ ಅವರು ಪಂದ್ಯದ ಫಲಿತಾಂಶಕ್ಕೆ ನಿರ್ಣಾಯಕವಾಗಿದ್ದ ಕೊನೆಯ ಓವರ್‌ನಲ್ಲಿ ಒತ್ತಡಕ್ಕೊಳಗಾಗದೇ ಉತ್ತಮವಾಗಿ ಬೌಲಿಂಗ್ ಮಾಡಿದರು. ಇದರಿಂದಾಗಿ ತಂಡವು 27 ರನ್‌ಗಳ ಜಯ ಸಾಧಿಸಲು ಸಾಧ್ಯವಾಯಿತು.

ಮೊದಲು ಬ್ಯಾಟಿಂಗ್ ಮಾಡಿದ್ದ ಅರ್‌ಸಿಬಿಗೆ ಉತ್ತಮ ಆರಂಭವನ್ನು ಡುಪ್ಲೆಸಿ (54; 39ಎ) ಹಾಗೂ ವಿರಾಟ್ ಕೊಹ್ಲಿ (47 ರನ್) ನೀಡಿದ್ದರು. ಡುಪ್ಲೆಸಿ ಅವರ ಅರ್ಧಶತಕವು ಆ ಹಂತದಲ್ಲಿ ತಂಡಕ್ಕೆ ಆಸರೆಯಾಗಿತ್ತು. ಆದ್ದರಿಂದ ತಂಡವು 218 ರನ್ ಗಳಿಸಿತ್ತು. ಗುರಿ ಬೆನ್ನಟ್ಟಿದ್ದ ಚೆನ್ನೈ ತಂಡವನ್ನು ಮಹೇಂದ್ರಸಿಂಗ್ ಧೋನಿ ಮತ್ತು ರವೀಂದ್ರ ಜಡೇಜ ಅವರು ಪ್ಲೇ ಆಫ್ ಸನಿಹಕ್ಕೆ ತಂದಿದ್ದರು. ಆದರೆ ಕೊನೆಯ ಓವರ್‌ನಲ್ಲಿ ಧೋನಿ ವಿಕೆಟ್ ಪಡೆದ ಯಶ್ ದಯಾಳ್ ತಿರುವು ನೀಡಿದ್ದರು.

ಲೋಕಸಭೆ 2024 ಚುನಾವಣೆಯ ಹಂತ ಐದು!

ನಿರ್ಣಾಯಕ ಓವರ್‌ನಲ್ಲಿ ಮಿಂಚಿದ ಎಡಗೈ ವೇಗಿ

ವೈಫಲ್ಯದಿಂದ ಯಶಸ್ಸಿನೆಡೆಗೆ ದಯಾಳ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮಹೇಂದ್ರಸಿಂಗ್ ಧೋನಿ ಅವರು ಯಶ್ ದಯಾಳ್ ಹಾಕಿದ ಕೊನೆಯ ಓವರ್‌ನ ಮೊದಲ ಎಸೆತವನ್ನು ಸಿಕ್ಸರ್‌ಗೆತ್ತಿದರು.

ಆಗ ಕ್ರೀಡಾಂಗಣದಲ್ಲಿದ್ದ ಆರ್‌ಸಿಬಿ ಅಭಿಮಾನಿಗಳಲ್ಲಿ ಆತಂಕದ ಛಾಯೆ ಆವರಿಸಿತು.

ಏಕೆಂದರೆ ; ಒಂದು ವರ್ಷದ ಹಿಂದೆ ಇದೇ ರೀತಿ ಯಶ್ ದಯಾಳ್ ಹಾಕಿದ್ದ ಕೊನೆಯ ಓವರ್‌ನಲ್ಲಿ ರಿಂಕು ಸಿಂಗ್ ಸತತ ಐದು ಸಿಕ್ಸರ್ ಹೊಡೆದಿದ್ದರು.

ಈಗ ಮತ್ತೆ ಅಂತಹದೇ ಪರಿಸ್ಥಿತಿ ಮರುಳಿಸುವ ಆತಂಕ ಕಾಡಿತ್ತು. ಆದರೆ ಹಾಗಾಗಲಿಲ್ಲ. ಯಶ್ ದಯಾಳ್ ಅವರು ಧೋನಿ ವಿಕೆಟ್ ಪಡೆದಿದ್ದಲ್ಲದೇ ಆರ್‌ಸಿಬಿಯ ಗೆಲುವಿನ ರೂವಾರಿಯಾದರು.

ಪಂದ್ಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಯಶ್, ‘ಮೊದಲ ಎಸೆತವನ್ನು (ಧೋನಿ) ಸಿಕ್ಸರ್‌ಗೆತ್ತಿದಾಗ ಎಲ್ಲರೂ ಆ ಘಟನೆ (ರಿಂಕು ಸಿಂಗ್ ಐದು ಸಿಕ್ಸರ್) ನೆನಪಿಸಿಕೊಂಡಿರಬಹುದು. ಆದರೆ ನಾನು ಈ ಆವೃತ್ತಿಯಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿದ್ದೆ. ಆದ್ದರಿಂದ ಆತ್ಮವಿಶ್ವಾಸ ಕುಸಿಯಲಿಲ್ಲ. ನನಗೆ ನಾನೇ ಉತ್ತಮ ಎಸೆತಗಳನ್ನು ಪ್ರಯೋಗಿಸಲು ಹೇಳಿಕೊಳ್ಳುತ್ತಿದ್ದೆ. ಆ ತಂತ್ರವು ಫಲಿಸಿತು’ ಎಂದರು.

ಯಶ್ ದಯಾಳ್

‘ನಾನು ಸ್ಕೋರ್‌ಬೋರ್ಡ್‌ನತ್ತ ನೋಡುವ ಅಗತ್ಯವಿರಲಿಲ್ಲ. ಆ ಹೊತ್ತಿನಲ್ಲಿ ಉತ್ತಮವಾಗಿ ಬೌಲಿಂಗ್ ಮಾಡುವುದರ ಮೇಲಷ್ಟೇ ಸಂಪೂರ್ಣ ಗಮನವಿಟ್ಟಿದ್ದೆ. ಆತ್ಮವಿಶ್ವಾಸದಿಂದ ಆಡಿದ್ದು ಫಲ ನೀಡಿತು’ ಎಂದರು.

‘ಹೋದ ಸಲ ನಾನು ತುಸು ಎದೆಗುಂದಿದ್ದ ಕಾರಣ ವೈಫಲ್ಯ ಅನುಭವಿಸಿದ್ದೆ. ಆದರೆ ಆರ್‌ಸಿಬಿ ಸೇರಿದ ನಂತರ ಮನೋಭಾವ ಬದಲಾಯಿತು’ ಎಂದು ವಿವರಿಸಿದರು.

‘ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಸ್ವಲ್ಪ ವ್ಯತ್ಯಾಸವಾದಾಗ ತಂಡದ ಹಿರಿಯ ಆಟಗಾರರು ಮಾರ್ಗದರ್ಶನ ನೀಡುತ್ತಾರೆ. ಅವರು ನನಗೆ ಬೈಯುವುದಿಲ್ಲ. ಇದರಿಂದ ನನಗೆ ಬಹಳ ನೆರವು ಸಿಕ್ಕಿದೆ’ ಎಂದೂ ಹೇಳಿದರು.

ಈ ಬಾರಿಯ ಟೂರ್ನಿಯಲ್ಲಿ ಯಶ್ ದಯಾಳ್ ಅವರು 13 ಪಂದ್ಯಗಳಿಂದ 15 ವಿಕೆಟ್ ಗಳಿಸಿದ್ದಾರೆ. ‘ಈ ಪಂದ್ಯದಲ್ಲಿ ಮೊದಲೇ ಯೋಜಿಸಿದಂತೆ ನಾನು 19ನೇ ಓವರ್ ಬೌಲಿಂಗ್ ಮಾಡಬೇಕಿತ್ತು. ಆದರೆ ಕೊನೆಯ ಕ್ಷಣದಲ್ಲಿ ದಿನೇಶ್ ಭಯ್ಯಾ (ಕಾರ್ತಿಕ್) ಮತ್ತು ಫಫ್ ಅವರು ಪರಸ್ಪರ ಮಾತನಾಡಿಕೊಂಡರು. ನಂತರ ನನ್ನ ಬಳಿ ಬಂದು ಲಾಕಿ (ಫರ್ಗ್ಯುಸನ್) ಅವರು 19ನೇ ಓವರ್ ಹಾಕಲಿ, ಕೊನೆಯ ಓವರ್ ನನಗೆ ನೀಡುವುದಾಗಿ ಹೇಳಿದರು. ಅದರಂತೆ ಕೊನೆಯ ಓವರ್ ಹಾಕಿದ್ದು ನನ್ನ ಜೀವನದ ಅವಿಸ್ಮರಣೀಯ ಗಳಿಗೆಯಾಯಿತು’ ಎಂದರು.

ಸಿ.ಎಂ ಸಂತಸ

ಸತತ 6ನೇ ಗೆಲುವಿನೊಂದಿಗೆ ನಮ್ಮ ಆರ್‌ಸಿಬಿ ತಂಡವು ಪ್ಲೇಆಫ್ ಸುತ್ತಿಗೆ ಲಗ್ಗೆಯಿಟ್ಟಿದೆ.. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹಾಜರಿದ್ದು ಪಂದ್ಯದ ಪ್ರತಿ ಕ್ಷಣವನ್ನು ಆನಂದಿಸಿದೆ. ನಮ್ಮ ಆರ್‌ಸಿಬಿ ತಂಡದ ಐತಿಹಾಸಿಕ ಗೆಲುವಿನ ಕ್ಷಣಗಳಿಗೆ ಸಾಕ್ಷಿಯಾದುದ್ದು ಖುಷಿಕೊಟ್ಟಿದೆ. ಇದು ಆರ್.ಸಿ.ಬಿ ಯ ಹೊಸ ಅಧ್ಯಾಯ #EeSalaCupNamde

ಸಿದ್ದರಾಮಯ್ಯ,
ಮುಖ್ಯಮಂತ್ರಿ

ಪ್ರಸಾರ ಸಂಸ್ಥೆ ಮೇಲೆ ರೋಹಿತ್ ಗರಂ

ನವದೆಹಲಿ (ಪಿಟಿಐ): ಐಪಿಎಲ್ ಟೂರ್ನಿಯ ಅಧಿಕೃತ ಪ್ರಸಾರ ವಾಹಿನಿಯು ಕ್ರಿಕೆಟಿಗರ ಖಾಸಗಿತನದ ಬದುಕಿನ ಗೌಪ್ಯತೆ ಕಾಪಾಡುವ ನಿಯಮವನ್ನು ಉಲ್ಲಂಘಿಸುತ್ತಿದೆ ಎಂದು ಮುಂಬೈ ಇಂಡಿಯನ್ಸ್ ತಂಡದ ಆಟಗಾರ ರೋಹಿತ್ ಶರ್ಮಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರೋಹಿತ್

‘ಟಿ.ವಿ. ಕ್ಯಾಮೆರಾ ಗಳಿಂದಾಗಿ ಕ್ರಿಕೆಟಿಗರ ಖಾಸಗಿ ಬದುಕು ದುಸ್ತರವಾಗಿದೆ. ಪಂದ್ಯಗಳು ಅಥವಾ ತರಬೇತಿ ಸಂದರ್ಭದಲ್ಲಿ ನಮ್ಮ ಪ್ರತಿಯೊಂದು ಹೆಜ್ಜೆ, ಸ್ನೇಹಿತರು ಹಾಗೂ ಸಹೋದ್ಯೋಗಿಗಳೊಂದಿಗಿನ ಮಾತುಕತೆ ಮತ್ತಿತರ ವಿಷಯಗಳನ್ನು ಸೆರೆ ಹಿಡಿಯಲಾಗುತ್ತಿದೆ‘ ಎಂದು ರೋಹಿತ್ ‘ಎಕ್ಸ್’ನಲ್ಲಿ ಸಂದೇಶ ಹಾಕಿದ್ದಾರೆ.

ಈಚೆಗೆ ರೋಹಿತ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಸಹಾಯಕ ಕೋಚ್ ಅಭಿಷೇಕ್ ನಾಯರ್ ಅವರ ಮಾತುಕತೆಯ ವಿಡಿಯೊವೊಂದು ಹರಿದಾಡಿತ್ತು. ಅದರಲ್ಲಿ ರೋಹಿತ್ ಅವರು ಮುಂಬೈ ಇಂಡಿಯನ್ಸ್ ತಂಡದಲ್ಲಿ ಮುಂದುವರಿಯುತ್ತಾರೋ ಇಲ್ಲವೋ ಎಂಬ ಕುರಿತು ಮಾತುಕತೆ ನಡೆದಿತ್ತು ಎನ್ನಲಾಗಿದೆ. ‘ಮಾತುಕತೆಯನ್ನು ರೆಕಾರ್ಡಿಂಗ್ ಮಾಡದಂತೆ ಸ್ಟಾರ್ ಸ್ಪೋರ್ಟ್ಸ್ ವಾಹಿನಿಯವರಿಗೆ ಮನವಿ ಮಾಡಿದ್ದೆ. ಆದರೂ ಬಿತ್ತರಗೊಳಿಸಿದ್ದರು. ಖಾಸಗಿತನ ಗೌಪ್ಯತೆ ನಿಯಮದ ಉಲ್ಲಂಘನೆಯಾಗಿದೆ’ ಎಂದು ಬರೆದಿದ್ದಾರೆ.

ಸಾತ್ವಿಕ್–ಚಿರಾಗ್‌ಗೆ ಥಾಯ್ಲೆಂಡ್ ಓಪನ್ ಕಿರೀಟ

ಬ್ಯಾಡ್ಮಿಂಟನ್: ಈ ಋತುವಿನಲ್ಲಿ ಎರಡನೇ ಪ್ರಶಸ್ತಿ ಗೆದ್ದ ಭಾರತದ ಜೋಡಿ

ಬ್ಯಾಂಕಾಕ್ (ಪಿಟಿಐ): ವಿಶ್ವದ ಮೂರನೇ ಕ್ರಮಾಂಕದ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಭಾನುವಾರ ಥಾಯ್ಲೆಂಡ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪ್ರಶಸ್ತಿ ಜಯಿಸಿತು.

ಸಾತ್ವಿಕ್-ಚಿರಾಗ್ ಜೋಡಿಯು 21-15, 21-15 ರಿಂದ ಚೀನಾದ ಚೆನ್ ಬೋ ಯಾಂಗ್-ಲಿಯು ಯಿ ಜೋಡಿಯನ್ನು ಸೋಲಿಸಿತು.

ಈ ಋತುವಿನಲ್ಲಿ ಭಾರತದ ಜೋಡಿಗೆ ಇದು ಎರಡನೇ ಪ್ರಶಸ್ತಿ. ಮಾರ್ಚ್‌ನಲ್ಲಿ ಫ್ರೆಂಚ್ ಓಪನ್ ಸೂಪರ್ 750 ಟೂರ್ನಿಯಲ್ಲಿ ಜಯಗಳಿಸಿತ್ತು. ಈ ಜೋಡಿಯು ಮಲೇಷ್ಯಾ ಸೂಪರ್ 1000 ಮತ್ತು ಇಂಡಿಯಾ ಸೂಪರ್ 750 ಟೂರ್ನಿಯಲ್ಲಿ ರನ್ನರ್ ಅಪ್ ಸ್ಥಾನ ಪಡೆದಿತ್ತು.

ಸಾತ್ವಿಕ್ ಮತ್ತು ಚಿರಾಗ್ ಅವರ ವೃತ್ತಿಜೀವನದ ಪ್ರಮುಖ ಘಟ್ಟದಲ್ಲಿ ಈ ಪ್ರಶಸ್ತಿ ಬಂದಿದೆ. ಈ ಜೋಡಿಯು ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಸುತ್ತಿನಲ್ಲಿ ಸೋತಿತ್ತು.

ನಂತರ ಸಾತ್ವಿಕ್ ಗಾಯದಿಂದಾಗಿ ಏಷ್ಯಾ ಚಾಂಪಿಯನ್‌ಷಿಪ್‌ನಿಂದ ಹೊರಗುಳಿಯಬೇಕಾಯಿತು. ಥಾಮಸ್ ಕಪ್ ಅಭಿಯಾನವೂ ಹೆಚ್ಚು ಫಲಪ್ರದವಾಗಲಿಲ್ಲ.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಸಾತ್ವಿಕ್-ಚಿರಾಗ್ ಜೋಡಿ ಲು ಮಿಂಗ್-ಚೆ ಮತ್ತು ಟ್ಯಾಂಗ್ ಕೈ-ವಿ (ಚೀನಾ ತೈಪೆ) ಜೋಡಿಯನ್ನು ನೇರ ಗೇಮ್‌ಗಳಿಂದ ಸೋಲಿಸಿತ್ತು.

ಸಾತ್ವಿಕ್ ಮತ್ತು ಚಿರಾಗ್ 5-1ರ ಮುನ್ನಡೆ ಸಾಧಿಸುವ ಮೂಲಕ ಉತ್ತಮ ಆರಂಭ ನೀಡಿದರು. ಬಳಿಕ ಪುಟಿದೆದ್ದ ಚೀನಾ ಜೋಡಿ 10–7ರಲ್ಲಿ ಮುನ್ನಡೆ ಸಾಧಿಸಿತು.

ಮರು ಹೋರಾಟ ನಡೆಸಿದ ಭಾರತದ ಜೋಡಿ ಆಕರ್ಷಕ ಹೊಡೆತಗಳ ಮೂಲಕ ಲೀಡ್ ಹೆಚ್ಚಿಸಿ, ಎದುರಾಳಿಗೆ ಅವಕಾಶ ನೀಡದೆ ಗೇಮ್ ಗೆದ್ದುಕೊಂಡಿತು.

‘ಇದು ನಮಗೆ ಅದೃಷ್ಟದ ಟೂರ್ನಿಯಾಗಿದೆ. 2019ರಲ್ಲಿ ಈ ಪ್ರಶಸ್ತಿ ಜಯಿಸಿದ್ದೆವು. ಮತ್ತೆ ಈಗ ಗೆದ್ದಿದ್ದೇವೆ. ಮುಂಬರುವ ಪ್ರಮುಖ ಟೂರ್ನಿಗಳಿಗೆ ಇದು ಹೆಚ್ಚಿನ ಉತ್ತೇಜನ ನೀಡುತ್ತದೆ ಎಂದು ಆಶಿಸುತ್ತೇವೆ’ ಎಂದು ಸಾತ್ವಿಕ್ ಗೆಲುವಿನ ನಂತರ ಹೇಳಿದರು.

‘ಪ್ಯಾರಿಸ್ ಒಲಿಂಪಿಕ್ಸ್‌ನಲ್ಲೂ ಉತ್ತಮ ಆಟವಾಡಿ ಪದಕ ಗೆಲ್ಲುತ್ತೇವೆ’ ಎಂದು ಚಿರಾಗ್ ವಿಶ್ವಾಸ ವ್ಯಕ್ತಪಡಿಸಿದರು.

ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ. ಎಎಫ್‌ಪಿ ಚಿತ್ರ

ಎಲಿಮಿನೇಟರ್: ಆರ್‌ಸಿಬಿಗೆ ರಾಜಸ್ಥಾನ ಸವಾಲು

ಮಳೆಯಿಂದ ಕೋಲ್ಕತ್ತ ನೈಟ್ ರೈಡರ್ಸ್ –ರಾಜಸ್ಥಾನ ರಾಯಲ್ಸ್ ಪಂದ್ಯ ರದ್ದು

ಗುವಾಹಟಿ(ಪಿಟಿಐ): ಭಾನುವಾರ ರಾತ್ರಿ ಇಲ್ಲಿ ನಡೆಯಬೇಕಿದ್ದ ರಾಜಸ್ಥಾನ ರಾಯಲ್ಸ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ಪಂದ್ಯವು ಮಳೆಯಿಂದಾಗಿ ರದ್ದಾಯಿತು. ಇದರೊಂದಿಗೆ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆಯುವ ರಾಜಸ್ಥಾನದ ಗುರಿ ಈಡೇರಲಿಲ್ಲ.

ಟೂರ್ನಿಯ ಕೊನೆಯ ಲೀಗ್ ಪಂದ್ಯ ಇದಾಗಿತ್ತು. ಇದೇ 22ರಂದು ಅಹಮದಾಬಾದಿನಲ್ಲಿ ನಡೆಯಲಿರುವ ಎಲಿಮಿನೇಟರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ರಾಜಸ್ಥಾನ ರಾಯಲ್ಸ್ ಎದುರಿಸಲಿದೆ.

ಅಗ್ರಸ್ಥಾನದಲ್ಲಿರುವ ಕೋಲ್ಕತ್ತ ನೈಟ್ ರೈಡರ್ಸ್ ಹಾಗೂ ಎರಡನೇ ಸ್ಥಾನದಲ್ಲಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು 21ರಂದು ನಡೆಯುವ ಮೊದಲ ಕ್ವಾಲಿಫೈಯರ್‌ನಲ್ಲಿ ಮುಖಾಮುಖಿಯಾಗಲಿವೆ. ಈ ಪಂದ್ಯದಲ್ಲಿ ಸೋತ ತಂಡ ಹಾಗೂ ಎಲಿಮಿನೇಟರ್‌ನಲ್ಲಿ ಜಯಿಸಿದ ತಂಡವು 24ರಂದು ಚೆನ್ನೈನಲ್ಲಿ ನಡೆಯುವ ಎರಡನೇ ಕ್ವಾಲಿಫೈಯರ್‌ನಲ್ಲಿ ಹಣಾಹಣಿ ನಡೆಸಲಿವೆ. 26ರಂದು ಫೈನಲ್ ನಡೆಯಲಿದೆ.

ರಾಜಸ್ಥಾನ ತಂಡಕ್ಕೆ ಎರಡನೇ ಸ್ಥಾನ ಪಡೆಯಲು ಈ ಪಂದ್ಯದ ಗೆಲುವು ಮುಖ್ಯವಾಗಿತ್ತು. ಆದರೆ ಸಂಜೆಯಿಂದಲೇ ಮಳೆ ಸುರಿಯಲು ಆರಂಭವಾಯಿತು. ಗುವಾಹಟಿಯು ರಾಜಸ್ಥಾನ ತಂಡಕ್ಕೆ ಎರಡನೇ ತವರು ತಾಣವಾಗಿದೆ.

ಬರ್ಸಪಾರಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಸೇರಿದ್ದ ಪ್ರೇಕ್ಷಕರು ನಿರಾಶೆಗೊಂಡರು. ಸ್ಥಳೀಯ ಹುಡುಗ ರಿಯಾನ್ ಪರಾಗ್ ಆಟ ನೋಡುವ ಆಸೆ ಈಡೇರಲಿಲ್ಲ.

ಗುವಾಹಟಿಯ ಬರ್ಸಪಾರಾ ಕ್ರೀಡಾಂಗಣದಲ್ಲಿ ಸೇರಿದ್ದ ಕ್ರಿಕೆಟ್‌ಪ್ರಿಯರು ರಾಜಸ್ಥಾನ ರಾಯಲ್ಸ್ ತಂಡದ ಆಟಗಾರ ರಿಯಾನ್ ಪರಾಗ್ ಅವರ ಚಿತ್ರದೊಂದಿಗೆ–ಎಎಫ್‌ಪಿ ಚಿತ್ರ

ಪ್ಯಾರಾಲಿಂಪಿಕ್: ತರುಣ್, ಸುಕಾಂತ್, ಸುಹಾಸ್ ಅರ್ಹತೆ

ನವದೆಹಲಿ (ಪಿಟಿಐ): ಪ್ಯಾರಾ ಬ್ಯಾಡ್ಮಿಂಟನ್ ಆಟಗಾರರಾದ ಸುಕಾಂತ್ ಕದಮ್, ತರುಣ್ ಮತ್ತು ಸುಹಾಸ್ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ.

ಮೊದಲ ಬಾರಿಗೆ ಕದಮ್ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿದ್ದು, ಪುರುಷರ ಎಸ್‌ಎಲ್ 4 ವಿಭಾಗದಲ್ಲಿ ಆಡಲಿದ್ದಾರೆ. ಅಲ್ಲದೇ, ತರುಣ್ ಮತ್ತು ಸುಹಾಸ್ ಕೂಡ ಇದೇ ವಿಭಾಗದಲ್ಲಿ ಅರ್ಹತೆ ಪಡೆದಿದ್ದಾರೆ.

ಎಸ್‌ಎಲ್ 3 ಮಹಿಳಾ ವಿಭಾಗದಲ್ಲಿ ಮನ್‌ದೀಪ್ ಕೌರ್ ಹಾಗೂ ಮಿಶ್ರ ಡಬಲ್ಸ್ ಎಸ್‌ಎಲ್ 6 ವಿಭಾಗದಲ್ಲಿ ನಿತ್ಯಾ ಮತ್ತು ಶಿವರಾಜನ್ ಕೂಡ ಸ್ಥಾನ ಪಡೆದಿದ್ದಾರೆ.

ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಆಗಸ್ಟ್ 28 ರಿಂದ ಸೆಪ್ಟೆಂಬರ್ 8 ರವರೆಗೆ ನಡೆಯಲಿದೆ.

ಶೂಟಿಂಗ್: ಮನು ಭಾಕರ್‌ಗೆ ಜಯ

ಮನು ಭಾಕರ್

ಭೋಪಾಲ್ (ಪಿಟಿಐ): ಒಲಿಂಪಿಯನ್ ಮನು ಭಾಕರ್ ಅವರು ಒಲಿಂಪಿಕ್ ಆಯ್ಕೆ ಟ್ರಯಲ್ಸ್‌ನ ಅಂತಿಮ ದಿನವಾದ ಭಾನುವಾರ ಮಹಿಳೆಯರ 10 ಮೀಟರ್ ರೈಫಲ್/ ಏರ್‌ಪಿಸ್ತೂಲ್ ಸ್ಪರ್ಧೆಯಲ್ಲಿ ಜಯಸಿದ್ದಾರೆ. ಒಟ್ಟಾರೆ ಎರಡು ಸ್ಪರ್ಧೆಗಳ ಟ್ರಯಲ್ಸ್ ನಲ್ಲಿ ಮನು ಅವರಿಗೆ ನಾಲ್ಕನೇ ಗೆಲುವು.

ಮಧ್ಯಪ್ರದೇಶದ ರಾಜ್ಯ ಶೂಟಿಂಗ್ ಅಕಾಡೆಮಿ ರೇಂಜ್‌ನಲ್ಲಿ ನಡೆದ 10 ಮೀಟರ್ ಏರ್ ಪಿಸ್ತೂಲ್ ಫೈನಲ್ ನಲ್ಲಿ ಮನು (240.8) ಮೊದಲ ಸ್ಥಾನ ಪಡೆದರೆ, ಏಷ್ಯನ್ ಗೇಮ್ಸ್ ಚಾಂಪಿಯನ್ ಪಲಕ್ ಗುಲಿಯಾ ಎರಡನೇ, ರಿದಮ್ ಸಂಗ್ವಾನ್ ಮೂರನೇ ಸ್ಥಾನ ಗಳಿಸಿದರು. ಇದಕ್ಕೂ ಮುನ್ನ ಎಲವೆನಿಲ್ ವಲರಿವನ್ ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ 254.3 ಅಂಕಗಳೊಂದಿಗೆ ಗೆದ್ದರು.